ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 31 ರೂ. 2.00 30 ಜುಲೈ 1995

ಒಳಪುಟಗಳಲ್ಲಿ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ

ಆರ್ಥಿಕ ನೀತಿಗಳ ವಿರುದ್ಧ ಹೋರಾಟ ಇನ್ನಷ್ಟು ತೀವ್ರ

ಸೆಪ್ಟೆಂಬರ್ 15ರಂದು ದೇಶಾದ್ಯಂತ ಪ್ರತಿಭಟನಾ ರ್‍ಯಾಲಿಗಳು

ಕಳೆದ ನಾಲ್ಕು ವರ್ಷಗಳಲ್ಲಿ ಕಾರ್ಮಿಕರು, ನೌಕರರು, ರೈತರು, ಕೃಷಿಕೂಲಿಕಾರರು ಮಹಿಳೆಯರು, ವಿದ್ಯಾರ್ಥಿ-ಯುವಜನರು ಮತ್ತಿತರ ದುಡಿಯುವ ಜನ ವಿಭಾಗಗಳು ವಿವಿಧ ರೀತೀಗಳಲ್ಲಿ ದೇಶಾದ್ಯಂತ ಪ್ರತಿಭಟಿಸಿದರೂ ಭಾರತ ಸರಕಾರ ತನ್ನ ವಿನಾಶಕಾರಿ ದಾರಿ ಬಿಡುತ್ತಿಲ್ಲ. ಆದ್ದರಿಂದ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ಎಲ್ಲಾ ಹಂತಗಳಲ್ಲಿ ಬಲಿಷ್ಠಗೊಳಿಸಲು "ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ" ಎಲ್ಲಾ ದುಡಿಯುವ ಜನ ವಿಭಾಗಗಳಿಗೆ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಸಕ್ರಿಯ ಗುಂಪುಗಳಿಗೆ, ಪ್ರಜಾಪ್ರಭುತ್ವವಾದಿ ಹಾಗೂ ದೇಶಪ್ರೇಮಿ ವಿಭಾಗಗಳಿಗೆ ಕರೆ ನೀಡಿದೆ. ಜುಲೈ 15ರಂದು ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಸೇರಿದ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶ ಎರಡು ವರ್ಷಗಳ ಹಿಂದೆ ಏಪ್ರಿಲ್ 15, 1993ರಂದು ಸಾಮೂಹಿಕ ಸಂಘಟನೆಗಳ ಮೊದಲ ರಾಷ್ಟ್ರೀಯ ಸಮಾವೇಶ ಅಂಗೀಕರಿಸಿದ ಬೇಡಿಕೆಗಳ ಪಟ್ಟಿಯನ್ನು ಮತ್ತೊಮ್ಮೆ ಒತ್ತಿ ಹೇಳುತ್ತಾ 18 ಬೇಡಿಕೆಗಳನ್ನು ಎತ್ತಿ ಹಿಡಿಯಲು ಒಂದು ದೇಶವ್ಯಾಪಿ ಸಾಮೂಹಿಕ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಆರಂಭಿಸಲು ನಿರ್ಧರಿಸಿದೆ. ಈ ಕಾರ್ಯಕ್ರಮವನ್ನು ಸಂಪೂರ್ಣ ಚೈತನ್ಯದಿಂದ ಜ್ಯಾರಿಗೇ ತರಬೇಕು ಎಂದು ರಾಷ್ಟ್ರೀಯ ವೇದಿಕೆ ಕರೆ ನೀಡಿದೆ. ಸಾಮೂಹಿಕ ಕಾರ್ಯಾಚರಣೆಯ ಕಾರ್ಯಕ್ರಮ ಹೀಗಿದೆ:

i. ಸೆಪ್ಟೆಂಬರ್ ಮಧ್ಯದ ಮೊದಲು ದೇಶಾದ್ಯಂತ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಸಮಾವೇಶಗಳನ್ನು ಈ ರಾಷ್ಟ್ರೀಯ ಸಮಾವೇಶಕ್ಕೆ ಬೆಂಬಲವಾಗಿ ನಡೆಸಿ ಹೊಸ ಆರ್ಥಿಕ ನೀತಿಗಳ ವಿರುದ್ಧ ಒಂದು ಇನ್ನೂ ಬೃಹತ್ ಸ್ವರೂಪದ ಐಕ್ಯ ಹೋರಾಟಕ್ಕೆ ಸಿದ್ಧತೆ ನಡೆಸಬೇಕು.

ii. ಸೆಪ್ಟೆಂಬರ್ 15, 1995ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲೆಯ ಎಲ್ಲಾ ಕಡೆಗಳಿಂದ ಜನಗಳನ್ನು ಅಣಿನೆರೆಸಿ ಪ್ರತಿಭಟನಾ ರ್‍ಯಾಲಿಗಳು. [illegible] ರಾಜ್ಯಗಳ ರಾಜಧಾನಿಗಳಲ್ಲಿ ರಾಜ್ಯದ ಎಲ್ಲಾ ಕಡೆಗಳಿಂದ ಬರುವ [illegible] ಬೃಹತ್ ಮತ ಪ್ರದರ್ಶನಗಳು

iii. ಭಾರತ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಎಲ್ಲಾ ರಾಜ್ಯಗಳಲ್ಲಿ ಅವರವರು ನಿರ್ಧರಿಸಿದ ದಿನಾಂಕಗಳಲ್ಲಿ ಪಾದಯಾತ್ರೆಗಳು

iv. ನವಂಬರ್ ಕೊನೆಯ ವಾರದಲ್ಲಿ ಸಂಸತ್ತಿನ ಮುಂದೆ ಒಂದು ಬೃಹತ್ ಧರಣಿ(ದಿನಾಂಕವನ್ನು ಸಂಸತ್ತಿನ ಚಳಿಗಾಲದ ಅಧಿವೇಶನದ ದಿನಾಂಕಗಳನ್ನು ತಿಳಿಸಿದ ಮೇಲೆ ರಾಷ್ಟ್ರೀಯ ವೇದಿಕೆ ನಿಗದಿಪಡಿಸುತ್ತದೆ). ಅದೇ ದಿನ ದೇಶದೆಲ್ಲೆಡೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಕಚೇರಿಗಳ ಎದುರು ಧರಣಿ.

v. ರಾಷ್ಟ್ರೀಯ ವೇದಿಕೆಯ ಎಲ್ಲಾ ಅಂಗ ಸಂಘಟನೆಗಳಿಂದ ದೇಶವ್ಯಾಪಿ ಕೈಗಾರಿಕಾ ಮತ್ತು ಇತರ ಕಾರ್ಯಾಚರಣೆಗಳಿಗೆ ಸಿದ್ಧತೆ. ದಿನಾಂಕವನ್ನು ರಾಷ್ಟ್ರೀಯ ವೇದಿಕೆ ನಂತರ ನಿರ್ಧರಿಸುತ್ತದೆ.

ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳನ್ನು ಸೋಲಿಸಲು ಮಿಲಿಯಾಂತರ ಜನಗಳನ್ನು ಅಣಿನೆರೆಸುವ ಪ್ರಯತ್ನಗಳನ್ನು ದ್ವಿಗುಣಗೊಳಿಸಬೇಕು, ಇದಕ್ಕೆ ಎಲ್ಲಾ ಪ್ರಜಾಪ್ರಭುತ್ವವಾಗಿ ಜನವಿಭಾಗಗಳು ಎದ್ದು ನಿಲ್ಲುತ್ತವೆ ಎಂಬ ವಿಶ್ವಾಸವನ್ನು ಸಮಾವೇಶ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿ ದೇವೇಗೌಡರ ಜನತಾದರ್ಶನ ಮತ್ತು ಮುಖ್ಯಮಂತ್ರಿ ಜ್ಯೋತಿಬಸುರವರ ಅಧಿಕಾರ ವಿಕೇಂದ್ರೀಕರಣ

- ಎನ್.ಕೆ. ಉಪಾಧ್ಯಾಯ

ರಾಜ್ಯದ ಮೂಲೆಮೂಲೆಗಳಲ್ಲಿಯ ಜನರನ್ನು ಪ್ರತ್ಯಕ್ಷ ಸಂದರ್ಶಿಸಿ, ಅವರ ಅಹವಾಲುಗಳನ್ನು ಸ್ವತಃ ತನ್ನ ಯಿಂದಲೇ ಕೇಳಿ, ಆ ಅಹವಾಲವನ್ನು ತೋಡಿಕೊಳ್ಳುವ ಜನರನ್ನು ಕಣ್ಣು ತುಂಬ ನೋಡಿ ಜನರು ಎದುರಿಸುತ್ತಿರುವ ಸಾವಿರಾರು ಸಮಸ್ಯೆಗಳನ್ನು ಸ್ವಲ್ಪ ಮಟ್ಟಿಗಾದರೂ ತಿಳಿದುಕೊಳ್ಳಬೇಕು ಹಾಗೆಯೇ ಅಭಿವೃದ್ಧಿ ಕಾರ್ಯಗಳತ್ತ ಗಮನ ಹರಿಸಿ, ಜಿಲ್ಲೆಯ ಅಧಿಕಾರಿಗಳೊಡನೆ ಖುದ್ದಾಗಿ ಚರ್ಚೆ ಮಾಡಿ ಆಡಳಿತೆಗೆ ಬಿಗಿ ತರಬೇಕೆಂಬ ಉದ್ದೇಶದಿಂದ ಬಹುಶಃ ಮುಖ್ಯಮಂತ್ರಿ ದೇವೇಗೌಡರು 40 ದಿವಸಗಳ ಸುದೀರ್ಘ ಪ್ರವಾಸ ಹಮ್ಮಿಕ್ಕೊಂಡಿದ್ದಾರೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ ಮೂರು ಗಂಟೆಗೂ ಹೆಚ್ಚು ಸಮಯ ಸಾವಿರಾರು ಜನರ ಅರ್ಜಿ ಸ್ವೀಕರಿಸಿ, ಅವರು ಹೇಳುವುದನ್ನು ಗಮನಕೊಟ್ಟು ಕೇಳಿದ್ದಾರೆ. ಕೃಷ್ಣಾ ಯೋಜನೆಯನ್ನೆಲ್ಲ ವೀಕ್ಷಿಸಿದ್ದಾರೆ.

ದೇವೇಗೌಡರು ಕೈಗೊಂಡಿರುವ ಈ ಜನತಾದರ್ಶನದ ಕಾರ್ಯಕ್ರಮ ಪರವಾಗಿಯೂ ವಿರೋಧವಾಗಿ ಅಭಿಪ್ರಾಯ ಮೂಡಿಬಂದಿದೆ. ಒಂದು ದೃಷ್ಟಿಯಲ್ಲಿ ಅದೂ ಕಾಂಗ್ರೆಸ್ಸಿನಂಥ ಬಂಡವಾಳವಾದಿ ಪಕ್ಷ ಸಂಪೂರ್ಣವಾಗಿ ನಿಷ್ಕ್ರಿಯವಾದ, ಜನವಿರೋಧಿಯಾದ, ಯಾವ ಬೆದರಿಕೆಗೂ, ಚಳುವಳಿಗೂ, ಜನಾಭಿಪ್ರಾಯಕ್ಕೂ ಅಂಜದ, ಸ್ಪಂದಿಸಲು ಆಡಳಿತೆಯನ್ನು ಸೃಷ್ಟಿಸಿ ಜನರ ಮೇಲೆ ಹೇರಿರುವಾಗ ಹೊಸ ಸರಕಾರ ಅಧಿಕಾರಕ್ಕೆ ಬಂದಾಗ ಅಂಥ ಮರದದಿಟ್ಟೆಯನ್ನು ಅಲುಗಾಡಿಸುವುದೂ ಅಸಾಧ್ಯವೆಂದು ಕಂಡಾಗ ಅಂಥ ಆಡಳಿತೆಯನ್ನು ಎಚ್ಚರಗೊಳಿಸುವುದು ಹೊಸ ಆಡಳಿತೆಯ ಜವಾಬ್ದಾರಿಯಾಗಿದೆ. ಆ ದೃಷ್ಟಿಯಲ್ಲಿಯೇ ನಮ್ಮ ರಾಜ್ಯದ ಆಡಳಿತೆಯನ್ನು ಅಲುಗಾಡಿಸಲು ಹೊರಟಿದ್ದಾರೆ ದೇವೇಗೌಡರು. ಅದಕ್ಕಾಗಿ ಜನರ ಮಧ್ಯೆ ಹೋಗಿ ಅವರ ಸಮಸ್ಯೆಗಳು ಎಷ್ಟು ಗಂಭೀರವಾಗಿದೆಯೆಂಬುದನ್ನು ಅಧಿಕಾರಿಗಳಿಗೆ ತೋರಿಸಿಕೊಡಲು ಈ ಕ್ರಮ ಅಗತ್ಯ ಕಂಡಿರಬೇಕು. ಹಾಗಾದರೆ ಹಳಿತಪ್ಪಿರುವ ಆಡಳಿತೆಯಂತ್ರವನ್ನು ಸರಿಪಡಿಸುವುದು ಹೇಗೆ ಎಂಬ ಪ್ರಶ್ನೆ.

ಇದೊಂದೇ ಪರಿಹಾರ ಮಾರ್ಗವೇ?

ಜನರ ವೈಯಕ್ತಿಕ, ಸರ್ವ ಸಾಧಾರಣ, ಸರಕಾರಿ ಧೋರಣೆಗಳ ಕಾರ್ಯ ಜ್ಯಾರಿಯ ಸಮಸ್ಯೆಗಳೆಲ್ಲ ಸ್ಥಳದಲ್ಲೇ ಬಗೆಹರಿಯಬೇಕಲ್ಲದೆ ವಿಧಾನಸೌಧದಲ್ಲಲ್ಲ, ನಿವೇಶನ, ಜನತಾ ಮನೆ, ವೃದ್ಧಾಪ್ಯವೇತನ ಉಪಟಳ, ಮನೆ ಮೇಲೆ ಹಾಯ್ದ ವಿದ್ಯುತ್ತಂತಿ ತೆಗೆಸುವುದು-ಹೀಗೆ ಒಂದೇ ಎರಡೇ ಸಾವಿರಾರು ಪ್ರಶ್ನೆಗಳು ಮುಖ್ಯಮಂತ್ರಿಯವರನ್ನು ಎದುರಿಸಿವೆ. ಬಿಜಾಪುರ, ಗುಲ್ಬರ್ಗದಲ್ಲಿ ನಡೆದ ಜನತಾದರ್ಶನವನ್ನು, ಜನರ ಸಮಸ್ಯೆಗಳನ್ನೂ ದೇವೇಗೌಡರ ಸಂಕಷ್ಟ-ದಣಿವನ್ನು ಕಣ್ಣಾರೆ ಕಂಡೆ. ಮೂರು ಗಂಟೆ 3000 ಅರ್ಜಿ ಸ್ವೀಕರಿಸಿ, ಅದರಲ್ಲಿ ಟಿಪ್ಪಣೆ ಬರೆಯುತ್ತಾ, ಅರ್ಜಿದಾರರ ಅಹವಾಲು ಕೇಳುತ್ತಾ ನಿಂತರೆ ಗತಿ ಏನಾಗುತ್ತದೆ? ದೇವೇಗೌಡರು ಗುಲ್ಬರ್ಗಾದಲ್ಲಿ ಸಿಪಿಐ(ಎಂ) ಪಕ್ಷದ 200 ಕ್ಕೂ ಹೆಚ್ಚು ಜನರನ್ನು ಭೇಟಿ ಮಾಡಿದಾಗ ಮಾರುತಿ ಮಾನ್ಪಡೆಯವರ ಹೆಗಲ ಮೇಲೆ ಭಾರ ಹಾಕಿ ಒಣಗಿ ಬೆಂಡಾದ ಮುಖದಿಂದಲೇ ಮನವಿ ಸ್ವೀಕರಿಸುತ್ತಿರುವುದನ್ನು ಕಂಡೆ. ಹಾಗೆಯೇ ಬಿಜಾಪುರದಲ್ಲಿ 200ಕ್ಕೂ ಹೆಚ್ಚು ಮಹಿಳೆಯರನ್ನೊಳಗೊಂಡ 400 ಜನರ 40ಕ್ಕೂ ಹೆಚ್ಚು ಮನವಿ ಪತ್ರಗಳನ್ನು ಸ್ವೀಕರಿಸಿ ಭೀಮಸಿ ಕಲಾದಗಿಯವರ ವಿವರಣೆಯನ್ನು ಗಮನಕೊಟ್ಟು ಕೇಳುತ್ತಿದ್ದು ನನ್ನ ಕೈ ಮೇಲೆ ಭಾರ ಹಾಕಿ ಕಮ್ಯುನಿಸ್ಟ್ ಪಾರ್ಟಿ ನಮ್ಮ ಗೆಳೆಯ ಪಕ್ಷ ಎಂದು ಉದ್ಗಾರ ತೆಗೆದಾಗ ಅವರ ಬಾಯಿ ಒಣಗಿತ್ತು. ಅವರು ಕುಸಿದು ಬೀಳುವ ಪರಿಸ್ಥಿತಿಯಲ್ಲಿದ್ದರು.

ಮುಖ್ಯಮಂತ್ರಿಯಾಗಿದ್ದವರು ಜಿಲ್ಲಾ, ತಾಲೂಕು ಕೇಂದ್ರಗಳಿಗೆ ಹೋಗಿ ಅಭಿವೃದ್ಧಿ ಕೆಲಸಗಳನ್ನು ವೀಕ್ಷಿಸಬೇಕು. ಜನರ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು. ಇದರ ಕುರಿತು ಕಾಂಗ್ರೆಸ್-ಬಿಜೆಪಿಯ ಹಾಗೆ ಸಿಪಿಐ(ಎಂ) ದೇವೇಗೌಡರನ್ನು ಟೀಕಿಸುವುದಿಲ್ಲ, ಆದರೆ ಆಡಳಿತೆಯನ್ನು ಚುರುಕುಗೊಳಿಸುವ ದಕ್ಕೆ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡಲಿಕ್ಕೆ ಮುಖ್ಯಮಂತ್ರಿಯವರ ಈ ರೀತಿಯ ಜನತಾದರ್ಶನ ಒಂದೇ ಪರಿಹಾರ ಮಾರ್ಗ ಆಗಲಾರದು. ಹಿಂದೆ ಗುಂಡೂರಾಯರೂ, ರಾಮಕೃಷ್ಣ ಹೆಗಡೆಯವರೂ ಅನಂತರ ಕೆಲವು ದಿವಸ ವೀರಪ್ಪ ಮೊಯಿಲಿಯವರು ಇಂಥದ್ದೇ ವಿಕ್ರಮಕ್ಕೆ ಕೈ ಹಾಕಿದ್ದರು. ಆದರೆ ಅದು ಫಲ ನೀಡಿಲ್ಲೆಂದು ಎಲ್ಲರಿಗೂಗೊತ್ತು.

ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದ ಎಡರಂಗ ಸರಕಾರ 18 ವರ್ಷಗಳಿಂದ ಆಡಳಿತೆ ನಡೆಸುತ್ತಿದೆ. ಜ್ಯೋತಿಬಸು ಅವರು 18ವರ್ಷಗಳ ಹಿಂದೆ ಮುಖ್ಯಮಂತ್ರಿಯಾದಾಗ ಈಗ ದೇವೇಗೌಡರು ಎದುರಿಸುತ್ತಿರುವಂಥ ಆಡಳಿತೆಯನ್ನು, ಅಧಿಕಾರಿಗಳನ್ನೇ ಎದುರಿಸಿದ್ದರು. ಆದರೆ ಅವರು 18 ವರ್ಷಗಳಲ್ಲಿ ಒಂದು ವರ್ಷ ಕೂಡ ದೇವೇಗೌಡರ ಹಾಗೆ ಜನತಾದರ್ಶನ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿಲ್ಲ. ಯಾಕೆಂದರೆ ಜನತಾದರ್ಶನದ ಮೂಲಕ ಜನರ ಸಮಸ್ಯೆ ಬಗೆಹರಿಸಬಹುದು, ಆಡಳಿತೆಯನ್ನು ಚೊಕ್ಕಗೊಳಿಸಬಹುದು ಎಂಬುದು ಸುಳ್ಳು. ಹಾಗಾದರೆ ಜ್ಯೋತಿಬಸು ಏನು ಮಾಡಿದರು?

ಅಧಿಕಾರ ವಿಕೇಂದ್ರೀಕರಣದ ದಾರಿಯಿದೆ

ಎಲ್ಲರೂ ಅಧಿಕಾರ ವಿಕೇಂದ್ರೀಕರಣದ ಮಾತುಗಳನ್ನಾಡುತ್ತಾರೆ. ಆದರೆ ಅದು ಕೃತಿಯಲ್ಲಿ ಬರುತ್ತಿಲ್ಲ. ಪಶ್ಚಿಮ ಬಂಗಾಳದ ಸಿಪಿಐ(ಎಂ)

ಪುಟ 8ಕ್ಕೆ

ಬೆಂಗಳೂರು ನಗರದ ಒಂದು ದೊಡ್ಡ ಅಸಂಘಟಿತ ವಲಯವಾದ ಪವರ್‌ಲೂಂಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ತಮ್ಮ ಬದುಕಿಗಾಗಿ ನಡೆಸಿರುವ ಹೋರಾಟ ಇನ್ನೊಂದು ಘಟ್ಟ ತಲುಪಿತು. ಅಂದು ಕಾಂ. ಸೂರಿಯವರ ನೇತೃತ್ವದಲ್ಲಿ 'ವಿಧಾನಸೌಧ'ದತ್ತ ಸಾಗಿರುವ ಪವರ್‌ಲೂಂ ಕಾರ್ಮಿಕರು.. ವರದಿ: ಪುಟ 3



ವರ್ತಮಾನ

ಇತಿಹಾಸ

ಚಾರಿತ್ರಿಕ ಮೌಲ್ಯ ಮಾಪನಕ್ಕೆ ಸಿಡಿಮಿಡಿಗೊಳ್ಳಬೇಕೆ?

-ಸಿಪಿಐ ಮುಖಂಡರಿಗೆ ಸುರ್ಜಿತ್ ಪ್ರಶ್ನೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು ತುರ್ತು ಪರಿಸ್ಥಿತಿಯ ಒಂದು ಚಾರಿತ್ರಿಕ ವಿಶ್ಲೇಷಣೆ ನಡೆಸಿದ ಲೇಖನದಲ್ಲಿ ಸಿಪಿಐನ ಪಾತ್ರದ ಬಗ್ಗೆಯೂ ಬರೆದಿದ್ದರು. ಇದರಿಂದ ಸಿಟ್ಟಿಗೆದ್ದ ಸಿಪಿಐ ಮುಖಂಡ ಚತುರಾನನ ಮಿಶ್ರಾ ನೀಡಿದ ಪತ್ರಿಕಾ ಹೇಳಿಕೆಗೆ ಉತ್ತರವಾಗಿ ಸುರ್ಜಿತ್ ಈ ಕೆಳಗಿನ ಹೇಳಿಕೆಯನ್ನು ಜುಲೈ 8 ರಂದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಾರೆ.

"ನಾವು ಮಾಡಿರುವ ತುರ್ತು ಪರಿಸ್ಥಿತಿಯ ಚಾರಿತ್ರಿಕ ಮೌಲ್ಯಮಾಪನದ ಬಗ್ಗೆ ಚತುರಾನನ್ ಮಿಶ್ರಾರವರ ಆಕ್ರೋಶವನ್ನು ಓದಿ ನನಗೆ ಆಶ್ಚರ್ಯವಾಗಿದೆ. ತುರ್ತು ಪರಿಸ್ಥಿತಿ ಭಾರತೀಯ ಜನತೆಯ ಪ್ರಜಾಪ್ರಭುತ್ವ ಹಕ್ಕಿನ ಮೇಲೆ ನಡೆದಿದ್ದ ಅತ್ಯಂತ ಕೆಟ್ಟ ಧಾಳಿ. ಅದು ಆಳುವ ಪಕ್ಷದ ಒಂದು ಸರ್ವಾಧಿಕಾರಿ ಆಳ್ವಿಕೆಯನ್ನು ದೇಶದ ಮೇಲೆ ಹೇರಿತು. ಭಾರತದ ಜನತೆ ೧೯೭೭ರ ಚುನಾವಣೆಗಳಲ್ಲಿ ಆಳುವ ಪಕ್ಷ ಮತ್ತು ಅದರ ಮಿತ್ರರನ್ನು ಸಂಪೂರ್ಣ ಪರಾಭವಗೊಳಿಸಿ ಅವರಿಗೆ ತಕ್ಕ ಉತ್ತರ ನೀಡಿದರು. ಹಿಂದಿನ ಬೆಳವಣಿಗೆಗಳನ್ನು ಹಾಗೂ ಸನ್ನಿವೇಶವನ್ನು ಪರಿಶೀಲಿಸುತ್ತಾ ಸಿಪಿಐನ ಪಾತ್ರ ದುರದೃಷ್ಟಕರ ಎಂದು ಟಿಪ್ಪಣಿ ಮಾಡದಿರುವುದು ಸಾಧ್ಯವಿರಲಿಲ್ಲ. ಯಾವುದೇ ಕಮ್ಯುನಿಸ್ಟ್‌ನ ನಿಜವಾದ ಗುಣ ಎಂದರೆ ತನ್ನ ಕೊಡುಗೆಗಳೊಂದಿಗೆ ತನ್ನ ತಪ್ಪುಗಳ ಮೌಲ್ಯಮಾಪನ ಮಾಡಲೂ ಆತಶಕ್ತನಾಗಿರಬೇಕು. ಗಂಭೀರ ತಪ್ಪುಗಳನ್ನು ತೋರಿಸಿಕೊಟ್ಟಾಗ ಸಿಡಿಮಿಡಿಗೊಳ್ಳಬಾರದು. ಇಡೀ ವರ್ಗಶಾಮೀಲಿನ ಇತಿಹಾಸವನ್ನು ಹಾಗೂ ಅದರಿಂದ ದೇಶದ ಕಮ್ಯುನಿಸ್ಟ್ ಆಂದೋಲನಕ್ಕಾದ ತೊಂದರೆಯನ್ನು ಪರಿಶೀಲಿಸುವುದು ನನ್ನ ಉದ್ದೇಶವಲ್ಲ. ಚತುರಾನನ್ ಮಿಶ್ರಾರವರ ಮನಸ್ಸಿನಲ್ಲಿ ಏನಾದರೂ ಗೊಂದಲ ಇದ್ದರೆ ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರ ಪತ್ರಿಕೆ 'ನ್ಯೂ ಏಜ್' ಹಾಗೂ ಅವರ ಪಾರ್ಟಿ ದಸ್ತಾವೇಜುಗಳನ್ನು ಪರೀಕ್ಷಿಸಲಿ. ವಾಸ್ತವವಾಗಿ ಅವರ ಮಾತಿಂದ ಹಲವಾರು ಮೂರನೇ ಜಗತ್ತಿನ ದೇಶಗಳಲ್ಲಿ ಪ್ರಗತಿ ಪರ ಆಡಳಿತಗಳನ್ನು ಕಿತ್ತೆಸೆಯುವ ಸಿ.ಐ.ಎ. ಪಿತೂರಿಗಳೊಂದಿಗೆ ಭಾರತದಲ್ಲಿ ತುರ್ತು ಪರಿಸ್ಥಿತಿ ಹೇರಿದ ಸನ್ನಿವೇಶವನ್ನು ಹೋಲಿಸುತ್ತಾ ಅವರು ಈ ವಿಷಯದಲ್ಲಿ ತಾವು ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಸ್.ಯು.)ದ ಪಾತ್ರದ ಬಗ್ಗೆ ತಳೆದ ನಿಲುವು ಸರಿಯೆಂದು ಸಾಬೀತು ಮಾಡಿದಂತಾಗಿದೆ.

ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ನೆರವಾಗುವಲ್ಲಿ ಸೋವಿಯೆತ್ ಒಕ್ಕೂಟ ಹಾಗೂ ಅಲ್ಲಿಯ ಕಮ್ಯುನಿಸ್ಟ್ ಪಕ್ಷದ ಪಾತ್ರದ ಬಗ್ಗೆ ನಮ್ಮ ನಿಲುವು ಏನೆಂಬದು ಚತುರಾನನ್ ಮಿಶ್ರಾರವರಿಗೆ ತಿಳಿದಿಲ್ಲ ಎಂದು ನನಗನಿಸುವುದಿಲ್ಲ. ವಾಸ್ತವವಾಗಿ ಸ್ಟಾಲಿನ್ ರ ಗಂಭೀರ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾ ಫ್ಯಾಸಿಸಂ ವಿರುದ್ಧ ವಿಜಯದಲ್ಲಿ ಅವರ ಪಾತ್ರವನ್ನು ನಿರಾಕರಿಸುವುದು ಅಚಾರಿತ್ರಿಕ ಎಂಬುದು ನಮ್ಮ ಭಾವನೆ. ಈ ವಿಜಯವಿಲ್ಲದಿದ್ದರೆ ವಿಶ್ವದ ಮುಖವೇ ಬೇರೆಯಿರುತ್ತಿತ್ತು.

ಚತುರಾನನ್ ಮಿಶ್ರಾರವರು ತಮ್ಮ ಪಕ್ಷದ ಬಲದ ಬಗ್ಗೆ ಹೇಳಿಕೊಂಡಿರುವ ಸಂಗತಿಗಳನ್ನು ಕುರಿತಂತೆ ಉತ್ತರದ ಅಗತ್ಯವಿಲ್ಲ. ಭಾರತ-ಚೀನಾ ಯುದ್ಧದ ಪ್ರಶ್ನೆಯ ಮೇಲೆ ಅವರು ನಮ್ಮನ್ನು ಟೀಕಿಸುವಾಗ ಆ ಸಮಯದಲ್ಲಿ ಎಬ್ಬಿಸಿದ ಸಂಕುಚಿತ ಭಾವನೆಗಳನ್ನೇ ಈಗ ಮತ್ತೆ ವ್ಯಕ್ತಪಡಿಸಿದ್ದಾರೆ. ಆಗ ಆಳುವ ಪಕ್ಷ ಮತ್ತು ಸಿಪಿಐ ಧಾಳಿಯನ್ನು ಎದುರಿಸಿಯೂ ನಮ್ಮ ಪಕ್ಷ ಭಾರತ-ಚೀನಾ ಗಡಿವಿವಾದವನ್ನು ಮಾತುಕತೆಗಳ ಮೂಲಕ ಪರಿಹರಿಸಬೇಕೇ ಹೊರತು ಯುದ್ಧದ ಮೂಲಕ ಅಲ್ಲ ಎಂಬ ದೃಢ ನಿಲುವು ತಳೆಯಿತು. ಈ ನೀತಿ ಬದ್ಧ ನಿಲುವಿಗಾಗಿ ಆಳುವ ಪಕ್ಷ ನಮ್ಮ ಹಲವು ಸಂಗಾತಿಗಳನ್ನು ಹಲವು ವರ್ಷಗಳ ಕಾಲ ಜೈಲಿನಲ್ಲಿಟ್ಟಿತು. ಇಂದು ನಮ್ಮ ದೇಶ ಆಗ ನಾವು ಪ್ರತಿಪಾದಿಸಿದ ನಿಲುವನ್ನೇ ಒಪ್ಪಿಕೊಂಡಿದೆ.

ಪಶ್ಚಿಮ ಬಂಗಾಳದಲ್ಲಾಗಲೀ, ಬೇರೆಲ್ಲಾಗಲೀ ತಳೆದ ನೀತಿಗಳ ಬಗ್ಗೆ ಯಾವುದೇ ಚರ್ಚೆಯನ್ನು ಆರೋಗ್ಯಕರ ರೀತಿಯಲ್ಲಿ ಅಂತಹ ಚರ್ಚೆಗಳನ್ನು ಕೇವಲ ದೂಷಣೆಯ ಮಟ್ಟಕ್ಕಿಳಿಸದೆ ನಡೆಸಿದರೆ ಪ್ರಯೋಜನಕಾರಿ.

ದಯವಿಟ್ಟು ಹಿಂದಿನ ಯಾವುದೇ ಚಾರಿತ್ರಿಕ ಮೌಲ್ಯಮಾಪನ ಮಾಡುವಾಗ ಹೇಳಿದ ಮಾತುಕತೆಗಳ ಬಗ್ಗೆ ಅಷ್ಟೊಂದು ಸೂಕ್ಷ್ಮವಾಗಿರಬೇಡಿ ಎಂದು ಸಿಪಿಐ ಮುಖಂಡರಿಗೆ ನಾವು ಮನವಿ ಮಾಡುತ್ತೇನೆ. ಎಡ ಐಕ್ಯತೆಗಾಗಿ ನಾವು ಮಾಡದ ಪ್ರಯತ್ನಗಳಿಲ್ಲ. ಸೈದ್ಧಾಂತಿಕ-ರಾಜಕೀಯ ನಿಲುವುಗಳ ಮೌಲ್ಯಮಾಪನ ಈ ಎಡಐಕ್ಯತೆಯನ್ನು ಬೆಳೆಸುವಲ್ಲಿ ಅಡ್ಡಿಯಾಗಬಾರದು.

ನಮ್ಮ ಪಕ್ಷ ಎಡಪಕ್ಷಗಳ ನಡುವೆ ಸಹಕಾರವನ್ನು ಬಲಪಡಿಸುವಲ್ಲಿ ಮುತುವರ್ಜಿ ವಹಿಸಿದೆ. ಈ ಸಹಕಾರದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ನಡುವಿನ ಸಹಕಾರ ಬಹಳ ಮಹತ್ವದ್ದು. ಈಗಿನ ಸನ್ನಿವೇಶದಲ್ಲಿ ಎಡಶಕ್ತಿಗಳನ್ನು ಬಲಪಡಿಸುವುದು ಕ್ಲಿಷ್ಟ ರಾಜಕೀಯ ಸನ್ನಿವೇಶದಲ್ಲಿ ಮಧ್ಯ ಪ್ರವೇಶಿಸಲು ಬಹಳ ಅಗತ್ಯ. ಈ ಜಂಟಿ ಆಂದೋಲನದಲ್ಲಿ ನಮ್ಮ ಸಂಪೂರ್ಣ ಹಾರ್ದಿಕ ಭಾಗವಹಿಸುವಿಕೆ ಇಂತಹ ಪ್ರಯತ್ನಕ್ಕೊಂದು ಸ್ಪಷ್ಟ ಪುರಾವೆ.

ಒಂದು ನೆನಪು

ಆಂತರಿಕ ತುರ್ತು ಪರಿಸ್ಥಿತಿಯ ಕರಾಳ ದಿವಸಗಳು

-ಸಿ. ನಂಜುಂಡಪ್ಪ

ತುರ್ತುಪರಿಸ್ಥಿತಿ ಬಲಪ್ರತಿಗಾಮಿಗಳ ವಿರುದ್ಧ ಒಂದು ಕ್ರಮ ಎಂದು ಇಂದಿರಾಗಾಂಧಿಯವರು ಹೇಳಿಕೊಂಡರು. ಅದು ನಿಜ ಎಂದು ಕೆಲವು 'ಪ್ರಗತಿಪರ' ರೆನಿಸಿಕೊಂಡವರೂ ನಂಬಿದರು. ಕಾರ್ಮಿಕ ವರ್ಗವನ್ನು ನಂಬಿಸಲು ಪ್ರಯತ್ನಿಸಿದರು. ಆದರೆ ಇದು ಶುದ್ಧ ಸುಳ್ಳು, ತುರ್ತು ಪರಿಸ್ಥಿತಿ ದುಡಿಯುವ ಜನರ ಹಕ್ಕುಗಳ ವಿರುದ್ಧ ಎಂದು ಹೇಗೆ ಬೇಗನೇ ಅನುಭವಕ್ಕೆ ಬಂತು ಎಂಬ ಬಗ್ಗೆ ಒಂದು ನೆನಪು

ಇಂದಿರಾಗಾಂಧಿಯವರ ಕಾಂಗ್ರೆಸ್ (ಆರ್) ಸರ್ಕಾರವು ಪ್ರಪಂಚದ ಕಾರ್ಮಿಕ ಚಳುವಳಿಯಲ್ಲಿ ದಾಖಲೆಯನ್ನು ಸ್ಥಾಪಿಸಿದ ಚಾರಿತ್ರಿಕವಾದ ರೈಲ್ವೆ ಕಾರ್ಮಿಕರ ಐಕ್ಯ ಮುಷ್ಕರವನ್ನು ವಿಶೇಷವಾದ ಬರ್ಬರ ದಮನಕಾರಿ ಕ್ರಮಗಳನ್ನು ಪ್ರಯೋಗಿಸಿ ಮರ್ದಿಸಿದ ನಂತರ ಭಾರತದ ಕಾರ್ಮಿಕ ವರ್ಗದ ಮೇಲೆ ಇನ್ನೊಂದು ಗಧಾಪ್ರಹಾರವನ್ನು ಮಾಡಿತು. ಕಾಂಗ್ರೆಸ್(ಆರ್) ಸರ್ಕಾರವು ವೇತನಸ್ತಂಭನ ಸುಗ್ರೀವಾಜ್ಞೆಯನ್ನು ಹೊರಡಿಸಿ ಒಪ್ಪಂದದ ಮೂಲಕ ಹೆಚ್ಚಾದ ಕೂಲಿ/ಸಂಬಳದ ಪೂರ್ಣಭಾಗವನ್ನು, ಹೆಚ್ಚಾದ ತುಟ್ಟಿಭತ್ತೆಯಲ್ಲಿ ಅರೆಪಾಲಿಯನ್ನು ಕಡ್ಡಾಯ ಠೇವಣಿಯಲ್ಲಿ ಇಡಬೇಕೆಂದು ಪ್ರಕಟಿಸಿತು. 1974ರ ಆಗಸ್ಟಿನಲ್ಲಿ ನವದೆಹಲಿಯಲ್ಲಿ ವೇತನಸ್ತಂಭನದ ವಿರುದ್ಧವಾದ ರಾಷ್ಟ್ರೀಯ ಸಮಾವೇಶವೊಂದು ನಡೆದು ರಾಷ್ಟ್ರವ್ಯಾಪಿ ಚಳುವಳಿಗೆ ಕರೆಕೊಟ್ಟಿತು. ಸಮಾವೇಶದಲ್ಲಿ ಭಾಗವಹಿಸಿದ ನಾನು ರಾಜ್ಯದ ವಿವಿಧೆಡೆ ವೇತನಸ್ತಂಭನ ವಿರೋಧಿ ಸಮಾವೇಶಗಳನ್ನು ನಡೆಸುವ ಕಾರ್ಯದಲ್ಲಿ ತೊಡಗಿದೆ.

1972ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೋಸದ ಕ್ರಮಗಳನ್ನು ಅನುಸರಿಸಿ (ರಿಗ್‌ಮಾಡಿ) ಮತದಾನದ ದಿನದಂದು ರಕ್ತದ ಓಕುಳಿಯನ್ನಾಡಿ ಕಾಂಗ್ರೆಸ್(ಆರ್) ಪಕ್ಷವು ಅಧಿಕಾರವನ್ನು ವಹಿಸಿ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಹರಿಬಿಟ್ಟಿದ್ದಿತು. ಅದರ ನಂತರ ಮಧುರೆಯಲ್ಲಿ 1972ರ ಜುಲೈಯಲ್ಲಿ ಜರುಗಿದ ಸಿಪಿಐ(ಎಂ)ನ ಒಂಭತ್ತನೆಯ ಅಧಿವೇಶನವು ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಮೇಲೆ ನಡೆಯುತ್ತಿರುವ ಅರೆಫ್ಯಾಸಿಸ್ಟ್ ದಬ್ಬಾಳಿಕೆಯು ಮುಂದೆ ದೇಶದಲ್ಲಿ ಎಲ್ಲಾ ವಿರೋಧ ಪಕ್ಷಗಳ ಮೇಲೆ, ಪ್ರಜಾಸತ್ತೆಯ ಮೇಲೆ ಬರುವ ಏಕ ಪಕ್ಷದ ಧಾಳಿಯ ಸಂಕೇತವಾಗಿದೆಯೆಂದೂ, ಪ್ರಜಾಪ್ರಭುತ್ವವನ್ನು, ಸಂವಿಧಾನಾತ್ಮಕ ಸ್ವಾತಂತ್ರ್ಯವನ್ನು, ಮತದಾನದ ಹಕ್ಕನ್ನು ರಕ್ಷಿಸಲು ಒಂದಾಗಿ ಹೋರಾಡಬೇಕೆಂದು ಎಲ್ಲಾ ಪ್ರಜಾಪ್ರಭುತ್ವ ಪಕ್ಷಗಳಿಗೆ, ಗುಂಪುಗಳಿಗೆ ಮತ್ತು ವ್ಯಕ್ತಿಗಳಿಗೆ ಕರೆ ಕೊಟ್ಟಿದ್ದಿತು.

ಅರೆಫ್ಯಾಸಿಸ್ಟ್ ದಬ್ಬಾಳಿಕೆಯಿದ್ದ ಕಾಲದಲ್ಲಿ ಎರಡು ಬಾರಿ ಪಶ್ಚಿಮ ಬಂಗಾಳಕ್ಕೆ ಭೇಟಿಕೊಟ್ಟು ಅಲ್ಲಿಯ ವಿದ್ಯಮಾನಗಳನ್ನು ಗಮನಿಸಿದ್ದ ನಾನು ರೈಲ್ವೆ ಮುಷ್ಕರದ ದಮನ, ವೇತನಸ್ತಂಭನ ವಿರೋಧಿ ಸುಗ್ರೀವಾಜ್ಞೆಗಳನ್ನು ಕಂಡಿದ್ದು ಮತ್ತೆ ಕಾಂಗ್ರೆಸ್(ಆರ್) ಸರ್ಕಾರದ ಧಾಳಿಯನ್ನು ನಿರೀಕ್ಷಿಸುತ್ತಿದ್ದೆ. ಆದರೆ ಅದು ಆಂತರಿಕ ತುರ್ತು ಪರಿಸ್ಥಿತಿಯ ರೂಪದಲ್ಲಿ ಬರುವುದು ಎಂದು ತಿಳಿದಿರಲಿಲ್ಲ.

ದೆಹಲಿಗೆ ಹೋಗಲಾಗಲಿಲ್ಲ

ವೇತನ ಸ್ತಂಭನದ ವಿರುದ್ಧವಾದ ಎರಡನೆಯ ರಾಷ್ಟ್ರೀಯ ಸಮಾವೇಶವು 1974ರ ಜೂನ್ 29 ರಂದು ಅದರ ಮರುದಿವಸ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯು ನಡೆಯಲಿದ್ದವು. ನಾನು ಜೂನ್ 25 ರಂದು ಮಂಗಳೂರಿಂದ ಹೊರಟ ಜಯಂತಿ ಜನತಾ ಎಕ್ಸ್ ಪ್ರೆಸ್ ರೈಲಿನಲ್ಲಿ ಪ್ರಯಾಣ ಮಾಡಿದೆ. ಹಿಂದಿನ ರಾತ್ರಿ ನವದೆಹಲಿಗೆ ತಂತಿಯನ್ನು ಕೊಟ್ಟಿದ್ದೆ. ಹಿಂದಿನ ಎರಡು ರಾತ್ರಿಗಳು ನಿದ್ದೆಯಿಲ್ಲದಿದ್ದುದರಿಂದ ರೈಲಿನಲ್ಲಿ ನಾನು ನಿದ್ದೆಗಣ್ಣಿನಲ್ಲಿದ್ದೆ. ರೈಲು ಕಣ್ಣೂರನ್ನು ತಲುಪಿದಾಗ ಘೋಷಣೆಗಳು ಕೇಳಿಸಿದುವು. ನೋಡುವಾಗ ನವದೆಹಲಿಯ ಸಮಾವೇಶಕ್ಕೆ ಹೋಗುವ ಪ್ರತಿನಿಧಿಗಳನ್ನು ಬೀಳ್ಕೊಡಲು ಬಂದಿದ್ದ ಕೆಂಬಾವುಟಗಳನ್ನು ಹಿಡಿದ್ದ ಅನೇಕರು ಎರಡನೆಯ ವೇತನ ಸ್ತಂಭನ ವಿರೋಧಿ ಸಮಾವೇಶಕ್ಕೆ ಜಯವಾಗಲಿ ಮೊದಲಾದ ಘೋಷಣೆಗಳನ್ನು ಕೂಗುತ್ತಿದ್ದರು.

ರೈಲು ಹಳ್ಳಿ ಕೋಟೆಯನ್ನು ತಲುಪಿದಾಗ ನಾನು ಇಳಿದು ಅಂದಿನ 'ಇಂಡಿಯನ್ ಎಕ್ಸ್ ಪ್ರೆಸ್' ಪತ್ರಿಕೆಯನ್ನು ತೆಗೆದುಕೊಂಡೆ. ಅಲಹಾಬಾದ್ ಉಚ್ಚನ್ಯಾಯಾಲಯವು ಇಂದಿರಾಗಾಂಧಿ 1971ರ ಲೋಕಸಭೆ ಚುನಾವಣೆಯಲ್ಲಿ ರೇಬರೇಲಿ ಕ್ಷೇತ್ರದಿಂದ ಗೆದ್ದಿದ್ದುದನ್ನು ಅಸಿಂಧು ಎಂದು ತೀರ್ಪುಕೊಟ್ಟಿದ್ದಿತು. ಆ ತೀರ್ಪಿನಿಂದಾಗಿ ಇಂದಿರಾಗಾಂಧಿಯವರು ರಾಜೀನಾಮೆ ಕೊಡಬೇಕೆಂದು ಒತ್ತಾಯಪಡಿಸಲು ಅವರ ನಿವಾಸದ ಮುಂದೆ ಮರುದಿವಸ ವಿರೋಧಪಕ್ಷಗಳು ಪ್ರದರ್ಶನ ಮಾಡುವುದೆಂದು ಪಿ.ರಾಮಮೂರ್ತಿ ಮತ್ತು ಇತರ ಮುಖಂಡರು ಕೊಟ್ಟ ಹೇಳಿಕೆ ಪ್ರಕಟವಾಗಿದ್ದಿತು. ದೇಶದ ಭವಿಷ್ಯವನ್ನು ರೂಪಿಸುವ ಮಹತ್ತರವಾದ ರಾಜಕೀಯ ಬೆಳವಣಿಗೆಯಾಗುವಾಗ ದೆಹಲಿಗೆ ಹೋಗುತ್ತಿದ್ದೇನಲ್ಲ ಎಂದು ನನಗೆ ಸಂತಸವಾಯಿತು. ರಾತ್ರಿ ರೈಲಿನಲ್ಲಿದ್ದ 'ಡೈನಿಂಗ್ ಕಾರ್'ಗೆ ಊಟ ಮಾಡಲು ಹೋದೆ. ನನ್ನ ಎದುರಿಗೆ ಇಬ್ಬರು ಕೇರಳದ ಪ್ರಯಾಣಿಕರು-ಯುವಕರು ಬಂದು ಕುಳಿತರು. ನನಗೆ ಮಲೆಯಾಳಿ ಭಾಷೆ ಚೂರು-ಪಾರು ಅರ್ಥವಾಗುತ್ತಿದ್ದಿತು. ಅವರ ಮಾತಿನಿಂದ ನವದೆಹಲಿಯಲ್ಲಿ ವಿರೋಧ ಪಕ್ಷಗಳ ಮುಖಂಡರನ್ನು ಬಂಧಿಸಿರುವುದಾಗಿ ತಿಳಿಯಿತು. ಅವರನ್ನು ಕೇಳಿದಾಗ ಅವರು ಕೊಟ್ಟಾಯಂನಿಂದ ನವದೆಹಲಿಗೆ ಹೋಗುತ್ತಿರುವುದಾಗಿಯೂ, ನವದೆಹಲಿಯಲ್ಲಿ ಬಂಧನಗಳಾಗಿರುವ ಸುದ್ದಿ ಇ.ಟಿ.ಟಿ.ಇ.ಯಿಂದ ತಿಳಿಯಿತೆಂದೂ ಹೇಳಿದರು.

ಖಾಲಿ ಸಂಪಾದಕೀಯ

ರಾತ್ರಿ ೮ಗಂಟೆಯಾಗಿದೆ, ರೈಲು ಓಡುತ್ತಿದೆ. ರೇಡಿಯೋ ಸುದ್ದಿಯನ್ನಾದರೂ ಕೇಳಬೇಕೆನಿಸಿತು. ನನ್ನ ಜೀವನದಲ್ಲಿ ಆವರೆವಿಗೆ ನಾನು ಟ್ರಾನ್ಸಿಸ್ಟರ್ ಒಂದನ್ನು ಕೊಂಡು ಕೊಂಡಿರಲಿಲ್ಲ. ನನ್ನ ಸಮೀಪವಿದ್ದ ಯಾವ ಪ್ರಯಾಣಿಕರ ಬಳಿಯೂ ಟ್ರಾನ್ಸಿಸ್ಟರ್ ಇರಲಿಲ್ಲ. ಮತ್ತೆ ಯಾವ ಸುದ್ದಿಯೂ ಸಿಕ್ಕಲಿಲ್ಲ, ಮಲಗಿದೆ, ನಿದ್ದೆ ಬರಲಿಲ್ಲ. ಬೆಳಗ್ಗೆ 6 ಗಂಟೆಗೆ ರೈಲು ವಿಜಯವಾಡ ನಿಲ್ದಾಣವನ್ನು ತಲುಪಿದ ಕೂಡಲೇ ಇಳಿದು ದಿನಪತ್ರಿಕೆಗಾಗಿ ಓಡಿದೆ. ಪತ್ರಿಕೆಯನ್ನು ಕೊಳ್ಳಲು ನೂರಾರು ಜನರ ಗುಂಪು ಇದ್ದಿತು. ಕಷ್ಟಪಟ್ಟು ಒಂದು ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯನ್ನು ಕೊಂಡು ನೋಡಿದೆ. ರಾಷ್ಟ್ರಪತಿ ಫಕ್ರುದೀನ್ ಅಲಿ ಅಹಮದ್ ದೇಶದಲ್ಲಿ ಆಂತರಿಕ ಪರಿಸ್ಥಿತಿಯನ್ನು ಘೋಷಿಸಿದ ಸುದ್ದಿ, ಕಾಂಗ್ರೆಸ್(ಆರ್) ಅಧ್ಯಕ್ಷ ದೇವಕಾಂತ ಬರುವರವರ ಹೇಳಿಕೆಗಳು ಇದ್ದುವು. ಸಂಪಾದಕೀಯ ಖಾಲಿ ಇದ್ದಿತು. ಸುದ್ದಿಗಳು ಅಲ್ಲಲ್ಲಿ ಖಾಲಿ ಇದ್ದವು. ಅಂತಹ ದಿನಪತ್ರಿಕೆಯನ್ನು ಜೀವನದಲ್ಲಿ ಅದೇ ಮೊದಲ ಬಾರಿಗೆ ನೋಡಿದ್ದು. ರೈಲು ಹತ್ತಿ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆವಿಗೆ ಪರಿಚಿತ ಕೇರಳದ ಸಂಗಾತಿಗಳಿಗಾಗಿ ಹುಡುಕಿದೆ, ಒಬ್ಬರೂ ಕಾಣಲಿಲ್ಲ. ಆ ರೈಲಿನಲ್ಲಿ ನವದೆಹಲಿಯವರೆವಿಗೆ ಪ್ರಯಾಣ ಮಾಡುವುದು ಅಗತ್ಯವಿಲ್ಲವೆಂದು, ಹಿಂದಿರುಗಬೇಕೆಂಬ ನಿರ್ಧಾರಕ್ಕೆ ಬಂದೆ. ಇಳಿಯಲು ಸನ್ನದ್ಧನಾದೆ. ಕಾಳಿಪೇಟೆ, ಬಾಲಾರಷಾ, ನಾಗಪುರಗಳ ಪೈಕಿ ಯಾವ ನಿಲ್ದಾಣದಲ್ಲಿ ಇಳಿಯುವುದು ಒಳ್ಳೆಯದು ಎಂದು ವಿಚಾರ ಮಾಡುತ್ತಿರುವಾಗ ರೈಲು ದೋರಣಕಲ್ ನಿಲ್ದಾಣದಲ್ಲಿ ನಿಂತಿತು. ನಾನು ಅಲ್ಲಿಯೇ ಇಳಿದು ಬಿಟ್ಟೆ. ಆ ರೈಲು ನಿಲ್ದಾಣದಲ್ಲಿ ಮಂಕುಕವಿದ ವಾತಾವರಣ ಇದ್ದಿತು. ರೈಲ್ವೇ ನೌಕರರು ಎರಡು ಕಡೆ ಗುಂಪು ಗುಂಪಾಗಿ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಅವರ ಮುಖಗಳು ಕಳಾಹೀನವಾಗಿದ್ದುವು. ಜರ್ನಿ ಬ್ರೇಕ್ ಎಂಡಾರ್ಸ್ ಮೆಂಟ್ ಮಾಡಿಸಿ ಹೈದರಾಬಾದಿಗೆ, ಗುಂಟೂರಿಗೆ ರೈಲು ಎಷ್ಟು ಹೊತ್ತಿಗೆ ಇದೆ ಎಂದು ನೋಡಿ, ಗುಂಟೂರಿಗೆ ಒಂದು ಟಿಕೆಟ್ಟನ್ನು ಕೊಂಡು ಅಲ್ಲಿಯೇ ಕುಳಿತೆ. ಗುಂಟೂರಿಗೆ ಹೋಗುವ ರೈಲು ಬಂದ ಕೂಡಲೇ ಆ ರೈಲನ್ನು ಹತ್ತಿ ಗುಂಟೂರು ತಲುಪಿ, ಸಂಜೆ ಅಲ್ಲಿಂದ ಗುಂತಕಲ್ಲಿಗೆ ಹೊರಡುವ ರೈಲಿನಲ್ಲಿ ಒಂದು ಬರ್ತ್ ಕಾದಿರಿಸಿ ಅಲ್ಲಿಯೇ ಕಾದೆ. ಆಂತರಿಕ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಗುಂಟೂರಿನಲ್ಲಿ ಒಂದು ಮೆರವಣಿಗೆ ಹೋಗಿತ್ತೆಂದು ಅಲ್ಲಿ ತಿಳಿಯಿತು.

ಸಂಜೆ ನನ್ನ ಬೋಗಿಯಲ್ಲಿ ಜತೆಯಲ್ಲಿದ್ದ ಪ್ರಯಾಣಿಕರು ಆಂತರಿಕ ತುರ್ತು ಪರಿಸ್ಥಿತಿ ಹೇರಿದ್ದುದನ್ನು ಕುರಿತು ತೆಲುಗು ಭಾಷೆಯಲ್ಲಿ ಮಾತನಾಡುತ್ತಿದ್ದರು. ಒಬ್ಬರು ಮಾತ್ರ ಏನನ್ನೂ ಮಾತನಾಡುತ್ತಿರಲಿಲ್ಲ. ತರುವಾಯ ತಿಳಿಯಿತು. [illegible] ನ್ಯಾಯಾಧೀಶರೆಂದು. ಮಾತನಾಡುತ್ತಿರುವವರಲ್ಲಿ ಒಬ್ಬರು ನನ್ನ ಬಗ್ಗೆ ಮತ್ತು ನನ್ನ ಪ್ರಯಾಣದ ಬಗ್ಗೆ ವಿಚಾರಿಸಿದರು. ನಾನು ಒಬ್ಬ ಸಮಾಜಸೇವಕನೆಂದು ಹೇಳಿ, ಗುಂತಕಲ್ಲಿಗೆ ಹೋಗಿ ಅಲ್ಲಿಂದ ಹಿಂದೂಪುರಕ್ಕೆ ಹೋಗುವುದಾಗಿ ಹೇಳಿದೆ. ಅವರು ರೈಲು ಮರುದಿವಸ ಮಧ್ಯಾಹ್ನ ಗುಂತಕಲ್ಲು ತಲುಪುವುದೆಂದೂ, ದ್ರೋಣಾಚಲಂನಲ್ಲಿ ಇಳಿದರೆ ಅಲ್ಲಿಂದ ಕೂಡಲೇ ಅನಂತಪುರಕ್ಕೆ ಬಸ್ ಸಿಕ್ಕುವುದೆಂದೂ, ಅಲ್ಲಿಂದ ಬಸ್ಸಿನಲ್ಲಿ ಹೋದರೆ ಬೇಗ ಹಿಂದುಪುರವನ್ನು ತಲುಪಬಹುದೆಂದೂ ಹೇಳಿದರು. ರೈಲು ಬೆಳಗ್ಗೆ 7.30ಕ್ಕೆ ದ್ರೋಣಾಚಲಂ ತಲುಪಿತು. ಅಲ್ಲಿ ಇತರರೊಂದಿಗೆ ಅನಂತಪುರಕ್ಕೆ ಹೋಗುವ ಬಸ್ ಹತ್ತಿದೆ. ಸ್ವಲ್ಪ ದೂರ ಹೋದ ನಂತರ ಪಂಕ್ಚರ್ ಆಗಿ ಬಸ್ ನಿಂತು ಹೋಯಿತು. ರಿಪೇರಿಯಾಗಿ ಬಸ್ ಅನಂತಪುರವನ್ನು ತಲುಪಿದ ಕೂಡಲೇ ಬೆಂಗಳೂರಿಗೆ ಹೋಗುವ ಒಂದು ಬಸ್ ಹತ್ತಿ ಕೋಲಾರ ಜಿಲ್ಲೆಯನ್ನು ಪ್ರವೇಶಿಸಿ ರಾತ್ರಿ ಗೆಳೆಯರೊಬ್ಬರ ಮನೆಗೆ ಹೋದೆ. ಅನಂತರ ಆಗಾಗ್ಗೆ ಅವರ ಮನೆಗೆ ಹೋಗುತ್ತಿದ್ದೆ. ಮೂರು ತಿಂಗಳ ನಂತರ ಪೋಲೀಸರು ಅವರ ಮನೆಯನ್ನು ರೈಯ್ಡ್ ಮಾಡಿ ನನ್ನ ಬಗ್ಗೆ ವಿಚಾರಿಸಿದರು. ಅದರ ಪರಿಣಾಮ ನನಗೆ ಇದ್ದ ಒಂದು ತಂಗುದಾಣ ಅಲಭ್ಯವಾಯಿತು.

ಒಂದೆರೆಡು ದಿವಸಗಳ ನಂತರ ಬೆಂಗಳೂರನ್ನು ತಲುಪಿದೆ.

(ಮುಂದಿನ ವಾರಕ್ಕೆ)

ಅಸಂಘಟಿತ ಕಾರ್ಮಿಕ ವಲಯದ ಒಂದು ಯಶಸ್ವಿ ಮುಷ್ಕರ ಪವರ್‌ಲೂಂ ಕನಿಷ್ಠ ಕೂಲಿ ಕರಡು ಬಿಡುಗಡೆ

ಇದೇ ಜುಲೈ 10ರಂದು ಬೆಂಗಳೂರಿನ ಒಂದು ದೊಡ್ಡ ಅಸಂಘಟಿತ ಕಾರ್ಮಿಕ ವಲಯವಾದ ವಿದ್ಯುತ್ ಮಗ್ಗಗಳ ಕಾರ್ಮಿಕರು ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಸಿಐಟಿಯು ಅಡಿಯಲ್ಲಿ ಒಂದು ದಿನದ ಮುಷ್ಕರ ಮತ್ತು ವಿಧಾನಸೌಧ ಚಲೋವನ್ನು ನಡೆಸಿದರು.

ಮೂರು-ನಾಲ್ಕು ತಿಂಗಳುಗಳಿಂದ ತಮ್ಮ ಬೇಡಿಕೆಗಳಾದ ಕನಿಷ್ಠ ಕೂಲಿ, ವಿದ್ಯುತ್ ಮಗ್ಗಗಳನ್ನು ಕಾರ್ಖಾನೆಯಡಿಯಲ್ಲಿ ತರುವುದು, ಇ.ಎಸ್.ಐ, ಪಿ.ಎಫ್., ಹಬ್ಬದ ರಜೆ, ಹಕ್ಕಿನ ರಜೆಗಾಗಿ ಹೋರಾಟ ನಡೆಸುತ್ತಿದ್ದರು. ಈ ಮುಷ್ಕರವನ್ನು ವಿಫಲಗೊಳಿಸಲು ಸರ್ಕಾರ ಮತ್ತು ಮಾಲೀಕರು ಮಗ್ಗಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಾದ ಕಬ್ಬನ್‌ಪೇಟೆ, ಸಂಪಂಗಿರಾಮ ನಗರ, ಸುಧಾಮನಗರ, ವಿನಾಯಕ ನಗರ ಹಾಗೂ ಶ್ರೀರಾಮಪುರ ಮುಂತಾದ ಪ್ರದೇಶಗಳಲ್ಲಿ ಪೋಲೀಸರಿಂದ ಕಾರ್ಮಿಕರು ಒಟ್ಟು ಸೇರದ ಹಾಗೆ ಮಾಡಿಸಿದರೂ, ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಮುಷ್ಕರ ಮತ್ತು ಜಾಥಾಗಳಲ್ಲಿ ಪಾಲ್ಗೊಂಡರು.

ಕಬ್ಬನ್ ಪಾರ್ಕ್ (ಅಶ್ವಥ್ ಕಟ್ಟೆ)ನಿಂದ ಸುಮಾರು 1500 ಕಾರ್ಮಿಕರು ಕಾಂ. ಸೂರಿಯವರ ನೇತೃತ್ವದಲ್ಲಿ ಹಾಗೂ ಕಾಂ. ಮೀನಾಕ್ಷಿ ಸುಂದರಂರವರ ಘೋಷಣೆಗಳೊಂದಿಗೆ ಕೆಂಬಾವುಟ ಹಿಡಿದು ಹಡ್ಸನ್ ವೃತ್ತದ ಮುಖಾಂತರ ಕೆಂಪೇಗೌಡ ರಸ್ತೆಯಲ್ಲಿ ಮೆರವಣಿಗೆ ಹೊರಟರು. ಮೆರವಣಿಗೆಯ ಉದ್ದ ಹಡ್ಸನ್ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತದ ವರೆಗೆ ಇತ್ತು. ಕೆ.ಜಿ. ರಸ್ತೆಯಲ್ಲಿ ಸುಮಾರು ಒಂದು ಗಂಟೆಯ ಕಾಲ ವಾಹನ ಸಂಚಾರವಿರಲಿಲ್ಲ. ಮೈಸೂರು ಬ್ಯಾಂಕ್ ವೃತ್ತದಲ್ಲಿ ಶ್ರೀರಾಂಪುರದಿಂದ ಬಂದಂತಹ 300 ಕಾರ್ಮಿಕರು ಮೆರವಣಿಗೆಯಲ್ಲಿ ಸೇರಿದರು. ಕೆ.ಆರ್. ವೃತ್ತದ ಮುಖೇನಾ ಕಬ್ಬನ್‌ಪಾರ್ಕಿನಲ್ಲಿ ಸಭೆ ಸೇರಿದರು.

ಸಭೆಯನ್ನುದ್ದೇಶಿಸಿ ಕಾಂ. ಸೂರಿಯವರು ಮಾತನಾಡಿ, ಇಂದು ಕಾರ್ಮಿಕರಿಗೂ, ಮಾಲೀಕರಿಗೂ ಸವಾಲಾದಂತಹ ದಿನ. ಮಾಲೀಕರು ನಮ್ಮ ಮುಷ್ಕರವನ್ನು ಮುರಿಯಲು ಎಲ್ಲಾ ಪ್ರಯತ್ನ ಮಾಡಿದ್ದಾರೆ. ನಮ್ಮ ಬೇಡಿಕೆಗಳು ಈಡೇರದಿದ್ದರೆ ಜಾಗ ಬಿಟ್ಟು ಕದಲುವುದು ಬೇಡ ಎಂದು ತಿಳಿಸಿದಾಗ ಮೊದಲೇ ನಿರ್ಧಾರ ಮಾಡಿದ ಹಾಗೇ ಕಾರ್ಮಿಕರು ಒಕ್ಕೊರಲಿನಿಂದ ಸಮ್ಮತಿಸಿದರು.

ಕಾರ್ಮಿಕರನ್ನುದ್ದೇಶಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯದರ್ಶಿ ಕಾಂ.ಪಿ. ಜಗನ್ನಾಥ್ ಪವರ್‌ಲೂಂ ಕಾರ್ಮಿಕರ ಮುಷ್ಕರ ಮತ್ತು ಜಾಥಕ್ಕೆ ಶುಭಕೋರಿ ಮಾತನಾಡುತ್ತಾ ನಾನು ಪವರ್ ಲೂಂ ಕಾರ್ಮಿಕನಾಗಿದ್ದೆ, ಕಾರ್ಮಿಕರ ಕಷ್ಟಗಳು ನನಗೆ ಚೆನ್ನಾಗಿ ಗೊತ್ತಿದೆ, ಮುಖ್ಯ ಮಂತ್ರಿಗಳು ಜನತಾ ದರ್ಶನ ಎಂದು ಹೇಳಿ ಇಡೀ ರಾಜ್ಯದಲ್ಲಿ ಸುತ್ತುತ್ತಿದ್ದಾರೆ, ಆದರೆ ವಿಧಾನ ಸೌಧದಿಂದ ಒಂದು ಕಿ.ಮೀ ದೂರದಲ್ಲಿರುವ ಪವರ್‌ಲೂಂ ಕಾರ್ಮಿಕರ ಸಮಸ್ಯೆಯನ್ನು ಕೇಳುತ್ತಿಲ್ಲ ಎಂದು ಟೀಕಿಸಿದರು. ನಂತರ ಮೈಕೋ ಕಾರ್ಮಿಕ ಸಂಘದ ಶಂಕರೇಗೌಡ ಮತ್ತು ರಾಮೇಗೌಡರು ಮಾತನಾಡುತ್ತಾ ಮೈಕೋದಲ್ಲಿ ಕಾರ್ಮಿಕರಿಗೆ ಇರುವ ಸೌಲಭ್ಯ ಮತ್ತು ವೇತನವನ್ನು ಇನ್ನಿತರ ಸೌಲಭ್ಯಗಳನ್ನು ತಿಳಿಸಿದರು. ಸಂಘಟಿತ ಕಾರ್ಮಿಕರಿಗಿರುವ ಸೌಲಭ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ ಶೇ. ಒಂದು ಭಾಗ ಇಲ್ಲ ಎಂದು ಹೇಳಿದರು. ಅಖಿಲ ಭಾರತ ವಕೀಲರ ಸಂಘದ ಗೋಪಾಲಗೌಡರು ಶುಭಕೋರಿ, ಕಾರ್ಮಿಕರು ತಮ್ಮ ಹಕ್ಕನ್ನು ಪಡೆದು ಕೊಳ್ಳಲು ಕಾನೂನುಗಳ ಅಗತ್ಯವನ್ನು ತಿಳಿಸಿದರು. ಡಿ.ವೈ.ಎಫ್.ಐನ ರಾಜ್ಯ ಖಜಾಂಚಿ ಶಿವಶಂಕರ್ ಮಾತನಾಡುತ್ತಾ ಸರ್ಕಾರ, ಮುಖ್ಯಮಂತ್ರಿ, ಮಂತ್ರಿಗಳು, ಪೋಲಿಸರು ನಮ್ಮವರೆಂದು ಮರಳಾಗಬಾರದು, ಅವರು ಮಾಲೀಕರ ಹಿತ ಕಾಪಾಡಲು ಇರುವವರು, ಆದ್ದರಿಂದ ಕಾರ್ಮಿಕರು ವರ್ಗ ಹೋರಾಟದ ಮಹತ್ವ ತಿಳಿಯಬೇಕು ಎಂದರು. ಜಿಲ್ಲಾ ಸಿಐಟಿಯು ಮುಖಂಡರಾದ ಪಿ.ಕೆ. ಸುಬ್ರಮಣ್ಯಂ ಮಾತನಾಡುತ್ತಾ ನಾವು ಸಾಮಾಜಿಕವಾಗಿ ಎಲ್ಲಿ ಕೆಲಸ ಮಾಡುತ್ತಿದ್ದೇವೆಯೋ ಅಲ್ಲಿ ನಮ್ಮ ಹಕ್ಕನ್ನು ಪಡೆಯಬೇಕು, ಪವರ್ ಲೂಂನ ಕಾರ್ಮಿಕರು ಕಡಿಮೆ. ಬೆಳಕಿನಲ್ಲಿ ಕೆಲಸ ಮಾಡುವುದರಿಂದ 40 ವರ್ಷಗಳ ನಂತರ ದೃಷ್ಟಿ ದೋಷ ಉಂಟಾಗುತ್ತದೆ. ಆದ್ದರಿಂದ ನಮ್ಮ ಹಕ್ಕಿಗಾಗಿ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಮಳೆ ಸುರಿಯುತ್ತಿದ್ದರು ಲೆಕ್ಕಿಸದೆ ಕಾರ್ಮಿಕರ ಸಭೆ ನಡೆಯುತ್ತಿತ್ತು. ನಂತರ ಕಾರ್ಮಿಕ ಮಂತ್ರಿಗಳಾದ ಸಿ.ಗುರುನಾಥ್ ಮುಷ್ಕರ ನಿರತರ ಹತ್ತಿರ ಬಂದು ನಿಮ್ಮ ಬೇಡಿಕೆಗಳನ್ನು ಈಡೇರಿಸುತೇವೆ ಎಂದು ತಿಳಿಸಿ ಕನಿಷ್ಠ ಕೂಲಿಯ ಕರಡನ್ನು ಕಾಂ. ಸೂರಿಯವರ ಸಮ್ಮುಖದಲ್ಲಿ ಬಿಡುಗಡೆ ಮಾಡಿದರು. ಮೀನಾಕ್ಷಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಈ ಯಶಸ್ವಿ ಮುಷ್ಕರದಿಂದಾಗಿ ಕಾರ್ಮಿಕರಲ್ಲಿ ಹೊಸ ಹುಮ್ಮಸ್ಸು ಮೂಡಿ ಸಂಘಟನೆಯನ್ನು ಬಲಪಡಿಸಲು ಅವರು ಪಣ ತೊಟ್ಟಿದ್ದಾರೆ.

ಮಂಗಳೂರಲ್ಲೊಂದು ಮಿನಿ ಜಲಗಾಂವ್ ಪ್ರಕರಣ!

ದ.ಕ ಜಲ್ಲೆಯ ಇತಿಹಾಸದಲ್ಲೇ ಅತ್ಯಂತ ಕ್ರೂರವಾದ ಅಮಾನವೀಯ ಲೈಂಗಿಕ ಹಗರಣವೊಂದು ಮಂಗಳೂರು ನಗರದ ಶ್ರದ್ಧಾನಂದ ಅನಾಥಾಶ್ರಮದಲ್ಲಿ ನಡೆಯುತ್ತಿದ್ದು ಪ್ರಗತಿಪರ ಸಂಘಟನೆಗಳ ಮುತುವರ್ಜಿಯಿಂದಾಗಿ ಬೆಳಕಿಗೆ ಬಂದಿತು. ಇದು ಜಲಂಗಾವ್ ಘಟನೆಗೆ ಹೋಲಿಸುವಂತಹ ಪ್ರಕರಣ ಅಂದರೆ ಹೆಚ್ಚಾಗಲಾರದು.

ನಗರದ ಆರ್ಯಸಮಾಜರಸ್ತೆಯಲ್ಲಿರುವ ಈ ಆಶ್ರಮದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ದೇವವ್ರತ(29ವರ್ಷ) ಎಂಬಾತ ಕಳೆದ ನಾಲ್ಕು ವರ್ಷಗಳಿಂದ ಆಶ್ರಮದಲ್ಲಿ 10 ರಿಂದ18 ವರ್ಷದೊಳಗಿನ ಮುಗ್ಧ ಯುವತಿಯರನ್ನು ತನ್ನ ಕಾಮ ಪಿಪಾಸಿಗೆ ಬಳಸಿಕೊಂಡ ಪೈಶಾಚಿಕ ಘಟನೆ ಬಯಲಾಗಿದ್ದು ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿತು.

ಮಂಗಳೂರು ವಿಭಾಗಾಧಿಕಾರಿ, ಎಎಸ್‌ಪಿಯವರು ಪೋಲೀಸು ಪಡೆ ಪಯೋಗಿಸಿ 1995ರ ಜೂನ್ 22ರಂದು ಸಂಜೆ ಧಾಳಿ ನಡೆಸಿ ಈ ಕುಕೃತ್ಯವನ್ನು ಬಯಲಿಗೆಳೆದು ಆರೋಪಿ ದೇವವ್ರತನನ್ನು ಬಂದಿಸಿದಾಗ ನಗರದಲ್ಲಿ ಗುಸು ಗುಸು ಸುದ್ದಿ ಹಬ್ಬಿತು. ಈ ಪ್ರಕರಣವನ್ನು ಬಯಲಿಗೆಳೆಯಲು ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್) ಸಮಿತಿಯ ಅಧ್ಯಕ್ಷರಾದ ನರೇಂಪ್ರ ನಾಯಕ್ ಮತ್ತು ಕಾರ್ಯದರ್ಶಿ ವಿಲ್ಫ್ರೆಡ್ ಡಿ'ಸೋಜರವರು ಇತರ ಜನಪರ ಸಂಘಟನೆಗಳೊಂದಿಗೆ ಸಮಾಲೋಚಿಸಿ ನಾಂದಿ ಹಾಡಿದರು.

ಆಶ್ರಮದ ಬಗ್ಗೆ

1991ರ ತನಕ ಆರ್ಯ ಸಮಾಜದ ಅನುಯಾಯಿ ಸ್ವಾಮಿ ಸದಾನಂದರು ಸ್ಥಾಪಿಸಿದ ಸ್ವಾಮಿ ಶ್ರದ್ಧಾನಂದ ಸೇವಾಶ್ರಮ ಅವರ ಅಧೀನದಲ್ಲಿತ್ತು. ಆದರೆ ಅವರ ನಿಧನ ನಂತರ ಅಲ್ಲಿಯೇ ಅನಾಥ ಬಾಲಕನಾಗಿ ಬೆಳೆದ ಆರೋಪಿ ದೇವವ್ರತ -ನೋಡಿಕೊಳ್ಳುತ್ತಿದ್ದು ಅಂದಿನಿಂದಲೂ ಈ ಕುಕೃತ್ಯಗಳು ನಡೆಯುತ್ತಿತ್ತೆನ್ನಲಾಗಿದೆ. ಆರು ದಿನದ ಮಗುವಾಗಿದ್ದಾಗಿನಿಂದ ಇಲ್ಲಿ ಆಡಿ ಬೆಳೆದ ದೇವವ್ರತ ಬಿಎಸ್ಸಿ ಪದವಿಧರನಾಗಿದ್ದಾನೆ. ಸದಾನಂದ ಸ್ವಾಮೀಜಿಯವರ ನಿಕಟವರ್ತಿಯಾಗಿದ್ದ ಈತ ಅವರ ಕೊನೆಗಾಲದಲ್ಲಿ ಅವರನ್ನು ಧಿಕ್ಕರಿಸಿ ತೀರ್ಮಾನ ಕೈಗೊಳ್ಳುತ್ತಿದ್ದ. ಸ್ವಾಮೀಜಿಯವರ ನಿಧನದ ನಂತರ ಆಶ್ರಮದ ಉಸ್ತುವಾರಿಯನ್ನು ತನ್ನ ಕೈಗೆ ತೆಗೆದುಕೊಂಡಿದ್ದ ಈತ ಆಶ್ರಮದ ಆಡಳಿತ ಮಂಡಳಿಯ ಕಣ್ಣಿಗೆ ಮಣ್ಣೆರಚಿ ತನ್ನ ಆಸೆಗಳನ್ನು ಈಡೇರಿಸಿಕೊಳ್ಳುತ್ತಿದ್ದ. 1988ರಲ್ಲಿ ತರುಣಿಯೊಬ್ಬಳು ಇದೇ ಆಶ್ರಮದಲ್ಲಿ ಸಂಶಯಾಸ್ಪದವಾಗಿ ಸಾವಿಗೀಡಾಗಿದ್ದು ಇವಳ ಮೃತ್ಯುವಿಗೆ ಪ್ರಮುಖಸಾಕ್ಷಿಯಾಗಿದ್ದ ಇನ್ನೊಬ್ಬ ಮಹಿಳೆಯನ್ನು ದೇವವ್ರತ ಗುಟ್ಟಾಗಿ ಮುಂಬೈಗೆ ರವಾನಿಸಲು ಯತ್ನಿಸಿದ್ದ. ಆದರೆ ಆಕೆ ಕೆಲ ಮಹಾನುಭಾವರ ಕೃಪೆಯಿಂದ ಮರಳಿ ನಗರಕ್ಕೆ ಬಂದು ಈಗ ಉತ್ತಮ ಜೀವನ ನಡೆಸುತ್ತಿದ್ದಾಳೆ.

ಸ್ವಾಮಿ ಸದಾನಂದರು ಬಡಮಕ್ಕಳಿಗೆ ಮತ್ತು ಅನಾಥರಿಗಾಗಿ ಕಟ್ಟಿಸಿದ ಈ ಆಶ್ರಮವನ್ನು ನಗರದ ಗಣ್ಯವ್ಯಕ್ತಿಗಳು ನೋಡಿಕೊಳ್ಳುತ್ತಿದ್ದರು. ಈ ಆಶ್ರಮಕ್ಕೆ ಸರಕಾರದ ಅನುದಾನ ಕೂಡಾ ಸಿಗುತ್ತಿದೆ.

ಐಶಾರಾಮಿ ಬದುಕು

ಆರೋಪಿ ದೇವವ್ರತ ಐಶಾರಾಮಿಯಾಗಿದ್ದು, ಆತನ ಕೋಣೆ ಸಕಲ ಸುಖಸಮೃದ್ಧಿಯಿಂದ ಕೂಡಿದೆ. ಕೋಣೆಯಲ್ಲಿ ಭಾರಿ ಗಾತ್ರದ ರೆಫ್ರಿಜರೇಟರ್, ಎರಡು ಎಲ್‌ಪಿಜಿ ಗ್ಯಾಸ್ ಒಲೆಗಳು, ಆಳೆತ್ತರದ ಕನ್ನಡಿಗಳು, ಕಾರ್ಡ್‌ಲೆಸ್ ಫೋನ್, ಟಿವಿ, ಟೇಪ್ ರೆಕಾರ್ಡರ್ ಸೆಟ್‌ಗಳು, ಬೆಲೆಬಾಳುವ ಉದ್ದನೆಯ ಮೇಜು, ಅಲಂಕಾರ ಸಾದನಗಳು, ಗೋದ್ರೇಜು ಕಪಾಟುಗಳು, ಮೆತ್ತನೆಯ ಹಾಸಿಗೆಯುಳ್ಳ ಮಂಚ ಬದುಕು ನಡೆಸುವ ಸಾಧನವಾದರೆ ಪ್ರಯಾಣ ನಡೆಸಲು ಕೆನಟಿಕ್ ಹೊಂಡಾ ಇಷ್ಟೆಲ್ಲ ತನಗಿದ್ದು ಈ ಆಶ್ರಮದ ಬಾಲಕಿಯರ ಸ್ನಾನದ ಗೃಹಗಳು ಬಾಗಿಲು ರಹಿತವಾಗಿದ್ದು, ಇದು ಆತ ಕುಳಿತುಕೊಳ್ಳುತ್ತಿದ್ದ ಕೊಠಡಿಗೆ ನೇರವಾಗಿದ್ದು, ಬೇಕಂತಲೇ ಬಾಗಿಲು ಹಾಕಿಸದೇ ಅವರು ಸ್ನಾನ ಮಾಡುವುದನ್ನು ವೀಕ್ಷಿಸುವ ವಿಕೃತಕಾಮಿಯಾಗಿದ್ದ.

–ವಸಂತ ಆಚಾರಿ

ಲೈಂಗಿಕ ಹಲ್ಲೆ

ಅನಾಥ ಬಾಲಕಿಯರ ಮೇಲ್ವಿಚಾರಕನಾಗಿದ್ದ ದೇವವ್ರತ ಮಹಿಳಾ ವಾರ್ಡ್‌ಗಳನ್ನು ನೇಮಿಸದೆ ತನ್ನ ಕಾಮಪಿಪಾಸೆಗೆ ಬಾಲಕಿಯರ ಹರೆಯದ ದೇಹವನ್ನು ಉಪಯೋಗಿಸಿ ಮಾನಸಿಕ, ದೈಹಿಕ ಹಿಂಸೆ ನೀಡುತ್ತಿದ್ದ. ಆಶ್ರಮಕ್ಕೆ ದಾಳಿ ನಡೆಸಿದ ಸಂದರ್ಭದಲ್ಲಿ ಅಲ್ಲಿನ ಹುಡುಗಿಯರನ್ನು ಧೈರ್ಯದುಂಬಿ ವಿಚಾರಿಸಿದಾಗ 10ರಿಂದ 18ವರ್ಷದೊಳಗಿನ ಎಂಡು ಮಂದಿ ಹುಡುಗಿಯರು ಮೊದಲು ಹಿಂಜರಿದರೂ ಆ ಬಳಿಕ ದೇವವ್ರತ ತಮ್ಮ ಮೇಲೆ ಅತ್ಯಾಚಾರ ನಡೆಸಿದ್ದನ್ನು ಒಪ್ಪಿಕೊಂಡರು.

ರಾತ್ರಿ 11-00ರ ನಂತರ ಕುಡಿದು ಬರುತ್ತಿದ್ದ ಆತ ಆಶ್ರಮದಲ್ಲಿನ ಮುಗ್ಧ ಬಾಲೆಯರ ಮೇಲೆ ಅತ್ಯಾಚಾರ ನಡೆಸುತ್ತಿದ್ದ. ಪ್ರತಿಭಟಿಸಿದ ಹುಡುಗಿಯರಿಗೆ ಚೆನ್ನಾಗಿ ಥಳಿಸಿ, ಹೊಡೆದು ಊಟ ತಿಂಡಿ ಕೊಡದೆ ಹಿಂಸಿಸುತ್ತಿದ್ದನಲ್ಲದೆ ಹುಡುಗಿಯರು ತಪ್ಪಿಸಿಕೊಂಡು ಹೋಗದಂತೆ ಬಲು ಜಾಲಕಿತನದಿಂದ ವರ್ತಿಸುತ್ತಿದ್ದ. ಮದ್ಯಸೇವಿಸಿ ಅತ್ಯಾಚಾರ ನಡೆಸುತ್ತಿದ್ದ ಈ ವಿಕೃತ ಕಾಮಿ ತಾನೊಬ್ಬನಲ್ಲದೆ ಇದೇ ಆಶ್ರಮದ ಆಡಳಿತಕ್ಕೊಳಪಟ್ಟ ಕದ್ರಿಪದವು ಎಂಬಲ್ಲಿರುವ ಬಾಲಕರ ಆಶ್ರಮದಿಂದ ಹುಡುಗರನ್ನು ಕರತಂದು ಅವರಿಂದಲೂ ಅತ್ಯಾಚಾರ ನಡೆಸುತ್ತಿದ್ದ, ಮಾತ್ರವಲ್ಲದೆ ಅದನ್ನು ನಗ್ನವಾಗಿ ಕುಳಿತು ನೋಡುತ್ತ ವಿಕೃತ ಆನಂದ ಪಡೆಯುತ್ತಿದ್ದನೆಂಬುದು ಬೆಳಕಿಗೆ ಬಂದಿದೆ.

ಆಡಳಿತ ವರ್ಗದ ಪಾತ್ರ

ಬೆಕ್ಕು ಕಣ್ಮುಚ್ಚಿ ಹಾಲು ಕುಡಿದಂತೆ ತಮಗೇನು ಇಷ್ಟರವರೆಗೆ ವಿಷಯವೇ ತಿಳಿದಿಲ್ಲವೆಂಬಂತೆ ವರ್ತಿಸಿದ ಆಡಳಿತ ವರ್ಗ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿತು, ಮಾತ್ರವಲ್ಲದೆ ರಾಜಕೀಯ ಪ್ರಭಾವವನ್ನು ಉಪಯೋಗಿಸಿ ಆರೋಪಿಯನ್ನು ರಕ್ಷಿಸಲು ಪ್ರಯತ್ನಗಳನ್ನು ನಡೆಸಿದೆ. ಜನತಾದಳದ ಮಹಿಳಾ ಘಟಕದ ನಾಯಕಿಯೋರ್ವರು ಈ ಅನಾಥಾಶ್ರಮದ ಅಧ್ಯಕ್ಷೆಯಾಗಿದ್ದು ಪರೋಕ್ಷವಾಗಿ ಆರೋಪಿಯ ಪರವಾಗಿರುವ ಹೇಳಿಕೆಯನ್ನು ನೀಡುತ್ತಾ ತಾನು ಈ ಪ್ರಕರಣದಲ್ಲಿ ಶಾಮಿಲಾಗಿರುವ ಬಗ್ಗೆ ಶಂಕೆಯನ್ನು ಜನರಲ್ಲಿ ಉದ್ಭವಿಸುತ್ತಿದ್ದಾರೆ. ಆಶ್ರಮದ ಮಕ್ಕಲನ್ನು ತನ್ನ ಮನೆ ಕೆಲಸಕ್ಕೂ ಉಪಯೋಗಿಸುತ್ತಿದ್ದು ಇದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿತ್ತು. ಆಶ್ರಮದ ಆಡಳಿತ ವರ್ಗದ ವಾರ್ಷಿಕ ಸಭೆಯನ್ನು ನಡೆಸದೆ ಲೆಕ್ಕ ವ್ಯವಹಾರವೆಲ್ಲವನ್ನು ಮಗುಚಿ ಹಾಗುತ್ತಾ ತನ್ನ ಸರ್ವಾಧಿಕಾರಿ ಪ್ರವೃತ್ತಿಗಳಿಗಾಗಿ ಮುಗ್ಧ ಮಕ್ಕಳನ್ನು ಬಲಿಪಶು ಮಾಡಿರುತ್ತಾರೆ.

ಹೋರಾಟ ಸಮಿತಿ ರಚನೆ : ಅಪರಾಧಿಗಳನ್ನು ರಕ್ಷಿಸುವ ಪ್ರಯತ್ನವನ್ನು ತಡೆಗಟ್ಟುವುದು ಮಾತ್ರವಲ್ಲ ಮುಗ್ದ ಬಾಲಕಿಯರನ್ನು ರಕ್ಷಿಸಲು, ಅಪರಾಧಿಯನ್ನು ಶಿಕ್ಷಿಸಲು, ಆಡಳಿತ ಮಂಡಳಿಯ ಅವ್ಯವಹಾರ, ಈ ಪ್ರಕರಣದಲ್ಲಿ ಶಾಮೀಲಾಗಿರುವ ಎಲ್ಲಾ ಆರೋಪಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬೇರೆ ಬೇರೆ ರಾಜಕೀಯ ಪಕ್ಷಗಳ ಮಹಿಳಾ ಘಟಕ, ಜನಪರ ಮಹಿಳಾ ಬರಹಗಾರರು, ಅಧ್ಯಾಪಕರು, ಸಂಘಟನೆಗಳನ್ನೊಳಗೊಂಡ ಮಹಿಳಾ ದೌರ್ಜನ್ಯ ವಿರೋಧಿ ಹೋರಾಟ ಸಮಿತಿಯನ್ನು ರಚಿಸಲಾಗಿತ್ತು. ಜನಪರ ಬರಹಗಾರ್ತಿ, ಸಾಹಿತಿ ಚಂದ್ರಕಲಾ ನಂದಾವರರವರನ್ನು ಸಂಚಾಲಕರನ್ನಾಗಿ ಮಾಡಲಾಗಿದೆ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(DYFI), ಭಾರತ ವಿದ್ಯಾರ್ಥಿ ಫೆಡರೇಶನ್(SFI) ಕೂಡ ಹೋರಾಟ ಸಮಿತಿಯೊಂದಿಗೆ ಇದೆ.

ಮೇಲಿನ ಬೇಡಿಕೆಯನ್ನು ಒತ್ತಾಯಿಸಿ ಜೂನ್ 28ರಂದು ಆಶ್ರಮದ ಎದುರು ಬೃಹತ್ ಮಾನವ ಸರಪಣಿಯನ್ನು ಸಂಘಟಿಸಿ ಮಹಿಳೆಯರ, ವಿದ್ಯಾರ್ಥಿನಿಯರ ಮತ್ತು ಜನಪರ ಸಂಘಟನೆಗಳ ಕಾರ್ಯಕರ್ತರ ಮೆರವಣಿಗೆಯನ್ನು ಸಂಘಟಿಸಿ ಜಿಲ್ಲಾಧಿಕಾರಿಯವರನ್ನು ಭೇಟಿಯಾಗಿ ಅಪರಾಧಿಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಲು ಒತ್ತಾಯಿಸಲಾಯಿತು.

ಕೋಮುವಾದಿ ಹಿಂದು ಜಾಗರಣ ವೇದಿಕೆ ದೇವವ್ರತನ ಪರವಾಗಿ ಪತ್ರಿಕೆಯಲ್ಲಿ ಹೇಳಿಕೆ ನೀಡಿದೆ. ಕಾರಣ ಆತ ಹಿಂದು ಮತ್ತು ಆಶ್ರಮ ಹಿಂದು ಆಶ್ರಮ ಎಂಬುದಷ್ಟೇ. ಜನಪರ ಸಂಘಟನೆಗಳ ಹೋರಾಟ ಮುಂದುವರೆದಿದೆ.

ಲೆನಿನ್‌ರ 125ನೇ ವಾರ್ಷಿಕೋತ್ಸವದ ಅಂಗವಾಗಿ ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಅಧ್ಯಯನ ಶಿಬಿರದಲ್ಲಿ ಮುಖ್ಯ ಉಪನ್ಯಾಸಕರಾಗಿ ಮಾತನಾಡುತ್ತಿರುವಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಪಿ.ರಾಮಚಂದ್ರನ್. ಈ ಬಗ್ಗೆ ವರದಿ ಕಳೆದ ವಾರ ಈ ಪುಟದಲ್ಲಿ ಓದಿರುವಿರಿ.



ಕರ್ನಾಟಕ ಸುದ್ದಿ ಸಮಾಚಾರ

ಅರಣ್ಯ ಇಲಾಖೆಯ ವಿರುದ್ಧ ಪ್ರತಿಭಟನೆ

ರಾಮದುರ್ಗ: ಸಾಗುಮಾಡಿರುವ ಅರಣ್ಯ ಭೂಮಿಯಲ್ಲಿ ನೀಲಗಿರಿ ಸಸಿನೆಟ್ಟು ದಬ್ಬಾಳಿಕೆ ಮಾಡಿದ ಅರಣ್ಯ ಇಲಾಖೆ ಸಿಬ್ಬಂದಿಗಳ ವಿರುದ್ಧ ಇಂದು ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜುಲೈ 1 ರಂದು ಪ್ರತಿಭಟನಾ ಮೆರವಣಿಗೆ ನಡೆಯಿತು.

ತಾಲೂಕಿನಲ್ಲಿ ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಅತ್ಯಂತ ಬಡ, ಹಿಂದುಳಿದ ಭೂಹೀನ ರೈತರು ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದು ಪಟ್ಟಾ ಸಲುವಾಗಿ ಅನೇಕ ಹೋರಾಟ ಮಾಡಿದ್ದಾರೆ.

ಇತ್ತೀಚೆಗೆ ಮುದೇನೂರ ಗ್ರಾಮದಲ್ಲಿ ನೀಲಗಿರಿ ಸಸಿ ನೆಡಲು ತಗ್ಗುಗಳನ್ನು ಅರಣ್ಯ ಇಲಾಖೆಯವರು ತೋಡಿದ್ದಾರೆ. ಇದನ್ನು ಪ್ರತಿಭಟಿಸಿ ನೂರಾರು ರೈತರು ಪ್ರತಿಭಟನಾ ಮೆರವಣಿಗೆ ನಡೆಸಿ ತಹಶಿಲ್ದಾರರಿಗೆ, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಾತನಾಡಿ ಚಳುವಳಿ ತೀವ್ರವಾದೀತೆಂದು ಎಚ್ಚರಿಕೆ ನೀಡಿದರು. ಮೆರವಣಿಗೆಯ ನೇತೃತ್ವವನ್ನು ಮಾರುತೆಪ್ಪಾ ಲಮಾಣಿ, ಪುಂಡಲೀಕ ಲಮಾಣಿ, ಹುಲಿಗೆಪ್ಪ ಬಂಡಿವಡ್ಡರ, ಗೈಬುಸಾಬ್ ಜೈನೆಖಾನ ಮತ್ತು ನಜೀರ ಸರಮುಲ್ಲಾ ವಹಿಸಿದ್ದರು.

ಕ್ಯಾಂಟೀನ್ ಕಾರ್ಮಿಕರ ಹೋರಾಟ ಯಶಸ್ವಿ

ಮಂಗಳೂರು: ಸುಮಾರು 6-7 ವರ್ಷಗಳಿಂದ ಕೆನರಾವರ್ಕ್ ಶಾಪ್‌ನ ಮರೋಲಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದ ಕ್ಯಾಂಟೀನ್ ಕಾರ್ಮಿಕರನ್ನು ಮೇ 31 ರಿಂದ ಕೆಲಸಕ್ಕೆ ನಿರಾಕರಿಸಿದ ಬಗ್ಗೆ ಸದ್ರಿ ಕಾರ್ಮಿಕರು ಮೋಟಾರ್ ಟ್ರಾನ್ಸ ಪೋರ್ಟ್ ಅಂಡ್ ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್ (ಸಿಐಟಿಯು)ನ ನೇತೃತ್ವದಲ್ಲಿ ಧರಣಿ ನಡೆಸಿದರು.

ಈ ಮಧ್ಯೆ ಆಡಳಿತ ವರ್ಗ ಮತ್ತು ಯೂನಿಯನ್‌ನ ಪದಾಧಿಕಾರಿಗಳ ನಡುವೆ ಅನೇಕ ಸುತ್ತಿನ ಮಾತುಕತೆ ನಡೆದು ಮಾನ್ಯ ಅಸಿಸ್ಟೆಂಟ್ ಲೇಬರ್ ಕಮೀಷನರ್ ರವರ ಸಮ್ಮುಖದಲ್ಲಿ ಜುಲೈ 11 ರಂದು ಒಂದು ಸೌಹಾರ್ದಯುತ ಒಪ್ಪಂದಕ್ಕೆ ಬರಲಾಯಿತು.

40 ದಿನಗಳಿಂದ ನಡೆದ ಈ ಧರಣಿ ಸತ್ಯಾಗ್ರಹಕ್ಕೆ ಎಲ್ಲಾ ರೀತಿಯ ಸಹಾಯ ಸಹಕಾರವನ್ನು ನೀಡಿದ ಕಾರ್ಮಿಕ ಬಂಧುಗಳನ್ನು ಹಾಗೂ ಹಿತೈಷಿಗಳನ್ನು ಯೂನಿಯನ್ ಅಭಿನಂಧಿಸಿದೆ.

ಏಜೆಂಸಿದಾರರಲ್ಲೊಂದು ಮನವಿ

ಹಣಕಾಸಿನ ತೀವ್ರ ತೊಂದರೆಯಿಂದಾಗಿ ಜುಲೈ 16, 1995ರ ಸಂಚಿಕೆಯನ್ನು ಹೊರ ತರಲಾಗಿಲ್ಲ. ಬಹಳಷ್ಟು ಏಜೆಂಸಿದಾರರು ಗಮನಾರ್ಹ ಪ್ರಮಾಣದಲ್ಲಿ ತಮ್ಮ ಬಿಲ್‌ಗಳನ್ನು ಬಾಕಿಯಿಟ್ಟುಕೊಂಡಿರುವುದರಿಂದ ಹೀಗಾಗಿದೆ. ಆದ್ದರಿಂದ ಆದಷ್ಟು ತಮ್ಮ ಬಾಕಿಗಳನ್ನು ತೀರಿಸಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮಿಡಿಯುವ ಜನದ ಈ ಪತ್ರಿಕೆಯನ್ನು ನಿಯಮಿತವಾಗಿ ಉತ್ತಮ ರೀತಿಯಲ್ಲಿ ಪ್ರಕಟಿಸುವಲ್ಲಿ ಸಹಕರಿಸಬೇಕು ಎಂದು ಕೋರುತ್ತೇವೆ.

–ವ್ಯವಸ್ಥಾಪಕರು

ಜ್ಯೋತಿಬಸು ಅವರೊಡನೆ ಒಂದು ಸಂದರ್ಶನ

“ತೊಂಭತ್ತು ಕೋಟಿ ಜನರಿಗೆ ಪ್ರಯೋಜನವಾಗಬಲ್ಲ ಮಾರುಕಟ್ಟೆ ನಿರ್ಮಿಸುವ ಸರಕಾರ ಬೇಕು”



ಪಶ್ಚಿಮ ಬಂಗಾ… ಮುಖ್ಯಮಂತ್ರಿ ಜ್ಯೋತಿ ಬಸುರ… ಸಿಪಿಐ(ಎಂ) ಕೇಂ… ಸಮಿತಿ ಸಭೆಯ… ಭಾಗವಹಿಸಲು… ದೆಹಲಿಗೆ ಆಗಮಿ… ದ್ದಾಗ ಜೂನ್ … 1995 ರಂದು… ಐ.ಎನ್.ಎಸ್… ಅವರೊಂದಿಗೆ… ನಡೆಸಿದ ಸಂದರ್ಶ…

❖ ಅಮೇರಿಕಾಕ್ಕೆ ನಿಮ್ಮ ಭೇಟಿಯ ಉದ್ದೇಶವೇನು?

ಅಮೇರಿಕಾದಲ್ಲಿ ರಾಯಭಾರಿಗಳು, ಹಾಗೂ ಅಮೇರಿಕಾದ ನಮ್ಮ ರಾಯಭಾರಿಗಳಾದ ಸಿದ್ಧಾರ್ಥ ಶಂಕರ್ ರಾಯ್ ಉದ್ದಿಮೆ, ವಾಣಿಜ್ಯ ಹಾಗೂ ವ್ಯಾಪಾರಕ್ಕಾಗಿ ಅಮೇರಿಕಾಕ್ಕೆ ಹೋಗಲು ಇದೇ ಸೂಕ್ತ ಸಮಯ ಎಂದರು. ಅಮೇರಿಕಾದಲ್ಲಿರುವ ಬಂಡವಾಳ ಹೂಡಿಕೆದಾರರು-ಅಲ್ಲಿಯವರು ಮತ್ತು ಅನಿವಾಸಿ ಭಾರತೀಯರು- ಪಶ್ಚಿಮ ಬಂಗಾಳದ ಬಗ್ಗೆ ಹೆಚ್ಚು ತಿಳಿಯಬೇಕೆಂದಿದ್ದಾರೆ ಎಂದು ಅವರು ತಿಳಿಸಿದರು. ನಾನಂದೆ- ನಾನು ಅಮೇರಿಕಾಕ್ಕೆ ಹೋಗುವುದರಿಂದ ಪ್ರಯೋಜನವಾಗಲಿಕ್ಕಿಲ್ಲ. ಏಕೆಂದರೆ 18 ವರ್ಷ ಮುಖ್ಯಮಂತ್ರಿಯಾಗಿದ್ದು ಸಹಜವಾಗಿ ನಾನು (ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಬಗ್ಗೆ) ಒಳ್ಳೆಯ ಮಾತುಕತೆಗಳನ್ನೇ ಹೇಳುತ್ತೇನೆ. ವಾಣಿಜ್ಯೋದ್ಯಮಿಗಳ ಬಳಿ ಮಾತಾಡುತ್ತೇನೆ ಎಂದೆ. ಅವರಲ್ಲಿ ಹತ್ತೊಂಭತ್ತು ಮಂದಿ ಹೊರಡಲು ಒಪ್ಪಿದರು. ಈ ಭೇಟಿಯ ಉದ್ದೇಶ ಪಶ್ಚಿಮ ಬಂಗಾಳದ ಬಗ್ಗೆ ಸರಿಯಾದ ದೃಷ್ಟಿಕೋಣವನ್ನು ಮುಂದಿಡುವುದು. ನಮ್ಮ ಬಗ್ಗೆ ತುಂಬಾ ಕೆಟ್ಟ ಪ್ರಚಾರ ಇದೆ- ವಿದ್ಯುತ್ ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ, ಕಾರ್ಮಿಕರಲ್ಲಿ ಅಸಂತೃಪ್ತಿಯಿದೆ ಇತ್ಯಾದಿ. ನಮ್ಮ ಉದ್ದೇಶವಿದ್ದದ್ದು ಹೊಸ ಉದ್ದಿಮೆಗಳನ್ನು ಸ್ಥಾಪಿಸುವ ಸಾಧ್ಯತೆ ಬಹಳ ಇದೆ ಎಂದು ಅವರಿಗೆ ಹೇಳುವುದು.

ಹೋಗಿ ಪಶ್ಚಿಮ ಬಂಗಾಳದ ದೃಷ್ಟಿಕೋನವನ್ನು ಮುಂದಿಡುವುದು ಒಳ್ಳೆಯದು ಎಂದು ನಾನು ಯೋಚಿಸಿದೆ. ಈ ಹಿಂದೆ ರಾಜ್ಯ ವಿಧಾನಸಭೆಯಲ್ಲಿ ಕೈಗಾರಿಕಾ ನೀತಿಯನ್ನು ಮಂಡಿಸಿ ನಮ್ಮ ನಿಲುವನ್ನು ವಿಶದ ಪಡಿಸಿದ್ದೆ. ಕೇಂದ್ರ ಸಮಿತಿಯೂ ಕೈಗಾರಿಕಾ ನೀತಿಯ ಬಗ್ಗೆ ಒಂದು ದಸ್ತಾವೇಜನ್ನು ಅಂಗೀಕರಿಸಿತು.

❖ ನಿಮ್ಮ ಭೇಟಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿತ್ತು?

ಈ ಭೇಟಿ ಕಾಲದಲ್ಲಿ ಹಲವು ಉದ್ಯಮಿಗಳೂ ಬಂದಿದ್ದು ಅವರಿಗೆ ಈಗಾಗಲೇ ಸಂಪರ್ಕಗಳಿದ್ದುದರಿಂದ ನನ್ನೆದುರು ಹಲವು ತಿಳುವಳಿಕೆ ಪತ್ರ (MoU) ಗಳಿಗೆ ಸಹಿ ಬಿತ್ತು. ನನ್ನ ಜತೆ ಪಶ್ಚಿಮ ಬಂಗಾಳ ಕೈಗಾರಿಕಾ ಅಭಿವೃದ್ಧಿ. ಕಾರ್ಪೋರೇಷನ್ (WBIDC) ನ ಅಧ್ಯಕ್ಷ ಸೋಮನಾಥ್ ಚಟರ್ಜಿಯವರೂ ಇದ್ದರು. ವೈಯುಕ್ತಿಕವಾಗಿ ಇತರ ನಾಲ್ಕೈದು ಜನ ಹೋದರು. ಹಲವು ತಿಳುವಳಿಕೆ ಪತ್ರಗಳಿಗೆ ಸಹಿ ಬಿತ್ತು. ಇವುಗಳ ಒಟ್ಟು ಮೌಲ್ಯ 3000 ಕೋಟಿ ರೂ.ಗಳು ಅಥವಾ ಸುಮಾರು ಒಂದು ಶತಕೋಟಿ ಡಾಲರುಗಳು. ಇವು ಅನುಷ್ಠಾನಕ್ಕೆ ತರಬೇಕಾಗಿರುವ ಒಪ್ಪಂದಗಳು. ಡಬ್ಲ್ಯು.ಬಿ.ಐ.ಡಿ.ಸಿ.ಯಲ್ಲಿ ಇದಕ್ಕಾಗಿ ಒಂದು ಸೆಲ್ ರಚಿಸುತ್ತಿದ್ದೇವೆ.

❖ ಕೇಂದ್ರದಲ್ಲಿ ಒಂದು ಹೊಸ ಸರಕಾರ ಬಂದರೆ ಆರ್ಥಿಕ ಸುಧಾರಣೆಯಲ್ಲಿ ಅಥವಾ ನೀತಿಗಳಲ್ಲಿ ಬದಲಾವಣೆಯಿರುವುದಿಲ್ಲ ಎಂದು ನೀವು ಹೇಳಿದುದಾಗಿ ಪತ್ರಿಕಾ ವರದಿಗಳಿವೆ. ನೀತಿಗಳ ಮೂಲಭೂತ ಚೌಕಟ್ಟು ಮುಂದುವರಿಯುವುದೆಂದು ನೀವು ಹೇಳಿರುವುದಾಗಿ ಕೆಲವು ಪತ್ರಿಕೆ ಹೇಳಿವೆ.

ವರದಿಗಳು ಸಂಪೂರ್ಣ ಗೊಂದಲಕಾರಿ ನಾನು ಹೇಳಿದ್ದು -ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸರಕಾರಗಳು ಬದಲಾಗುತ್ತವೆ. ಕೇಂದ್ರದಲ್ಲಿ ಸರಕಾರ ಬದಲಾಗುವ ಸಂಭವವಿದೆ. ಆದರೆ ತಕ್ಷಣ ನೀತಿಗಳಲ್ಲಿ ಬದಲಾವಣೆ ಇರಲಿಕ್ಕಿಲ್ಲ ಎಂದು. ಅನಂತರ ನಾನು ಹೇಳಿದ್ದನ್ನು ವರದಿ ಮಾಡಲಿಲ್ಲ. ನಾವು ಧೋರಣೆಯಲ್ಲಿ ಕೆಲವು ಮಹತ್ತರ ಬದಲಾವಣೆ ತರುವ ಒಂದು ಸರಕಾರ ಬರುವಂತೆ ಪ್ರಯತ್ನಿಸುತ್ತಿದ್ದೇವೆ. ಅಂತಹ ಒಂದು ಸರಕಾರವನ್ನು ಬೆಂಬಲಿಸುತ್ತೇವೆ. ಉದಾಹರಣೆಗೆ, ನಾವು ಭೂಸುಧಾರಣೆಗಳನ್ನು ಪ್ರತಿಪಾದಿಸುತ್ತೇವೆ, ಗ್ರಾಮಾಂತರದಲ್ಲಿ ಪಂಚಾಯತುಗಳ ಮೂಲಕ ಪ್ರಜಾಪ್ರಭುತ್ವ ಇರಬೇಕು ಎನ್ನುತ್ತೇವೆ, ಕೇಂದ್ರ ಸರಕಾರ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಿಬಿಡುವುದನ್ನು ವಿರೋಧಿಸುತ್ತೇವೆ, ಸ್ವಾವಲಂಬನೆ ಬಯಸುತ್ತೇವೆ, ಸ್ವದೇಶೀ ಸಂಶೋಧನೆ ಮತ್ತು ಅಭಿವೃದ್ಧಿ ಇರಬೇಕೆನ್ನುತ್ತೇವೆ. ಒಟ್ಟಾರೆಯಾಗಿ ನನ್ನ ಪ್ರಕಾರ ಭಾರತದಲ್ಲಿ ಆರ್ಥಿಕ ಮೇಲಿನ 10-15ಶೇ. ಜನರಿಗಾಗಿ ಇದೆ. ಅವರಿಗಾಗಿ ಒಂದು ಮಾರುಕಟ್ಟೆಯನ್ನು ಸೃಷ್ಟಿಮಾಡಲಾಗುತ್ತಿದೆ. ಆದರೆ ನಮ್ಮಲ್ಲಿ 90 ಕೋಟಿ ಜನರಿದ್ದಾರೆ. ಇಂದು ಬಡವರು ಮತ್ತು ಶ್ರೀಮಂತರ ನಡುವಿನ ಕಂದರ ಹೆಚ್ಚುತ್ತಿದೆ. ಆದ್ದರಿಂದ ದೇಶದೊಳಗೆ ಒಂದು ಮಾರುಕಟ್ಟೆ ನಿರ್ಮಿಸಬಲ್ಲ ಒಂದು ಸರಕಾರ ನಮಗೆ ಬೇಕು- 90 ಕೋಟಿ ಜನರಿಗೆ ಪ್ರಯೋಜನವಾಗಬಲ್ಲ ಒಂದು ಮಾರುಕಟ್ಟೆ. ಇದು ಉದ್ದಿಮೆಗಳಿಗೂ ಪ್ರಯೋಜನಕಾರಿ.

❖ ನಿಮ್ಮ ಕೈಗಾರಿಕಾ ನೀತಿ ಕೇಂದ್ರದ ಕೈಗಾರಿಕಾ ನೀತಿಗಿಂತ ಹೇಗೆ ಭಿನ್ನವಾಗಿದೆ?

ನಾನು ಮೊದಲೇ ಹೇಳಿದಂತೆ, ನಾವು ಕೆಲಸ ಮಾಡುತ್ತಿರುವುದು ಪಶ್ಚಿಮ ಬಂಗಾಳದ ವಿಶಾಲ ಜನಸಮೂಹಗಳಿಗಾಗಿ-ಮೇಲಿನ ಕೆಲವೇ ಜನರಿಗಾಗಿ ಅಲ್ಲ. ನಾವು ಭಾರತ ಸರಕಾರ ಮಾಡಿದಂತೆ ಕೇಂದ್ರದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವುದನ್ನು, ಖಾಸಗೀಕರಿಸುವುದನ್ನು, ದುರ್ಬಲಗೊಳಿಸುವುದನ್ನು ವಿರೋಧಿಸುತ್ತೇವೆ. ಭೂಸುಧಾರಣೆ ತರಬೇಕು, ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು ಎನ್ನುತ್ತೇವೆ. ರಾಜ್ಯದ ವಲಯ ಮತ್ತು ಕೇಂದ್ರದ ಸಾರ್ವಜನಿಕ ವಲಯ ಉದ್ದಿಮೆಗಳ ನಡುವೆ ವ್ಯತ್ಯಾಸ ಕಾಣುತ್ತೇವೆ. ರಾಜ್ಯ ವಲಯದ ಉದ್ದಿಮೆಗಳು ಸಣ್ಣವು, ಅಷ್ಟು ಮಹತ್ವದ್ದಲ್ಲ (ಅಂದರೆ ಅದು ನಿರ್ಮಿಸುವ ಉದ್ಯೋಗಾವಕಾಶಗಳ ದೃಷ್ಟಿಯಿಂದ). ಆದರೂ ಅವನ್ನು ಮುಚ್ಚಿಬಿಡಲು ಪ್ರಯತ್ನಿಸುತ್ತಿಲ್ಲ, ಅವುಗಳ ಕೆಲಸವನ್ನು ಸುಧಾರಿಸಲು ಪ್ರಯತ್ನಿಸುತ್ತಿದ್ದೇವೆ. ಕೇಂದ್ರ ಸಾರ್ವಜನಿಕ ವಲಯ ಉದ್ದಿಮೆಗಳ ವಿಷಯದಲ್ಲಿ ನಾವು ಜನರ ಬಳಿಗೆ ಹೋಗುತ್ತಿದ್ದೇವೆ. ಅವರನ್ನು ಸಂಘಟಿಸುತ್ತಿದ್ದೇವೆ, ಅವುಗಳ ರಕ್ಷಣೆಗೆ ಆಂದೋಲನ ಕಟ್ಟುತ್ತಿದ್ದೇವೆ, ಅವುಗಳನ್ನು ಮುಚ್ಚುವ ಮತ್ತು ಖಾಸಗೀಕರಿಸುವ ವಿರುದ್ಧ ಹೋರಾಡುತ್ತಿದ್ದೇವೆ.

ನಮ್ಮ ಅಭಿಪ್ರಾಯವನ್ನು ಕೈಗಾರಿಕಾ ನೀತಿಯಲ್ಲಿ ಹೇಳಿದ್ದೇವೆ. ನಾವು ಪರಸ್ಪರ ಹಿತಾಸಕ್ತಿಯಿಂದ ವಿದೇಶೀ ತಂತ್ರಜ್ಞಾನ, ವಿದೇಶೀ ಬಂಡವಾಳ ಹೂಡಿಕೆ ಬಯಸುತ್ತೇವೆ. ಆದರೆ ಭಾರತ ಸರಕಾರದ ನಿಲುವು ಏಕಪಕ್ಷೀಯ- ಭಾರತೀಯ ಕಂಪೆನಿಗಳಿಗಿಂತ ವಿದೇಶೀ ಕಂಪೆನಿಗಳಿಗೆ ಪ್ರಯೋಜನಕಾರಿ. ಆದರೆ ನಾವು ಕೇಂದ್ರ ಸರಕಾರದ ನೀತಿಗಳ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ನಮ್ಮ ಹಾಗೂ ರಾಜ್ಯಕ್ಕೆ ಸಂಬಂಧಪಟ್ಟಂತೆ ಧೋರಣೆಯ ನಕಾರಾತ್ಮಕ ಪರಿಣಾಮಗಳನ್ನು ಸಾಧ್ಯವಾದಷ್ಟು ತಪ್ಪಿಸಲು ಪ್ರಯತ್ನಿಸುತ್ತಿದ್ದೇವೆ.

❖ ವಿದ್ಯುತ್ ವಲಯದಲ್ಲಿ [illegible] ಕಂಪನಿಗಳೊಂದಿಗೆ ಸಹಯೋಗದ ನಿಮ್ಮ ನಿಲುವೇನು?

ನಾವು ಈಗಾಗಲೇ ಪಶ್ಚಿಮ ಬಂ… ದಲ್ಲಿ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ಮು… ಭಾರತೀಯ ಮತ್ತು ವಿದೇಶೀ ಕಂಪ… ಳೊಂದಿಗೂ, ಜಂಟಿ ಉದ್ಯಮದಲ್ಲೂ … 16000 ಕೋಟಿ ರೂಪಾಯಿಗಳ … ಹಾರ ಮಾಡಿಕೊಂಡಿದ್ದೇವೆ. ಆದರೆ ಆ… ದಿಂದಲೇ ಎನ್ರೋನ್ ಮಾದರಿ ಒಪ್ಪ… ಳನ್ನು ವಿರೋಧಿಸುತ್ತಾ ಬಂದಿದ್ದೇವೆ. … ನಿನ OECF ನೊಂದಿಗೆ ಬಕ್ರೇಶ್ವರ ವಿದ್ಯುತ್ ಯೋಜನೆಯ ಮೂರು ಘ… ಳಗೆ ಒಂದು ಒಪ್ಪಂದ ಮಾಡಿಕೊಂಡಿ…

ಆಳುವ ವರ್ಗಗಳಿಗೆಂದಿಗೂ ಶರಣಾಗೆವು....

ಶ್ರಮಜೀವಿಗಳಿಗೆ, ಪ್ರಜಾಪ್ರಭುತ್ವ ಶಕ್ತಿಗಳಿಗೆಂದಿಗೂ ವಿಶ್ವಾಸಘಾತ ಮಾಡೆವು....

-ಸಂಸತ್ತಿನಲ್ಲಿ ಎ.ಕೆ.ಜಿ.ಯವರ ಐತಿಹಾಸಿಕ ಭಾಷಣ

ಜೂನ್ 26, 1975ರಂದು ಆಂತರಿಕ ಭದ್ರತೆಯ ನೆಪವೊಡ್ಡಿ ತುರ್ತು ಪರಿಸ್ಥಿತಿ ಸಾರಿದ ರಾಷ್ಟ್ರಪತಿ ಘೋಷಣೆಗೆ ಅನುಮೋದನೆ ನೀಡುವ ನಿರ್ಣಯವೊಂದನ್ನು ಸಂಸತ್ತಿನಲ್ಲಿಡಲಾಯಿತು. ಅದನ್ನು ಬಲವಾಗಿ ವಿರೋಧಿಸುತ್ತಾ “ಜನಗಳ ಹಿತಾಸಕ್ತಿಗಳಿಗೆ ಎರಡು ಬಗೆದು ಭಾರತದಲ್ಲಿ ಪ್ರಜಾಪ್ರಭುತ್ವದ ಕುರುಹುಗಳನ್ನೆಲ್ಲಾ ಅಳಿಸಿಹಾಕುವುದಕ್ಕೆ ಸಿಪಿಐ(ಎಂ) ಒಪ್ಪಿಗೆ ಕೊಡಲು ಸಾಧ್ಯವಿಲ್ಲ” ಎಂದು ಗುಡುಗಿದರು ಹಿರಿಯ ಸಿಪಿಐ(ಎಂ) ಮುಖಂಡ ಎ.ಕೆ. ಗೋಪಾಲನ್, 1977 ಮೇ ತುರ್ತು ಪರಿಸ್ಥಿತಿಯನ್ನು ತೆಗೆಯಬೇಕಾಗಿ ಬರುವ ವೇಳೆಗೆ ಎ.ಕೆ.ಜಿ. ನಿಧನ ಹೊಂದಿದರು. ತುರ್ತು ಪರಿಸ್ಥಿತಿ ಹೇರಿದಾಗ ಒಂದು ವಾರ ಕಾಲ ಅವರನ್ನೂ ಬಂಧನದಲ್ಲಿಡಲಾಗಿತ್ತು. ತುರ್ತು ಪರಿಸ್ಥಿತಿಯ ಹೇರಿಕೆಯನ್ನು ಖಡಾಖಂಡವಾಗಿ ವಿರೋಧಿಸಿದ ಅವರ ಈ ಐತಿಹಾಸಿಕ ಭಾಷಣದ ಕೆಲವು ಅಂಶಗಳು;

ನಾನು ಒಂದು ವಿಶೇಷ ಹಾಗೂ ಅತ್ಯಂತ ಬೇಸರವುಂಟುಮಾಡುವ ಸನ್ನಿವೇಶದಲ್ಲಿ ಮಾತನಾಡಲು ಎದ್ದು ನಿಂತಿದ್ದೇನೆ. 34 ಸಂಸತ್ ಸದಸ್ಯರು ಇಲ್ಲಿಲ್ಲ, ಅವರು ಸ್ವಯಂಮಿಚ್ಛೆಯಿಂದ ಇಲ್ಲಿ ಬರದೇ ಇರುವುದಲ್ಲ- ಅವರನ್ನು ವಿಚಾರಣೆಯಿಲ್ಲದೆ ಬಂಧಿಸಿರುವುದರಿಂದಾಗಿ ಬಂದಿಲ್ಲ, ಶ್ರೀಮತಿ ಗಾಂಧಿ ಮತ್ತು ಅವರ ಪಕ್ಷ ಸಂಸತ್ತನ್ನೇ ಒಂದು ಪ್ರಹಸನದ ಮಟ್ಟಕ್ಕೆ ಹಾಗೂ ತಿರಸ್ಕಾರದ ವಸ್ತುವಿನ ಮಟ್ಟಕ್ಕೆ ಇಳಿಸಿದೆ......

ಕಳೆದ ಮೂರು ವರ್ಷಗಳಿಂದ ಸರ್ವಾಧಿಕಾರದ ಹಾಗೂ ಏಕಪಕ್ಷ ಅಧಿನಾಯಕತ್ವದ ಪ್ರವೃತ್ತಿ ಏಳುತ್ತಿದೆ ಎಂದು ನಮ್ಮ ಪಕ್ಷ ಎಚ್ಚರಿಸುತ್ತಾ ಬಂದಿದ್ದು ಈಗ ಹೊಸ ತುರ್ತು ಪರಿಸ್ಥಿತಿಯ ಅಕಸ್ಮಾತ್ ಘೋಷಣೆಯಿಂದ ನಿಜವಾಗಿದೆ. ಸಂಸದೀಯ ಪ್ರಜಾಪ್ರಭುತ್ವದ ಸ್ಥಾನದಲ್ಲಿ ಏಕಪಕ್ಷ ಸರ್ವಾಧಿಕಾರ ಬಂದಿದೆ. ಅದರಲ್ಲೂ ಅಧಿಕಾರ ಏಕ ನಾಯಕರ, ಶ್ರೀಮತಿ ಗಾಂಧಿಯವರ ಕೈಗಳಲ್ಲಿ ಕೇಂದ್ರೀಕರಣಗೊಂಡಿದೆ. ಇದು ಆಳುವ ಪಕ್ಷದ ಶಕ್ತಿಯ ಅಭಿವ್ಯಕ್ತಿಯಲ್ಲ, ಬದಲಿಗೆ ಆ ಪಕ್ಷದ ಹಾಗೂ ಆಳುವ ವರ್ಗದ ಒಂದು ಅತಿ ಹೀನ ದೌರ್ಬಲ್ಯದ ಹಾಗೂ ಬಿಕ್ಕಟ್ಟಿನ ಅಭಿವ್ಯಕ್ತಿ. ಇದ್ದಕ್ಕಿದ್ದಂತೆ ಸನ್ನಿವೇಶದಲ್ಲಿ ಬಂದಿರುವ ಈ ತಿರುವು, ಪ್ರಜಾಪ್ರಭುತ್ವದಿಂದ ಸರ್ವಾಧಿಕಾರದೆಡೆಗೆ ಈ ತುರ್ತು ಬದಲಾವಣೆ ಬಿಕ್ಕಟ್ಟಿನಿಂದ ಹೊರಬರಲು ಒಂದು ದಾರಿ ಹುಡುಕಿ ಆಳುವ ಪಕ್ಷ ಹಾಗೂ ಆಳುವ ವರ್ಗಗಳನ್ನು ಅಧಿಕಾರದಲ್ಲುಳಿಸಿಕೊಳ್ಳುವುದಕ್ಕಾಗಿ. ಏಕೆಂದರೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಕಾರ್ಮಿಕ ವರ್ಗ ಹಾಗೂ ಜನತೆ ಪಡೆದ ಪ್ರಜಾಪ್ರಭುತ್ವ ಹಕ್ಕು ಅವರ ಅಧಿಕಾರಕ್ಕೊಂದು ಬೆದರಿಕೆಯಾಗಿ ಬಿಟ್ಟಿತು. ಆದ್ದರಿಂದಲೇ ಕಾರ್ಮಿಕ ಸಂಘಟನೆಯ ಹಕ್ಕು ಹಾಗೂ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹೆಚ್ಚೆಚ್ಚು ಆಕ್ರಮಣಗಳನ್ನು, ವಿರೋಧಿ ಶಕ್ತಿಗಳ ದಮನವನ್ನು ಕಾಣುತ್ತಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ಕಂಡು ಬಂದಂತೆ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ಹಾಗೂ ಚುನಾವಣಾ ಮೋಸ, ಮೀಸಾದಂತಹ ವಿಶೇಷ ಅಧಿಕಾರಗಳು, ತುರ್ತು ಪರಿಸ್ಥಿತಿ ಆಳುವ ಪಕ್ಷವನ್ನು ಅಧಿಕಾರದಲ್ಲಿ ಉಳಿಸಲು ಅನಿವಾರ್ಯವಾಯಿತು. ಈ ಸರ್ವಾಧಿಕಾರಶಾಹಿಯ ಬೆಳವಣಿಗೆಗೂ ಗುತ್ತೇದಾರಿ ಬಂಡವಾಳದ ಬೆಳವಣಿಗೆಗೂ, ಜನಗಳ ಶೋಷಣೆ ಹೆಚ್ಚುವುದಕ್ಕೂ, ಹಾಗೂ ಅದಕ್ಕೆ ಜನಗಳ ಪ್ರತಿರೋಧ ಹೆಚ್ಚುವುದ… ನೇರ ಸಂಬಂಧವಿದೆ........

....ಪ್ರಜಾಪ್ರಭುತ್ವದ ಈ ಕಗ್ಗೊಲೆ… ಹೇಗೆ ಸಮರ್ಥಿಸಿಕೊಳ್ಳಲಾಗುತ್ತಿದೆ? ರ' ಕ್ಸ್ಣಾ' ಗ' ಶ್ರೀಮತಿ ಗಾಂಧಿ ನೀಡುವ ಕಾರಣಗಳೇನು? ಬಲಪ್ರತಿಗಾಮಿಗಳನ್ನು ಹಾಗೂ ತ'ಥಾ'ಕ'ಥಿ'ತ' ಎಡ ಉಗ್ರಗಾಮಿಗಳನ್ನು ಸೋಲಿಸಲು ಈ ಕ್ರಮ ಎಂದು ಆಕೆ ಹೇಳಿಕೊಂಡಿ… ಈ ಎಲ್ಲಾ ಎಡ ಕಸರತ್ತುಗಳು ದೇಶದ… ಹಾಗೂ ಹೊರಗೆ ಸಾರ್ವಜನಿಕ ಅಭಿಪ್ರಾ…

> ಇದ್ದಕ್ಕಿದ್ದಂತೆ ಸನ್ನಿವೇಶದಲ್ಲಿ ಬಂದಿರುವ ಈ ತಿರುವು, ಪ್ರಜಾಪ್ರಭುತ್ವದಿಂದ ಸರ್ವಾಧಿಕಾರದೆಡೆಗೆ ಈ ತುರ್ತು ಬದಲಾವಣೆ ಬಿಕ್ಕಟ್ಟಿನಿಂದ ಹೊರಬರಲು ಒಂದು ದಾರಿ ಹುಡುಕಿ ಆಳುವ ಪಕ್ಷ ಹಾಗೂ ಆಳುವ ವರ್ಗಗಳನ್ನು ಅಧಿಕಾರದಲ್ಲುಳಿಸಿಕೊಳ್ಳುವುದಕ್ಕಾಗಿ.

> ಯಾರ ಹಿತಾಸಕ್ತಿ ರಕ್ಷಿಸಲು… ಸರ್ವಾಧಿಕಾರ? ದುಡಿಯುವ… ಹಿತಾಸಕ್ತಿ ರಕ್ಷಣೆಗೆ ಅಲ್ಲ; ಮ… ವರ್ಗದ ನೌಕರರ ಹಿತಾಸಕ್ತಿ… ಣೆಗೆ ಅಲ್ಲ; ಕೃಷಿಕೂಲಿಕಾರ… ಸಕ್ತಿ ರಕ್ಷಣೆಗೂ ಅಲ್ಲ. ಚೇಂ… ಆಫ್ ಕಾಮರ್ಸ್ ನ ಸ… ಹಿತಾಸಕ್ತಿ ರಕ್ಷಿಸಲು ಮಾತ್ರ…

ಎರಡು ಘಟಕಗಳಿಗೆ ಒಂದು ಮೂರನೇ
ಬೇಕಾಗಿದೆ. ಇದುವರೆಗೆ ಯಾವ
ಕಂಪೆನಿಯೊಂದಿಗೂ ಒಪ್ಪಂದವಾ
ನಾವು ಎನ್ರೋನ್ ಮಾದರಿ ಒಪ್ಪಂದ
ಸುವುದಿಲ್ಲ. ಅಮೇರಿಕಾದ ಸಿ.ಎಂ.ಎಸ್.
ವಿದ್ಯುತ್ ಕಂಪನಿ ನಮ್ಮೊಡನೆ
ಕುಕತೆ ನಡೆಸುತ್ತಿತ್ತು. ಅದರ ಇಬ್ಬರು
ಾರಿಗಳು ಅಮೇರಿಕಾದಲ್ಲಿ ನನ್ನನ್ನು ಭೇಟಿ
ಎನ್ರೋನ್ ಎದುರಿಸುತ್ತಿರುವ ಸಮ
ಪ್ರಸ್ತಾಪ ಮಾಡಿದರು. ನಮ್ಮ ಒಪ್ಪಂ
ಶರತ್ತುಗಳು ಭಿನ್ನವಾಗಿವೆ, ಭಾರತದ
ಅದನ್ನು ಆಗಲೇ ನಿಮ್ಮ ಮುಂದೆ
ಎಂದೆ. ಭಾರತದ ಕಂಪನಿ ಸಿ.ಎಂ.ಎಸ್.
ಧಿಗಳಿಗೆ 'ನಿಮಗೆ ಶರತ್ತುಗಳು ಒಪ್ಪಿ
ಇಲ್ಲವೇ ತಿಳಿಸಿ, ಇಲ್ಲವೇ ನಾವು
ಯವರನ್ನು ಸಂಪರ್ಕಿಸುತ್ತೇವೆ" ಎಂದು
ತು. ಅವರಿಗೆ ನಿರ್ಧಾರಕ್ಕೆ ಬರಲು
ತಿಂಗಳ ಸಮಯ ಬೇಕೆಂದರು.
ಇರಲಿ, ಎನ್ರೋನ್ ಮಾದರಿ ಒಪ್ಪಂದ
ವಿಲ್ಲ ಎಂಬುದು ನಮ್ಮ ನಿರ್ಧಾರ.
ತ್ ಉತ್ಪಾದನಾ ಸಾಧನಗಳ ವಲಯ
ಬಿ.ಹೆಚ್.ಇ.ಎಲ್. ಅತ್ಯುತ್ತಮ ಕಂಪೆ
ಲ್ಲಿ ಒಂದು. ಸರಕಾರ ಅದನ್ನು ಹಾಳು
ತುತ್ತಿದೆ ಎಂದು ವಿದ್ಯುತ್ ಮಂತ್ರಿಗಳ
ಳನದಲ್ಲಿ ನಮ್ಮ ಮಂತ್ರಿಗಳು ಹೇಳಿ
ಅವರ ಅಭಿಪ್ರಾಯವನ್ನು ಭಾಗಶಃ
ಂಡು ಟೆಂಡರ್ ಗಳನ್ನು ಕರೆದಲ್ಲಿ
ಚ್.ಇ.ಎಲ್. ಕೂಡಾ ಭಾಗವಹಿಸಬ
, ಏಕೆಂದರೆ ಪ್ರತಿ ಮೆಗಾವಾಟ್
ದನಾ ಖರ್ಚು ಅದರನ್ನು ಕಮ್ಮಿ
ಹೇಳಲಾಯಿತು. ಪಶ್ಚಿಮ ಬಂಗಾಳ
ನಾವಂತೂ ನಮ್ಮ ಹಾಗೂ ಖಾಸಗೀ
ಆರ್ಡರುಗಳನ್ನು ನೀಡಿ
ಚ್.ಇ.ಎಲ್.ಗೆ ನೆರವು ನೀಡಿದ್ದೇವೆ.

ಸಾರ್ವಜನಿಕ ವಲಯದ ರಕ್ಷಣೆಯಲ್ಲಿ ಬಂಗಾಳ ಸರಕಾರದ ಪಾತ್ರವೇನು?

ನಾನು ಈಗಾಗಲೇ ಹೇಳಿರುವಂತೆ ರಾಜ್ಯ
ಹೊಸ ಉದ್ದಿಮೆಗಳ ಸ್ಥಾಪನೆಯನ್ನು
ಸ್ವಾಗತಿಸುತ್ತೇವೆ. ಆದರೆ ಅದೇ
ಕೇಂದ್ರ ಸಾರ್ವಜನಿಕ ವಲಯದ
ಮೆಗಳನ್ನು ದುರ್ಬಲಗೊಳಿಸುವುದರ
ಮುಚ್ಚುವುದರ ವಿರುದ್ಧ ನಾವು
ಬಳಿ ಹೋಗಿ ಅವರನ್ನು ಅಣಿನೆರೆ
ವೆ. ಈ ವಿಷಯದಲ್ಲಿ ನಾನು ಪ್ರಧಾ
ತ್ರಿಗಳನ್ನು, ಹಣಕಾಸು ಮಂತ್ರಿಗಳನ್ನು
ಇತರರನ್ನು ಭೇಟಿ ಮಾಡಿ ಅವರು
ತಮ್ಮ ನೀತಿಗಳನ್ನು ಬದಲಿಸುವಂತೆ ಪ್ರಯ
ತ್ನಿಸಿದ್ದೇನೆ. ಹೊಸ ಉದ್ದಿಮೆಗಳು (ಖಾಸಗೀ
ವಲಯದಲ್ಲಿ) ಬಂದರೂ ಅವು ಕೇಂದ್ರೋ
ದ್ದಿಮೆಗಳನ್ನು ಮುಚ್ಚುವುದರಿಂದ ಆಗುವ
ನಷ್ಟಕ್ಕೆ ಪರಿಹಾರವಾಗಲಾರವು, ಎಂದು
ನಾನು ಹೇಳಿದ್ದೇನೆ. ಕೇಂದ್ರ ಕಾರ್ಮಿಕ
ಸಂಘಟನೆಗಳು ನಮ್ಮ ನೀತಿಗೆ ಬೆಂಬಲವಾಗಿ
ನನ್ನ ಬಳಿ ಬಂದರು. ಸಾರ್ವಜನಿಕ ವಲಯ
ವನ್ನು ದುರ್ಬಲ ಗೊಳಿಸುವ ವಿರುದ್ಧ
ಅವರು ಸರ್ವಾನುಮತದ ನಿರ್ಣಯ ಅಂಗೀ
ಕರಿಸಿದ್ದಾರೆ. ಉದಾಹರಣೆಗೆ ಇಸ್ಕೋ
(IISCO) ಭಾರತೀಯ ಕಬ್ಬಿಣ-ಉಕ್ಕು
ಕಾರ್ಖಾನೆ) ಖಾಸಗೀಕರಣದ ವಿರುದ್ಧ ದೊಡ್ಡ
ಆಂದೋಲನ ನಡೆದಿದೆ. BIFR ಒಂದು
ವರದಿ ನೀಡಿದೆ. ಆದರ ಖಾಸಗೀಕರಣದ
ವಿರುದ್ಧ ಅಶೋಕ್ ಮಿತ್ರಾ ಸಮಿತಿಯ
ಒಂದು ಅಪಿರೋಧ ವರದಿಯಿದೆ. ಇಸ್ಕೋ
ವನ್ನು ಪುನರುಜ್ಜೀವನಗೊಳಿಸುವ ಒಂದು
ಯೋಜನೆಯಲ್ಲಿ ರಾಜ್ಯ ಸರಕಾರ ಭಾಗವಹಿ
ಸಲು ಸಿದ್ಧವೇ ಎಂದು ಬಿ.ಐ.ಎಫ್.ಆರ್.
ನನ್ನನ್ನು ಕೇಳಿತು. SAIL (ಉಕ್ಕು ಪ್ರಾಧಿ
ಕಾರ) ಅದನ್ನು ನಡೆಸುವುದಾದರೆ ನಾವು
ಭಾಗವಹಿಸುತ್ತೇವೆ ಎಂದೆ. ಹೀಗೆ ನಾವು
ರಾಜ್ಯ ವಲಯವನ್ನು ಮೂಲಭೂತ ರೈಲ್ವೇ,
ದೂರಸಂಪರ್ಕ, ಬ್ಯಾಂಕ್, ವಿಮೆ, ರಸಗೊ
ಬ್ಬರ, ವ್ಯಾಗನ್ ಉದ್ದಿಮೆ ಇತ್ಯಾದಿಗಳನ್ನು
ಖಾಸಗೀಕರಿಸುವುದರ, ದುರ್ಬಲಗೊಳಿಸು
ವುದರ ವಿರುದ್ಧ ಕಠಿಣ ಹೋರಾಟ ನಡೆಸಿ
ದ್ದೇವೆ..... ಪಶ್ಚಿಮ ಬಂಗಾಳದಲ್ಲಿ 8-9
ಕೇಂದ್ರ ಸರಕಾರದ ಕಾರ್ಖಾನೆಗಳನ್ನು ಮುಚ್ಚುವ
ನೋಟೀಸ್ ಕೊಡಲಾಗಿದೆ. 41 ಸಾವಿರ
ಕಾರ್ಮಿಕರಿರುವ ಚಿತ್ತರಂಜನ್ ರೈಲು ಇಂಜಿನ್
ಕಾರ್ಖಾನೆಗೆ, ಸರಕಾರದ ವ್ಯಾಗನ್ ಕಾರ್ಖಾ
ನೆಗಳಿಗೆ ಆರ್ಡರುಗಳನ್ನು ನೀಡಲಾಗುತ್ತಿಲ್ಲ.
ನಾನು ಇದರ ವಿರುದ್ಧ ಪ್ರತಿಭಟಿಸಿದ್ದೇನೆ.
ಕೇಂದ್ರವ ವ್ಯಾಗನ್ ಕಾರ್ಖಾನೆಗಳನ್ನು ಕಳಚಿ
ಹಾಕಿವರೆ ಎರಡು ಲಕ್ಷಕ್ಕೂ ಹೆಚ್ಚು ಕಾರ್ಮಿ
ಕರು ಕೆಲಸ ಕಳಕೊಳ್ಳುತ್ತಾರೆ.

ಸಿ ಕಾರ್ಮಿಕರಲ್ಲಿನ ಅಸಂತೃಪ್ತಿಯಿಂದಾಗಿ ಪಶ್ಚಿಮ ಬಂಗಾಳದ ಕೈಗಾರಿಕಾ ವಾತಾವರಣ ಚೆನ್ನಾಗಿಲ್ಲ ಎಂಬ ಅಪಪ್ರಚಾರದ ಬೆಳಕಿನಲ್ಲಿ ಕಾರ್ಮಿಕರ ಪ್ರಶ್ನೆಯ ಬಗ್ಗೆ ನಿಮ್ಮ ನಿಲುವೇನು?

ನಾನು ಹಲವು ಬಾರಿ ಹೇಳಿದ್ದೇನೆ-
ನಮ್ಮ ಸಂಸದೀಯ ಪ್ರಜಾಪ್ರಭುತ್ವದಲ್ಲಿ ದುಡಿ

ಪುಟ 6 ನೋಡಿ

ಸಕ್ಕರೆ ನುಂಗಿದ್ದಕ್ಕೆ ಪುರಾವೆ

ಕಳೆದ ವರ್ಷ ಆಮದು ಸಕ್ಕರೆ ಎಂಬ ಸಕ್ಕರೆಗೆ ಯದ್ವಾತದ್ವಾ ಬೆಲೆ ತೆರಲಾರದೆ ಒದ್ದಾಡಿದ ನೆನಪು ಕಹಿ ಚಹ/ಕಾಫಿ ಕುಡಿದ ನೆನಪಿರಬೇಕಲ್ಲವೆ? ಸಕ್ಕರೆಯ ಬೆಲೆ ಹೀಗೆ ಏರಿದರ ಹಿಂದೆ ದೊಡ್ಡ ಹಗರಣ ನಡೆದಿದೆ ಎಂದು ಹಲವು ಪತ್ರಿಕೆಗಳು ಬರೆದಿದ್ದವು, ವಿರೋಧ ಪಕ್ಷಗಳೂ ಈಬಗ್ಗೆ ಸಾಕಷ್ಟು ಗಲಾಟೆ ಮಾಡಿದ್ದವು. ಹಗರಣ ನಡೆದಿದ್ದರ ಬಗ್ಗೆ ಸಂದೇಹವೇನೂ ಇಲ್ಲದಿದ್ದರೂ, ಗಟ್ಟಿ ಪುರಾವೆಗಳು ದೊರೆತಿರಲಿಲ್ಲ.

ಈಗ 'ಎಕಾನಾಮಿಕ್ ಟೈಮ್ಸ್' ಎಂಬ ಇಂಗ್ಲಿಷ್ ದಿನಪತ್ರಿಕೆ ಈ ಹಗರಣದ ಬಗ್ಗೆ ತನಗೆ ಗಟ್ಟಿಯಾದ ಪುರಾವೆಗಳೇ ದೊರೆತಿವೆ ಎಂದು ಹೇಳಿದೆ. ದೊರೆತಿರುವ ಈ ದಸ್ತಾವೇಜುಗಳ ಪ್ರಕಾರ 1994ರ ಅಕ್ಟೋಬರ್ ವೇಳೆಗೇ ಬ್ರೆಜಿಲ್ ಟನ್ನೊಂದಕ್ಕೆ 270 ಅಮೇರಿಕನ್ ಡಾಲರ್ ಗಳಿಗೆ ಮಾರಲು ಮುಂದೆ ಬಂದಿತ್ತು. ಈ ವೇಳೆಗೆಯಲ್ಲಿ ಭಾರತ ತೆತ್ತ ಬೆಲೆ ಎಷ್ಟು ಗೊತ್ತೇ? ಟನ್ನೊಂದಕ್ಕೆ 383.50 ಅಮೇರಿಕನ್ ಡಾಲರುಗಳು. ಅಂದರೆ ಟನ್ನಿಗೆ 113.50 ಅಮೇರಿಕನ್ ಡಾಲರು ಗಳಷ್ಟು ಹೆಚ್ಚು.ಇದು ರೂಪಾಯಿಗಳಲ್ಲಿ 3518.50ರಷ್ಟು. ಕ್ವಿಂಟಾಲಿಗೆ 350ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊಟ್ಟು ಸಕ್ಕರೆ ಆಮದು ಮಾಡಿಕೊಳ್ಳಲಾಯಿತು. ಇದನ್ನು ಸಕ್ಕರೆ ಕೊಂಡುಕೊಳ್ಳುವವರಿಗೆ ದಾಟಿಸಲಾಯಿತು. ಕೋಟಿಗಟ್ಟಲೆ ರೂಪಾಯಿಗಳ ಅವ್ಯವಹಾರ ನಡೆಯಿತು. ಈ ಹಣ ಎಲ್ಲಿ ಹೋಯಿತು?

ಬ್ರೆಜಿಲ್ ಪೂರೈಸುವ ಸಕ್ಕರೆ ಗುಣಮಟ್ಟದಲ್ಲೇನಾದರೂ ಕೀಳುದರ್ಜೆಯದಾಗಿತ್ತೆ? ಇಲ್ಲ ಅತ್ಯುತ್ತಮ ಮಟ್ಟದ ಕಬ್ಬಿನಿಂದ ತಯಾರಾದ ಅತ್ಯುತ್ತಮ ಮಟ್ಟದ ಸಕ್ಕರೆಯನ್ನೇ ಅದು ಪೂರೈಸಲು ಸಿದ್ಧವಿತ್ತು. ಇದಲ್ಲದೆ ಸಕ್ಕರೆಯ ಗುಣಮಟ್ಟದ ಬಗ್ಗೆ ಎಲ್ಲ ತರಹದ ಧೃಢಿಕರಣ ಪತ್ರಗಳನ್ನು ಅದು ನೀಡಲು ಸಿದ್ಧವಿತ್ತು.

ಇವೆಲ್ಲವೂ ಇದ್ದರೂ ನಾವು, ಅಂದರೆ ನಮ್ಮ ಸರ್ಕಾರೀ ಸಂಸ್ಥೆಗಳು ಬ್ರೆಜಿಲ್‌ನ ಸಕ್ಕರೆ ಆಮದು ಮಾಡಿಕೊಳ್ಳಲಿಲ್ಲ. ಪ್ಯಾರಿಸ್ಸಿನ ಏಜೆಂಟರೊಬ್ಬರ ಮೂಲಕ ಸಕ್ಕರೆ ಆಮದು ಮಾಡಿಕೊಂಡವು. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಕ್ಕರೆ ದೊರೆಯುವಾಗ ಈ ಪ್ಯಾರಿಸ್ಸಿನ ಏಜೆಂಟ್ ಬ್ರೆಜಿಲ್ ಸಕ್ಕರೆಯನ್ನೇ ಕೊಂಡು ನಮಗೆ ಕಳಿಸಿಲ್ಲ ಎನ್ನುವಂತಿಲ್ಲ. ವ್ಯತ್ಯಾಸದ ಮೊತ್ತದ ಹಣ ಯಾವ ಸರ್ಕಾರಿ ರಾಜಕಾರಣಿಯ ಕಿಸೆಗೆ ಹೋಯಿತು? ಇದು ಇನ್ನೂ ಹೊರಬರಬೇಕು.

"ಮೋಸಕ್ಕೂ ವಿಮೆ ಬೇಕು"

ನ್ಯಾಯವಾದ ಕಾನೂನು ವಿಹಿತದ ವ್ಯವಹಾರದಲ್ಲಿ ತೊಡಗಿರುವವರು ವಿಮೆ ಮಾಡಿಸುತ್ತಾರೆ. ಇಂತಹ ವ್ಯವಹಾರದಲ್ಲಿ ಅನಿರೀಕ್ಷಿತ ಆಕಸ್ಮಿಕವಾಗಿ ಏನಾದರೂ ಆದರೆ ಅದರಿಂದುಂಟಾಗುವ ಹಾನಿಗೆ ಪರಿಹಾರ ದೊರೆಯಲೆಂದು. ಆದರೆ ಕಾನೂನುಬಾಹಿರ ಮತ್ತು ಅನ್ಯಾಯದ ಕೆಲಸ ಮಾಡುವವರಿಗೆ ಈ ವಿಮೆಯ ಲಾಭ ದೊರೆಯಲಾರದು.

ಆದರೆ ಎನ್ರಾನ್ ಎಂಬ ಬಹುರಾಷ್ಟ್ರೀಯ ಕಂಪನಿ ಈಗ ತನ್ನ ಯೋಜನೆಗಳಿಗೆ ರಾಜಕೀಯ ರಿಸ್ಕಿನ ವಿಮೆ ಬೇಕು ಎಂದು ಕೇಳುತ್ತಿದೆ. ಇದು ಅವರ ದಾಬೋಲ್ ಯೋಜನೆ ವಿವಾದವುಂಟು ಮಾಡಿದ್ದರ ಹಿನ್ನೆಲೆಯಲ್ಲಿ ಬಂದಂತಹದ್ದು.

ಮೇಲ್ಮುಂಬಯಿಯಲ್ಲಿ ಆಗಲೇ ಶೋಧಿತ ಕ್ಷೇತ್ರದಲ್ಲಿ ತೈಲ ಮತ್ತು ಅನಿಲ ಶೋಧ ನಡೆಸಲು ಎನ್ರಾನ್ ರಿಲೈನ್ಸ್ ಮತ್ತು ಒ.ಎನ್.ಜಿ.ಸಿ.ಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈಗ ಈ ಯೋಜನೆಗೆ 200 ದಶಲಕ್ಷ ಡಾಲರುಗಳ ವಿಮೆಯನ್ನು ಅದು ಪಡೆದುಕೊಂಡಿದೆಯಂತೆ. ಈ ವಿಮೆ ರಾಜಕೀಯ ಅನಿಶ್ಚಿತತೆಯಿಂದ ರಕ್ಷಣೆಗಾಗಿ.

ದಾಬೋಲ್‌ನ ತನ್ನ ಯೋಜನೆಯಲ್ಲಿ ಮೋಸ ಮಾಡಿ ಲಾಭ ಪಡೆವ ಹುನ್ನಾರ ಮಾಡಿದ್ದಕ್ಕೆ ಈ ಯೋಜನೆಯ ಗುತ್ತಿಗೆ ಅದರ ಕೈ ತಪ್ಪಿ ಹೋಗುತ್ತಿರುವುದರಿಂದ ಈ ವಿಮೆ. ಎನ್ರಾನ್ ಗೆ ತಾನು ಮಾಡುವ ಮೋಸಗಳಿಗೂ ವಿಮೆ ಬೇಕು? ಹೇಗಿದೆ ಈ ನೀತಿ?

ಇಸ್ಕೊ ಭವಿಷ್ಯ ಅನಿಶ್ಚಿತ

ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ ಇಸ್ಕೊದ ಭವಿಷ್ಯ ಈಗ ಅನಿಶ್ಚಿತವಾಗಿ ಹೋಗಿದೆ. ರೋಗಗ್ರಸ್ತವಾಗಿ ಬಿಐಎಫ್‌ಆರ್ ಸಂಸ್ಥೆಯ ತೀರ್ಮಾನದ ಮೇಲೆ ಅವಲಂಬಿತವಾದ ಅದು ಸರ್ಕಾರದ ಅಡೆತಡೆಯ ನೀತಿಯಿಂದಾಗಿ ಯಾವುದೇ ಪುನರುಜ್ಜೀವನ ಯೋಜನೆಗೆ ಸಿಗದೇ ಹೋಗಿದೆ.

ಕೇಂದ್ರ ಸರ್ಕಾರ ಈ ಕಂಪನಿಯ ಪುನರುಜ್ಜೀವನಕ್ಕಾಗಿ 1100 ಕೋಟಿ ರೂಪಾಯಿಗಳನ್ನು ನೀಡಬೇಕಾಗಿತ್ತು. ಆದರೆ ಅದು ನೀಡಲು ಒಪ್ಪಲಿಲ್ಲ. ಈಗ ಮತ್ತೆ ಬಿ ಐ ಎಫ್ ಆರ್ ನ ಮುಂದೆ ಈ ಪ್ರಕರಣ ಬರಬೇಕು.

ಸಕಾಲದಲ್ಲಿ ನಿರ್ಧಾರ ತೆಗೆದು ಕೊಳ್ಳಬೇಕಾದ, ಇಂತಹ ಪರಿಸ್ಥಿತಿಯಲ್ಲಿ ಅವಶ್ಯಕ. ರೋಗಿಯೊಬ್ಬನಿಗೆ ಔಷದಿ ನೀಡಬೇಕೋ ಬೇಡವೊ ಎಂದು ನಿರ್ಧಾರ ತೆಗೆದು ಕೊಂಡಷ್ಟೇ ಸೂಕ್ಷ್ಮ ಇದು. ಕಂಪನಿಯ ಕಾರ್ಯಾಚರಣೆಯಲ್ಲಿ ಹಣ ಖರ್ಚಾಗುವುದರಿಂದ ಇಂತಹ ನಿರ್ಧಾರವನ್ನು ಸಕಾಲದಲ್ಲಿ ತೆಗೆದು ಕೊಳ್ಳದ್ದರೆ ಹಾನಿಯ ಪ್ರಮಾಣ ಬಹಳ ಹೆಚ್ಚಾಗಿ ರೋಗಗ್ರಸ್ತ ಉದ್ದಿಮೆ ಸಾಯಲೇ ಬೇಕಾದ ಪರಿಸ್ಥಿತಿ ಬರುತ್ತದೆ.

ಸರ್ಕಾರಕ್ಕೆ ಅದೇ ಸ್ಥಿತಿ ಬೇಕು ಎಂದು ತೋರುತ್ತದೆ. ಹಿಂದೆಯೂ ಸಹ ಸರ್ಕಾರ ಇಸ್ಕೊವನ್ನು ಖಾಸಗಿಯವರಿಗೆ ಮಾರಿಬಿಡುವ ಹುನ್ನಾರ ಮಾಡಿತ್ತು. ಮುಕಂದ್ ಎಂಬ ಕಂಪನಿ ಮೂರುಕಾಸಿಗೆ ಈ ಇಸ್ಕೊವನ್ನು ಕೊಂಡು ಜೇಬಿಗಿಳಿಸಿಕೊಳ್ಳಲು ಹವಣಿಸಿತ್ತು. ಈಗಲೂ ಮುಕಂದ್ ಮತ್ತು ಇತರ ಹಲವು ಕಂಪನಿಗಳು ಇಸ್ಕೊವನ್ನು ಕೊಂಡು ಕೊಳ್ಳಲು ಸಿದ್ಧವಾಗಿವೆ.

ಈ ಖಾಸಗೀಕರಣವನ್ನು ಟ್ರೇಡ್ಯೂನಿಯನ್ ಗಳು ವಿರೋಧಿಸುತ್ತಿವೆ ಆದ್ದರಿಂದ ಈ ದಾರಿಯಲ್ಲಾದರೂ ಟ್ರೇಡ್ ಯೂನಿಯನ್ನುಗಳನ್ನು ಬಗ್ಗು ಬಡಿಯುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿರಬೇಕು.



ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆ

ಕಳೆದ ವರ್ಷದಲ್ಲಿ ಅಂದರೆ 1994-95ರಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಹುತೇಕ ಬ್ಯಾಂಕುಗಳು ಲಾಭಗಳಿಸಿವೆ. ಇದಲ್ಲದೆ ಇವು ಠೇವಣಿ ಸಂಗ್ರಹಣೆ ಮತ್ತು ಸಾಲ ನೀಡಿಕೆಯಲ್ಲೂ ಸಾಧನೆಗೈದಿವೆ. ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳು ಒಟ್ಟು ಬ್ಯಾಂಕ್ ಠೇವಣಿಯ ಶೇ 57 ರಷ್ಟನ್ನು ಸಂಗ್ರಹಿಸಿವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಸಹವರ್ತಿ ಬ್ಯಾಂಕುಗಳ ಈ ಒಟ್ಟಾರೆ ಬ್ಯಾಂಕ್ ಠೇವಣಿಗಳ ಶೇ 25.7 ರಷ್ಟನ್ನು ಸಂಗ್ರಹಿಸಿವೆ.

ಹಾಗೆಯೇ ಸಾಲ ನೀಡಿಕೆಯಲ್ಲಿ, ಒಟ್ಟು ಬ್ಯಾಂಕ್ ಸಾಲ ನೀಡಿಕೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಪಾಲು ಶೇ 50.4 ರಷ್ಟು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಸಹವರ್ತಿ ಬ್ಯಾಂಕುಗಳದ್ದು ಇನ್ನೊಂದು ಶೇ 32.5 ರಷ್ಟು.

ಇದು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಸಾಧನೆ. ಬ್ಯಾಂಕುಗಳು ಅಸಮರ್ಥವಾದರೆ ಅದರಲ್ಲಿ ಸರ್ಕಾರದ ಪಾಲೇ ದೊಡ್ಡದು ಎಂಬುದು ಇದರಿಂದ ಗೊತ್ತಾಗುತ್ತದೆ.

ಮೋಸ ಮಾಡಲು ಮಾತ್ರ........
ಾಗಾದರೆ ಈ ಸರಕಾರೀ ಕ್ರಮಗಳು
ವಿರುದ್ಧ? ತುರ್ತು ಪರಿಸ್ಥಿತಿಯ
ಣೆಯ ನಂತರ ಸರಕಾರ ಕೈಗೊಂಡ
ನ್ನು ನೋಡಿದರೆ ಒತ್ತು ಜನಗಳ
ವೇ ಎಂಬುದರಲ್ಲಿ ಯಾವ ಸಂಶ
ಉಳಿಯುವುದಿಲ್ಲ. ಜನಗಳಿಗೆ ಇದ್ದ
ನ್ನು ಮೊಟಕುಮಾಡಲಾಗಿದೆ......ಪ್ರತಿ
ಪ್ರತಿಗಂಟೆ ಸಂವಿಧಾನದಲ್ಲಿ ಬದಲಾ
ಬರುತ್ತಿದೆ. ಇಡೀ ಸಂವಿಧಾನವನ್ನೇ
ಅಥವಾ ಹೊರಗೆಸೆದು ಪ್ರಧಾನ
ಗಳೇ ತಮ್ಮ ಕೈಗೇ ಅಧಿಕಾರವನ್ನು
ಬಾರದೇಕೆ? ಕಾನೂನಿನ ಎದುರು
ತೆ ಎಂಬುದು ಕೂಡಾ ಇಲ್ಲದಂತಾ
ಭೆ, ಮತಪ್ರದರ್ಶನಗಳನ್ನು ದೇಶಾ
ಷೇಧಿಸಲಾಗಿದೆ. ಸರಕಾರದ, ಕಾಂಗ್ರೆಸ್
ಬಗ್ಗೆ ತುಸು ಟೀಕೆಗೂ ಅವಕಾಶವಿಲ್ಲ,
ರ, ರೈತರ, ಕೃಷಿಕೂಲಿಕಾರರ ಆಂದೋ
ಯಕೂಡದಂತೆ- ಅದರಿಂದ ಉತ್ಪಾ
ಕುಂಠಿತವಾಗುತ್ತದಂತೆ.
ಕಾರಣಕ್ಕಾಗಿ ಮುಷ್ಕರಗಳನ್ನು
ಿಷೇಧಿಸಿಲ್ಲ, ಆದರೆ ಸರಕಾರೀ ಕಾರ್ಖಾ
ಲಾಕೌಟ್, ಲೇ ಆಫ್ ಗಳಿಗೇನೂ
......
ರ ಹಿತಾಸಕ್ತಿ ರಕ್ಷಿಸಲು ಈ
ಸರ್ವಾಧಿಕಾರ? ದುಡಿಯುವ ಜನರ ಹಿತಾ
ಸಕ್ತಿ ರಕ್ಷಣೆಗೆ ಅಲ್ಲ; ಮಧ್ಯಮ ವರ್ಗದ
ನೌಕರರ ಹಿತಾಸಕ್ತಿ ರಕ್ಷಣೆಗೆ ಅಲ್ಲ; ಕೃಷಿಕೂ
ಲಿಕಾರ ಹಿತಾಸಕ್ತಿ ರಕ್ಷಣೆಗೂ ಅಲ್ಲ. ಚೇಂಬರ್
ಆಫ್ ಕಾಮರ್ಸ್ ನ ಸದಸ್ಯರ ಹಿತಾಸಕ್ತಿ
ರಕ್ಷಿಸಲು ಮಾತ್ರ. ಪ್ರಧಾನ ಮಂತ್ರಿಗಳ
ಮನೆಗೆ ಹೋಗಿ ಅವರನ್ನು ಬೆಂಬಲಿಸಿದ ಈ
ಸದಸ್ಯರ ಹಿತಾಸಕ್ತಿ ರಕ್ಷಿಸಲು ಮಾತ್ರ.
"ರಾಷ್ಟ್ರೀಕರಣ ವಿರುವುದಿಲ್ಲ ಹೆದರಬೇಡಿ"
ಎಂದು ಅವರಿಗೆ ಅಭಯ
ನೀಡಲಾಯಿತು....

....

....ತುರ್ತು ಪರಿಸ್ಥಿತಿ ಬಲ
ಪ್ರತಿಗಾಮಿ ಪಕ್ಷಗಳ ವಿರುದ್ಧ
ಮಾತ್ರವೆಂಬುದು ಕೇವಲ
ಒಂದು ಸೋಗು. ಏಕೆಂದರೆ
ಸಿಪಿಐ(ಎಂ) ಮತ್ತು ಇತರ
ಪ್ರಜಾಪ್ರಭುತ್ವವಾದಿ ಪಕ್ಷಗಳ
ಸಾವಿರಾರು ಕಾರ್ಯಕರ್ತ
ರನ್ನು ಮುಖಂಡರನ್ನು ಬೇಕಾ
ಬಿಟ್ಟಿಯಾಗಿ ಬಂಧಿಸಲಾಗುತ್ತಿದೆ.

ಕೈಗಾರಿಕೋದ್ಯಮಿಗಳು ಉತ್ಪಾದನೆಯ
ಹೆಸರಲ್ಲಿ ಕೆಲಸದ ಹೊರೆ ಹೆಚ್ಚಿಸಬಹುದು.
ಕಾರ್ಮಿಕರನ್ನು ರಿಟ್ರೆಂಚ್ ಮಾಡಬಹುದು,
ಪ್ರತಿಭಟಿಸಿದರೆ ಜಚ್ಚಿಹಾಕಲಾಗುವುದು. ವೇತನ
ಕಡಿತ, ತುಟ್ಟಿಭತ್ಯೆ ಕಡಿತ ಮಾಡಬಹುದು.
ಅದನ್ನು ಪ್ರತಿರೋಧಿಸುವಂತಿಲ್ಲ, ಸ್ವಲ್ಪ ಪ್ರತಿ
ಭಟಿಸಿದರೆ ಏಕ್ ದಂ ಕೆಲಸದಿಂದ ವಜಾ.
ಗ್ರಾಮೀಣ ಪ್ರದೇಶದಲ್ಲಿ. ಕೃಷಿಕೂಲಿಕಾರ
ರಿಗೂ ಇದೇ ಗತಿ. ಶೋಷಣೆಯ ವಿರುದ್ಧ
ಆಂದೋಲನ ನಡೆಸುವಂತಿಲ್ಲ. ಆದ್ದರಿಂದ
ಇದು ಎಲ್ಲಾ ಜನಗಳ ಮೇಲೆ ಬಂಡವಾಳ
ಶಾಹಿ-ಭೂಮಾಲಕರ ಸರ್ವಾಧಿಕಾರ. ಆದ್ದ
ರಿಂದ ಇದಕ್ಕೆ ಬಂಡವಾಳಶಾಹೀ ಮಾಲಕರ
ವ್ಯಾಪಾರಸ್ಥರ ಸಂಸ್ಥೆಗಳು
ಗಂಟಲು ಬಿರಿಯುವಂತೆ
ಬೆಂಬಲ ಸಾರುತ್ತಿದ್ದಾರೆ.
ಸ್ವತಂತ್ರ ಭಾರತದಲ್ಲಿ ಮೊತ್ತ
ಮೊದಲ ಬಾರಿಗೆ ಬಿರ್ಲಾ
ರಂತಹ ಉದ್ಯಮಿಗಳು
ಮೆರವಣಿಗೆಯಲ್ಲಿ ಹೋಗಿ
ಶ್ರೀಮತಿ ಇಂದಿರಾಗಾಂಧಿ
ಯವರಿಗೆ ಬೆಂಬಲ ವ್ಯಕ್ತ
ಪಡಿಸುತ್ತಿದ್ದಾರೆ. ಹೀಗಿರು
ವಾಗ ಒಂದೆಡೆ ಸರಕಾರ
ಈ ಕ್ರಮಗಳೆಲ್ಲಾ ಬಲಪ್ರತಿಗಾಮಿಗಳ ವಿರುದ್ಧ
ಎನ್ನುತ್ತಿರುವಾಗಲೇ ಕಾಂ. ಎಂ. ಬಸವಪುನ್ನಯ್ಯ,
ನಮ್ಮ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರು,
ಕೇಂದ್ರ ಸಮಿತಿ ಸದಸ್ಯ ಮೋಹನ್
ಪುನಾಮಿಯಾ, ಲೋಕ್ ಸಭೆಯ ಇಬ್ಬರು

> ಇದು ಎಲ್ಲಾ ಜನಗಳ ಮೇಲೆ ಬಂಡವಾಳಶಾಹಿ-ಭೂಮಾಲಕರ ಸರ್ವಾಧಿಕಾರ. ಆದ್ದರಿಂದ ಇದಕ್ಕೆ ಬಂಡವಾಳಶಾಹೀ ಮಾಲಕರ ವ್ಯಾಪಾರಸ್ಥರ ಸಂಸ್ಥೆಗಳು ಗಂಟಲು ಬಿರಿಯುವಂತೆ ಬೆಂಬಲ ಸಾರುತ್ತಿದ್ದಾರೆ. ಸ್ವತಂತ್ರ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಬಿರ್ಲಾರಂತಹ ಉದ್ಯಮಿಗಳು ಮೆರವಣಿಗೆಯಲ್ಲಿ ಹೋಗಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ.

ಜುಲೈ 27, 1995ರ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಮುಖಪುಟ: ಎ.ಕೆ.ಜಿ.ಯವರ ಭಾಷಣವನ್ನು, ತುರ್ತುಪರಿಸ್ಥಿತಿಗೆ ಸಿಪಿಐ(ಎಂ)ನ ತೀವ್ರ ವಿರೋಧವನ್ನು ಸೆನ್ಸಾರ್ ಮಾಡಿದ್ದರಿಂಧ ಖಾಲಿ ಬಿದ್ದ ಸಾಲುಗಳನ್ನು ಕಾಣಬಹುದು

ಸದಸ್ಯರು ಜ್ಯೋತಿರ್ಮಯ ಬಸು ಮತ್ತು ನೂರುಲ್ ಹುದಾರನ್ನು ಬಂಧಿಸಿದರೆ ಆಶ್ಚರ್ಯವೇನು?.................

ಇದು ಸರಕಾರ ಕಳೆದ 27 ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ಜನ-ವಿರೋಧಿ ನೀತಿಗಳ ಅನಿವಾರ್ಯ ಫಲ....................

ಪಶ್ಚಿಮ ಬಂಗಾಳದಲ್ಲಿ ಬಲಪ್ರತಿಗಾಮಿಗಳ ಶಕ್ತಿ ನಗಣ್ಯ ಎಂದು ಈಗ ಒಪ್ಪಿಕೊಳ್ಳಲಾಗುತ್ತಿದೆ. ಆದರೆ ಎಡ-ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ಅವಿರತವಾಗಿ ನಡೆದಿದೆ. ಇದನ್ನೀಗ ಕೇರಳಕ್ಕೂ ವಿಸ್ತರಿಸಲಾಗಿದೆ.

ಈ ದಮನವನ್ನು ಎದುರಿಸಿ ಆಂದೋಲನ ಈ ಎರಡೂ ರಾಜ್ಯಗಳಲ್ಲಿ ಬೆಳೆದಿದೆಯಷ್ಟೇ ಅಲ್ಲ, ಅದು ಬೇರೆ ಪ್ರದೇಶಗಳಿಗೂ ಹರಡಿದೆ. ಆಳರಸರ ಗರೀಬಿ ಹಟಾವೋ, ಬೇಕಾರಿ ಹಟಾವೋ ಘೋಷಣೆಗಳ ಟೊಳ್ಳನ್ನು ಬಯಲಿಗೆಳೆಯುತ್ತಾ ಜನ ಮುಂದೆ ಸಾಗುತ್ತಿದ್ದಾರೆ.

ಪುಟ 8 ನೋಡಿ





ವಿಶ್ವ

ಸಚಿವರ ವಿರುದ್ಧ ಆರೋಪ ಮೇಲ್ನೋಟಕ್ಕೆ ಸಾಬೀತು

ಕೇರಳ ಇಡಮಲಯರ್ ಜಲವಿದ್ಯುತ್ ಯೋಜನೆ ಅವ್ಯವಹಾರಕ್ಕೆ ಸಂಬಂಧಿಸಿ ಈಗ ಸಾರಿಗೆ ಸಚಿವರಗಿರುವ ಆರ್.ಬಾಲಕೃಷ್ಣ ಪಿಳ್ಳೆ ಸಹಿತ 11 ಆರೋಪಿಗಳ ವಿರುದ್ದ ಆರೋಪ ಪಟ್ಟಿಸಲ್ಲಿಸಲು ವಿಶೇಷ ನ್ಯಾಯಾಲಯ ಜುಲೈ 18ರಂದು ಆದೇಶ ನೀಡಿದೆ.

ವಿದ್ಯುತ್ ಯೋಜನೆಯ ಸುರಂಗ ಸೋರುವಿಕೆ ಹಗರಣದ ಬಗ್ಗೆ ಒಂದು ವಿಶೇಷ ನ್ಯಾಯಲಯ ತನಿಖೆ ನಡೆಸುತ್ತಿದೆ.

ಪಿಳ್ಳೆ ಸಹಿತ 11 ಜನರ ವಿರುದ್ಧದ ಆರೋಪ ಮೇಲ್ನೋಟ್ಕ್ಕೆ ಸಾಬೀತಾಗಿದೆ ಎಂದು ಆಯೋಗ ಹೇಳಿದೆ.

1982ರಲ್ಲಿ ಇಡುಮಲಯದ ಜಲವಿದ್ಯುತ್ ಯೋಜನೆಗೆ ಗುತ್ತಿಗೆ ಕೊಡುವಾಗ ಆಗಿನ ಕೆ. ಕರುಣಾಕರನ್ ನೇತೃತ್ವದ ಸಚಿವ ಸಂಪುಟದಲ್ಲಿ ಬಾಲಕೃಷ್ಣ ಪಿಳ್ಳೆ ವಿದ್ಯುತ್ ಖಾತೆಯ ಮಂತ್ರಿ ಆಗಿದ್ದರು.

ಕ್ರಿಮಿನಲ್ ಒಳಸಂಚು, ಆಕ್ರಮ ಸಂಭಾವನೆ, ವಿಶ್ವಸದ್ರೋಹ ಮುಂತಾದ ಭಾರತೀಯ ದಂಡಸಂಹಿತೆಯ (ಐಪಿಸಿ) ಮತ್ತು ಭ್ರಷ್ಟಾಚರ ನಿರೋಧಕ ಕಾಯಿದೆಯನ್ವಯ ಆರೋಪಿಗಳ ಮೇಲಿನ ಆಪಾದನೆಗಳು ಮೇಲ್ನೋಟಕ್ಕೆ ನಿಜವೆಂದು ಕಾಣಲು ಅಗತ್ಯವಾದ ದಾಖಲೆಪತ್ರಗಳನ್ನು ಪ್ರಾಸಿಕ್ಯೂಷನ್ ವಿಚಾರಣೆ ಆಯೋಗಕ್ಕೆ ಸಲ್ಲಿಸಿದೆ.

ಕಾಂಗ್ರೆಸ್ ಮಂದಿಯಲ್ಲಿ ತುಂಬಿರುವ ಭ್ರಷ್ಟಾಚಾರಕ್ಕೆ 13 ವರ್ಷಗಳ ಹಿಂದಿನ ಹಗರಣ ಉದಾಹರಣೆಯಾಗಿದ್ದು ನ್ಯಾಯಾಲಯದ ಆದೇಶ ಕೇರಳಹಾಲಿ ಸಾರಿಗೆ ಸಚಿವ ಪಿಳ್ಳೆಯವರ ಮೇಲೆ ಯಾವ ಪರಿಣಾಮ ಬೀರುವುದೆಂದು ಕಾದು ನೋಡಬೇಕು

ನಿಲ್ಲದ ಪಿಡುಗು

ಈ ಭ್ರಷ್ಟಾಚಾರದ ಪಿಡುಗು ರಾಜ್ಯದಲ್ಲಿ ಅವ್ಯಾಹತವಾಗಿ ಮುಂದುವರಿದಿದೆ. ವಿಚಾರಣೆಗಾಗಿ ಕಾಯುತ್ತಿರುವ ಇಂಥ ಎಷ್ಟೋಭ್ರಷ್ಟಾಚಾರಹಾಗೂ ಅವ್ಯವಹಾರ ಪ್ರಕರಣಗಳನ್ನು ಕೇರಳ ವಿಧಾನಸಭೆಯಲ್ಲಿ ಜುಲೈ ಮೊದಲವಾರ ಪ್ರತಿಪಕ್ಷಗಳ ಸದಸ್ಯರು ಪ್ರಸ್ತಾಪಿಸಿದರು

ಭ್ರಷ್ಟಚಾರದ ವಿರುದ್ಧ ಸಮರ ಸಾರಿರುವುದಾಗಿ ಮುಂಖ್ಯಮಂತ್ರಿ ಎ.ಕೆ. ಆಂಟೋನಿ ಪದೇಪದೇ ಹೇಳುತ್ತಿದ್ದರೂ ಈ ನಿರ್ದಿಷ್ಟ ಪ್ರಕಾರಣಗಳಲ್ಲಿ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಸದಸ್ಯರು ಟೀಕಿಸಿದರು. ವಾಸ್ತವವಾಗಿ ಅವ್ಯವಹಾರದಲ್ಲಿ ಪಾಲ್ಗೊಂಡವರನ್ನು ಆಂಟೋನಿ ರಕ್ಷಿಸುತ್ತಿದ್ದಾರೆ. ಸದಸ್ಯರು ಸದನದಲ್ಲಿ ಪ್ರಸ್ತಾಪಿಸಿದ ಕೆಲವು ಪ್ರಮುಖ ಪ್ರಕರಣಗಳು.

* ಅಬ್ಕಾರಿ ಇಲಾಖೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಗಾರ್ಡ್ ಹುದ್ದೆಗಳನ್ನು ಕೃತಕವಾಗಿ ಸೃಷ್ಟಿಸಿರುವುದು. ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ರಾಜ್ಯದ ಮುಖ್ಯ ಕಾರ್ಯದರ್ಶಿ ನೀಡಿದ ವರದಿ ಇನ್ನೂಧೂಳು ತಿನ್ನುತ್ತಿದೆ. ಆರೋಪಿಗಳ ಮೇಲೆ ಸರಕಾರ ಕ್ರಮಕೈಗೊಂಡಿಲ್ಲ.
* ಮುಖ್ಯಮಂತ್ರಿಯವರ ಉಪ ಚುನಾವಣೆ ನಿಧಿಗಾಗಿ ಅಬ್ಕಾರಿ ಅಧಿಕಾರಿಗಳು 50 ಲಕ್ಷ ರೂ. ಗಳನ್ನು ಸಂಗ್ರಹಿಸಿರುವುದು.
* ರಾಜ್ಯದಲ್ಲಿ ಸುಮಾರು 44ಸಾವಿರಕ್ಕೂ ಹೆಚ್ಚು ಅನಧಿಕೃತ ಸಾರಾಯಿ ಅಂಗಡಿಗಳಿವೆ. ಇದಕ್ಕೆಲ್ಲ ಆಳುವ ನಾಯಕರ ಬೆಂಬಲವಿದೆ.
* ಸ್ಪಿರೀಟ್ ಮತ್ತು ಕಾಕಂಬಿಗಳ ಅಕ್ರಮ ಸಾಗಾಟದಿಂದಾಗಿ ಸರ್ಕಾರದ ಬೊಕ್ಕಸಕ್ಕೆ 200ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಈ ದುಷ್ಟಕೂಟಹಾರಕ್ಕೆ ಕೂಡ ಆಳುವ ಪಕ್ಷದವರ ಕೃಪಾಶೀರ್ವಾದ ಇದೆ.

ಪ್ರತಿಭಟನೆ

ಸಿಪಿಐ(ಎಂ) ಶಾಸಕ ಇ.ಪಿ. ಜಯರಾಜನ್ ಕೊಲೆಯತ್ನದ ಸಂಚಿನ ಆರೋಪಿ ಕಾಂಗ್ರೆಸ್(ಐ) ಶಾಸಕ ಸುಧಾಕರನ್ ಜುಲೈ 13 ರಂದು ಕೇರಳ ವಿಧಾನಸಭೆಯ ಅಧಿವೇಶನಕ್ಕೆ ಹಾಜರಾದರು. ಇದನ್ನು ಪ್ರತಿಪಕ್ಷಗಳು ಪ್ರತಿಭಟಿಸಿದವು.

ದೆಹಲಿ ವಿ.ವಿ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಅನ್ಯಾಯ

ದೆಹಲಿ ವಿಶ್ವ ವಿದ್ಯಾಲಯದ ಅನೇಕ ಕಾಲೇಜುಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ನಿರಾಕರಿಸಿರುವುದರಿಂದ ವಿದ್ಯಾರ್ಥಿ ಸಮುದಾಯದಲ್ಲಿ ಅತೃಪ್ತಿಯ ಅಲೆಯೆದ್ದಿದೆ.

ವಿಶ್ವ ವಿದ್ಯಾಲಯದ ನಿಯಮಗಳನ್ನೇ ಈ ಕಾಲೇಜುಗಳು ಉಲ್ಲಂಘಿಸಿವೆ. ಅನ್ಯಾಯಕ್ಕೆ ಒಳಗಾದ ಎಸ್.ಸಿ.-ಎಸ್.ಟಿ. ವಿದ್ಯಾರ್ಥಿಗಳು ಕುಲಪತಿಯವರನ್ನು ಮುತ್ತಿಗೆ ಹಾಕಿ ನ್ಯಾಯ ಕೇಳಲು ಯತ್ನಿಸಿದಾಗ ಪೋಲೀಸರು ಲಾಠಿ ಪ್ರಹಾರ ಮಾಡಿದರು. ವಿದ್ಯಾರ್ಥಿಗಳನ್ನು ಪೋಲೀಸರು ಅಟ್ಟಿಸಿಕೊಂಡು ಹೋದರು.

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಕುಲಪತಿಯವರಲ್ಲಿಗೆ ತೆರಳಿದ ನಿಯೋಗದಲ್ಲಿ ಎಸ್ಎಫ್ಐನಾಯಕಅನುರಾಗ್ಅವರೂಇದ್ದರು.

ಮೀಸಲು ಸ್ಥಾನಗಳಿಗೇ ಸಾಕಷ್ಟು ಸ್ಪರ್ಧೆಯಿರುತ್ತದೆ. ಆದ್ದರಿಂದ ಅರ್ಜಿ ಹಾಕಿದ ಎಲ್ಲಾ ಎಸ್.ಸಿ-ಎಸ್.ಟಿ. ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅಸಾಧ್ಯ ಎಂದು ಕೆಲವು ಕಾಲೇಜುಗಳ ಆಡಳಿತ ವರ್ಗಗಳು ವಾದಿಸುತ್ತವೆ. ಆದರೆ ಇದೊಂದು ಕುಂಟು ನೆವ ಅಷ್ಟೇ. ವಾಸ್ತವವಾಗಿ ಎಸ್.ಸಿ.-ಎಸ್.ಟಿ. ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ವಿವಿಗೆ ಮನಸ್ಸಿಲ್ಲ ಎಂದು ಅನೇಕ ಜನ ದೂರಿದ್ದಾರೆ.

ಆಸ್ಪತ್ರೆ ಅವ್ಯವಸ್ಥೆ ಸರಿಪಡಿಸಲು ಒತ್ತಾಯ

ಸಿಂದನೂರು: ಆಸ್ಪತ್ರೆಯ ಅಸ್ತವ್ಯಸ್ತತೆಯ ವಿರುದ್ಧ ಜುಲೈ 11 ರಂದು DYFI ತಾಲೂಕ ಸಮಿತಿ ನೇತೃತ್ವದಲ್ಲಿ ಮಾನ್ಯ ಆರೋಗ್ಯ ಮಂತ್ರಿಯ ಅನಾರೋಗ್ಯ ಸ್ಥಿತಿಯ ಹೆಣದ ಮೆರವಣಿಗೆಯನ್ನು ನಗರದ ಮುಖ್ಯ ಬೀದಿಗಳ ಮುಖಾಂತರ [illegible]ಸಿ ಮುಖ್ಯ ವೈದ್ಯಾಧಿಕಾರಿಗಳಿಗೆ ಆಸ್ಪತ್ರೆಯ ವ್ಯವಸ್ಥೆ ವಿರುದ್ಧ ಮನವಿ ಪತ್ರ ಸಲ್ಲಿಸಲಾಯಿತು.

[illegible]ಸುಗೂರಿನಲ್ಲಿ ಆಸ್ಪತ್ರೆಯ ಕಟ್ಟಡ [illegible]ಣವಾಗಿ ೫ ವರ್ಷಕಳೆದರೂ ಆಸ್ಪತ್ರೆಯ ಕಟ್ಟಡ ಪೂರ್ತಿಗೊಳಿಸಿಲ್ಲ. ಹಾಗೂ ನಗರದಲ್ಲಿ ಏಡ್ಸ್ ರೋಗ ತಪಾಸಣೆ ಕೇಂದ್ರ ಪ್ರಾರಂಭಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಮೆರವಣಿಗೆ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷರಾದ ಶರಬಣ್ಣ ನಾಗಲಾಪೂರ ಹಾಗೂ ತಾಲೂಕ ಕಾರ್ಯದರ್ಶಿಯಾದ ಸುಭಾನ ಟೇಲರ್ ವಹಿಸಿದ್ದರು. ತಾಲೂಕು ಮತ್ತು ಜಿಲ್ಲಾ ಮುಖಂಡರು ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಉಪನ್ಯಾಸಕರ ನೇಮಕಾತಿ: ಭರವಸೆ

ರಾಜ್ಯದಲ್ಲಿ ಸರಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲಿಯಿರುವ ಸಾವಿರಾರು ಉಪನ್ಯಾಸಕರ ಹುದ್ದೆಗಳಿಗೆ ಖಾಯಂ ನೇಮಕಾತಿ ಅಗ್ರಹಿಸಿ ಹಾಗೂ ಅರೆಕಾಲಿಕ ಉಪನ್ಯಾಸಕರ ನೇಮಕಾತಿ ನಿಷೇದಿಸಿರುವ ಸರಕಾರದ ತೀರ್ಮಾನದ ಬದಲಾವಣೆಗೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ) ರಾಜ್ಯ ಸಮಿತಿ ನಿಯೋಗವು ಕಾಲೇಜು ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಮನವಿ ಅರ್ಪಿಸಿ ಜುಲೈ 18 ರಂದು ಚರ್ಚೆ ನಡೆಸಿತು. ಇತ್ತೀಚೆಗೆ ಸರಕಾರ ಅರೆಕಾಲಿಕ ಉಪನ್ಯಾಸಕರ ನೇಮಕಾತಿಯನ್ನು ನಿಷೇದಿಸಿ ಆಜ್ಞೆ ಹೊರಡಿಸಿದ್ದರ ಹಿನ್ನೆಲೆಯಲ್ಲಿ ಈ ಭೇಟಿ ಮತ್ತು ಚರ್ಚೆ ನಡೆಯಿತು.

ಒಂದೆರಡು ದಿನಗಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವ ಕುರಿತು ತೀರ್ಮಾನ ತೆಗೆದುಕೊಂಡು ಭೋದನಾ ಕಾರ್ಯ ವಿಧಾನ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಲಾಗುವುದೆಂದು ನಿರ್ದೇಶಕರು ವಿದ್ಯಾರ್ಥಿ ಮುಖಂಡರಿಗೆ ಭರವಸೆ ನೀಡಿದರು. ಎಸ್. ಎಫ್.ಐ ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತರಾಮ ಎಸ್ ನಾಯಕ್, ಉಪಾಧ್ಯಕ್ಷರಾದ ಮೀನಾಕ್ಷಿ ಸುಂದರಂ ಮುಂತಾದವರು ನಿಯೋಗದಲ್ಲಿದ್ದರು.

ಉಪನ್ಯಾಸಕರ ತೀವ್ರ ಕೊರತೆಯಿಂದ ರಾಜ್ಯದ ಬಹುತೇಕ ಕಾಲೇಜುಗಳಲ್ಲಿ ಭೋದನಾ ಕೆಲಸಗಳಿಗೆ ತೀವ್ರ ತೊಂದರೆಯಾಗಿದೆ. ಅರೆಕಾಲಿಕ ಉಪನ್ಯಾಸಕರಿಲ್ಲದೆ ಶೇ.50 ರಷ್ಟು ಸಹ ಭೋದನಾ ಕೆಲಸಗಳು ನಡೆಯದಂತಹ ಪರಿಸ್ಥಿತಿ ಇದೆ. ಇಂತ ಸಂದರ್ಭದಲ್ಲಿ ಖಾಯಂ ಉಪನ್ಯಾಸಕರ ನೇಮಕಾತಿ ಇಲ್ಲದೆ ಅರೆಕಾಲಿಕ ಉಪನ್ಯಾಸಕರ ನೇಮಕಾತಿ ನಿಷೇಧಿಸಿರುವುದು ವಿದ್ಯಾರ್ಥಿ ವಿರೋಧಿ ಕ್ರಮವಾಗಿದೆ. ಖಾಯಂ ಉಪನ್ಯಾಸಕರ ನೇಮಕಾತಿಯಾಗುವವರೆಗೆ ಅರೆಕಾಲಿಕ ಉಪನ್ಯಾಸಕರನ್ನು ಮುಂದುವರೆಸಬೇಕು.

ಜುಲೈ 25 ರೊಳಗೆ ಈ ಸಮಸ್ಯೆಗೆ ಪರಿಹಾರ ನೀಡದಿದ್ದರೆ ಜುಲೈ 27 ರಂದು ರಾಜ್ಯದಾದ್ಯಂತ ಪ್ರತಿಭಟಿಸುವುದಾಗಿ ಎಸ್.ಎಫ್.ಐ ಸರಕಾರವನ್ನು ಎಚ್ಚರಿಸಿವೆ.

ನೈನಾ ಸಾಹನಿ ಕೊಲೆ: ಪ್ರತಿಭಟಿಸಿ ರಸ್ತೆತಡೆ

ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನೂರಾರು ಜನ ಮಹಿಳೆಯರು ಜುಲೈ 8 ರಂದು ನೈನಾ ಸಾಹನಿಯ ಕ್ರೂರ ಕೊಲೆಯನ್ನು ಪ್ರತಿಭಟಿಸಿ ರಸ್ತೆ ತಡೆ ಆಂದೋಲನ ನಡೆಸಿದರು. ಯುವ ಕಾಂಗ್ರೆಸ ಮಾಜಿ ಅಧ್ಯಕ್ಷ ಸುಶೀಲ್ ಶರ್ಮಾ ನೈನಾಳ ಕೈ-ಕಾಲುಗಳನ್ನು ಕತ್ತರಿಸಿ ಇಡೀ ದೇಹವನ್ನು ತಂದೂರಿ ಒಲೆಯಲ್ಲಿ ಸುಡಲು ಪ್ರಯತ್ನಿಸಿರುವುದು ಕಾಂಗ್ರೆಸ್ ಪರಂಪರೆಯನ್ನು ಜಗಜ್ಜಾಹಿರುಗೊಳಿಸಿದೆ. ಮಹಿಳೆಯರ ಮೇಲೆ ಕಾಂಗ್ರೆಸ್ ನಡೆಸುತ್ತಿರುವ ಅಮಾನವೀಯ ಧಾಳಿಯನ್ನು ಖಂಡಿಸಿ ನೀಲಾ.ಕೆ ಮಾತನಾಡಿದರು. ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ವಿಫಲವಾಗುತ್ತಿರುವ ಹಾಗೂ ತಾನೂ ನೀಚ ಕೆಲಸದಲ್ಲಿ ತೊಡಗಿರುವ ಕಾಂಗ್ರೆಸ್ ಜನ ವಿರೋಧಿ ಪರಂಪರೆಯನ್ನು ಮುಂದುವರೆಸಿದಲ್ಲಿ ಉಗ್ರ ಹೋರಾಟ ಅನಿವಾರ್ಯ ಎಂದು ಹೇಳಿದ ಅವರು ಅಪರಾಧಿಯ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಮೆರವಣಿಗೆಯನ್ನುದ್ದೇಶಿಸಿ ಪಂಚಾಯತ್ ನೌಕರರ ಸಂಘದ ಕಾರ್ಯದರ್ಶಿ ಮಲ್ಲಪ್ಪ ಉಪ್ಪಾರ, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಕಾರ್ಯದರ್ಶಿ ಗಂಗಮ್ಮ ಬಿರಾದಾರ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಗಂಗೂಬಾಯಿ ಸುಂಟನೂರ, ಮೆಹಮುದಾ ಬೇಗಂ, ತಾ.ಪಂ. ಸದಸ್ಯರಾದ ಲಕ್ಷ್ಮಿಬಾಯಿ ಹಾಗೂ ನೀಲಾ.ಕೆ ವಹಿಸಿದ್ದರು.

ವಿದ್ಯಾರ್ಥಿಗಳ ಮೆರವಣಿಗೆ

ಶಹಾಪುರ: ಜುಲೈ 14 ರಂದು SFI ಶಹಾಪುರ ತಾಲೂಕ ಸಮಿತಿ ನೇತೃತ್ವದಲ್ಲಿ ಸ್ಥಳೀಯ ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೆರವಣಿಗೆ ನಡೆಸಿದರು.

ಹಲವು ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿಗಳು ತಮ್ಮ ತರಗತಿಗಳನ್ನು ಬಹಿಷ್ಕರಿಸಿ ತಾಲೂಕಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ತಹಸಿಲ್ದಾರರ ಕಾರ್ಯಲಯಕ್ಕೆ ತೆರಳಿ ಮನವಿ ಪತ್ರ ಸಲ್ಲಿಸಿದರು.

ಈ ಮೆರವಣಿಗೆಯ ನೇತೃತ್ವವನ್ನು ತಾಲೂಕು ಸಮಿತಿ ಉಪಾಧ್ಯಕ್ಷರಾದ ಮಹಾದೇವಪ್ಪ ಮಾವಿನಮಟ್ಟಿ, ಬೀಮರಾಯ, ಶ್ರೀರಾಮ ರಾಥೋಡ್, ಮೊದಲಾದವರು ವಹಿಸಿದ್ದರು.

ಡಿ.ವೈ.ಎಫ್.ಐ. ನೂತನ ಘಟಕ

ಬಳ್ಳಾರಿ: ಕೋಮು ಸೌಹಾರ್ದ ಮತ್ತು ಪ್ರಗತಿಗೆ ವಿರೋಧವಾಗಿರುವ ಆರ್ ಎಸ್ ಎಸ್ ಮತ್ತು ಇತರ ಕೋಮು ಸಂಘಟನೆಗಳನ್ನು ನಮ್ಮಹಳ್ಳಿಗಳಿಂದ ಹೊರದೂಡಬೇಕು ಎಂದು ಕಾಂ.ಕೆ.ಎಸ್. ರಾಮಾಂಜನೇಯ ಹೇಳಿದರು.

ಅವರು ಬಳ್ಳಾರಿ ತಾಲೂಕು ಯಲ್ಲಾಪುರದಲ್ಲಿ DYFI ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಕಾಂ. U.ಬಸವರಾಜ್ ಮುಖ್ಯ ಅಥಿತಿಯಾಗಿ ಆಗಮಿಸಿ ಸಭೆಗೆ ಶುಭ ಕೋರಿ ಮಾತನಾಡಿದರು.

ಸಭೆಯು ನೂತನ ಸಮಿತಿಯನ್ನು ಆರಿಸಿತು. ಅಧ್ಯಕ್ಷರಾಗಿ ಯಂಕಾರೆಡ್ಡಿ, ಉಪಧ್ಯಾಕ್ಷರುಗಳಾಗಿ ಜೆ.ಬಸವರಾಜ್, ಗಂಗಾಧರ್, ಕಾರ್ಯದರ್ಶಿಯಾಗಿ. ಕೆ.ಎಸ್. ನಾಗರಾಜ್, ಸಹಕಾರ್ಯದರ್ಶಿಗಳಾಗಿ ಮೌಲಾಸಾಬ್ ಮತ್ತು ಬಳಿದಾಯಪ್ಪ ಆಯ್ಕೆಯಾದರು. 11 ಜನರನ್ನೊಳಗೊಂಡ ಸಮಿತಿಯನ್ನು ರಚಿಸಾಯಿತು.

ರಿಕ್ಷಾಚಾಲಕರ 2ನೇ ಮಹಾಸಭೆ

ಉಳ್ಳಾಲ : ತೊಕ್ಕೊಟು ಪೆಟ್ರೋಲ್ ಬಂಕ್‌ನಲ್ಲಿ ಕಳೆದ 3 ತಿಂಗಳಿನಿಂದಲೂ ಪೆಟ್ರೋಲ್ ಪೂರೈಕೆ ಇಲ್ಲದಿರುವುದರಿಂದ ರಿಕ್ಷಾ ಚಾಲಕರಿಗೆ ತೊಂದರೆ ಉಂಟಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಿದರೂ ಸಮಸ್ಯೆ ಬಗೆಹರಿಯಲಿಲ್ಲ ಎಂದು ಮಹಾಸಭೆಯಲ್ಲಿ ಆರೋಪಿಸಲಾಯಿತು. ಈ ಪ್ರದೇಶದಲ್ಲಿ ರಿಕ್ಷಾ ಓಡಿಸುವ 80ಶೇ. ರಸ್ತೆಗಳು ಮಣ್ಣಿನ ಕಚ್ಚಾ ರಸ್ತೆಗಳು ಮಳೆ ನೀರು ರಸ್ತೆಯಲ್ಲಿ ಹರಿದು ತೋಡು ಬಿದ್ದಿದೆ. ಈ ರಸ್ತೆಗಳನ್ನು ಸರಿಪಡಿಸಿ ಡಾಮರು ಹಾಕಬೇಕೆಂದು ಮುನ್ನೂರ ಯುವಕ ಮಂಡಲದಲ್ಲಿ ಸೇರಿದ್ದ ರಿಕ್ಷಾ ಚಾಲಕರ ಮಹಾಸಭೆ ಒತ್ತಾಯಿಸಿತು.

ಈಗೀಗ ರಿಕ್ಷಾ ಚಾಲಕರ ಮೇಲೆ ಹಲ್ಲೆಗಳು ಹೆಚ್ಚಾಗುತ್ತಿದ್ದು, ಸೂಕ್ತ ರಕ್ಷಣೆ ಒದಗಿಸಬೇಕೆಂದು ವಿನಂತಿಸಲಾಗಿದೆ. ನೂತನ ಸಮಿತಿಗೆ ಸುಕುಮಾರ್ ಅಧ್ಯಕ್ಷರಾಗಿ, ದಿವಾಕರ ಶೆಟ್ಟಿ ಉಪಾಧ್ಯಕ್ಷರಾಗಿ, ಜಯಂತ ನಾಯಕ ಕಾರ್ಯದರ್ಶಿಯಾಗಿ, ಅಶೋಕ ಆಳ್ವ ಸಹ ಕಾರ್ಯದರ್ಶಿಯಾಗಿ ಹಾಗೂ ಕೆ.ಎಚ್. ಮಹಮದ್ ಖಜಾಂಚಿಯಾಗಿ ಆಯ್ಕೆಯಾದರು. 17ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ದ.ಕ. ಜಿಲ್ಲಾ ಆಟೋ ಚಾಲಕರ ಸಂಘ ಜತೆ ಕಾರ್ಯದರ್ಶಿ ಸಿರಿಲ್ ಡಿ.ಸೋಜ ಹಾಗೂ ಸತೀಶ್ ಕುಮಾರ್ ಮಾರ್ಗದರ್ಶನ ಮಾಡಿದರು. ಹಿರಿಯ ರಿಕ್ಷಾ ಚಾಲಕ ಆನಂದರವರು ಮಹಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಜ್ಯೋತಿ ಬಸುರವರೊಡನೆ ಒಂದು ಸಂದರ್ಶನ

.... ಪುಟ 5 ರಿಂದ

ಯುವ ಜನಗಳಿಗೆ ನ್ಯಾಯ ಪಡೆಯಲು ತಮ್ಮ ಹಕ್ಕುಗಳನ್ನು ರಕ್ಷಿಸಲು ಕಾರ್ಮಿಕ ಸಂಘಗಳಲ್ಲಿ ಸಂಘಟಿತರಾಗುವ ಹಕ್ಕು ಇದೆ. ಅವರಿಗೆ ಮುಷ್ಕರದ ಹಕ್ಕು ಇದೆ. ಆದರೆ ನಾವು ದುಡಿಯುವ ಜನರಿಗೆ ಹೇಳುತ್ತಿದ್ದೇವೆ -ಅಗತ್ಯ ಬಿದ್ದಾಗ ಖಂಡಿತವಾಗಿಯೂ ನಿಮ್ಮ ಕೊನೆಯ ಅಸ್ತ್ರವನ್ನು ಬಳಸಿ. ಆದರೆ ನೀವು ಕೆಲಸ ಮಾಡುತ್ತಿರುವ ಉದ್ದಿಮೆಯ ಬಗ್ಗೆ ನೀವು ಅಧ್ಯಯನವನ್ನೂ ಮಾಡಬೇಕು, ನಿಮ್ಮ ಬೇಡಿಕೆಗಳೊಂದಿಗೆ ನಿಮ್ಮ ಉದ್ದಿಮೆಯ ಆರೋಗ್ಯಕ್ಕಾಗಿಯೂ ಕೆಲಸ ಮಾಡಬೇಕು. ಆದ್ದರಿಂದ ಉತ್ಪಾದನೆ, ಉತ್ಪಾದಕತೆಯಲ್ಲೂ ನೀವು ಆಸಕ್ತಿ ವಹಿಸಬೇಕು ಎಂದಿದ್ದೇನೆ. ಮಾಲಕರು ಮ್ಯಾನೇಜುಮೆಂಟುಗಳಿಗೆ ಕೂಡಾ ನಿಮ್ಮ ವರ್ತನೆಯಲ್ಲೂ ಮುಚ್ಚು ಮರೆಯಿರಬಾರದು, ಉದ್ದಿಮೆ ದಕ್ಷತೆಯಿಂದ ಕೆಲಸ ಮಾಡಲು ಕಾರ್ಮಿಕರನ್ನು ವಿಶ್ವಾಸಕ್ಕೆ ತಗೊಳ್ಳಿ ಎನ್ನುತ್ತೇನೆ. ಪಶ್ಚಿಮ ಬಂಗಾಳದಲ್ಲಿ ಕಾರ್ಮಿಕರು ತಮ್ಮ ಸ್ವಂತ ಅನುಭವದಿಂದಲೇ ಈ ಅಭಿಪ್ರಾಯವನ್ನು ಸ್ವೀಕರಿಸುತ್ತಿದ್ದಾರೆ. ಏಕೆಂದರೆ ಎಡರಂಗ ಸರಕಾರ ತಮ್ಮ ಸರಕಾರ, ಅದು ತಮ್ಮ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತದೆ ಎಂದು ಅವರಿಗೆ ಗೊತ್ತಿದೆ.

ಹಿ ಪಶ್ಚಿಮ ಬಂಗಾಳದಲ್ಲಿ ಒಂದು ಮಾರ್ಕ್ಸ್‌ವಾದಿ ಸರಕಾರ ಇಂತಹ ನೀತಿಗಳನ್ನು ಅಂಗೀಕರಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸುವ ಪತ್ರಿಕಾ ಟಿಪ್ಪಣಿಗಳ ಬಗ್ಗೆ ನೀವೇನು ಹೇಳುತ್ತೀರಿ?

ನಾವು ಪಶ್ಚಿಮ ಬಂಗಾಳ ಗಣರಾಜ್ಯವನ್ನು ಆಳುತ್ತಿಲ್ಲ ಎಂದು ನಾನು ಪದೇ ಪದೇ ಹೇಳಿದ್ದೇನೆ. ನಾವು ಭಾರತದ ಭಾಗ. ಹಲವು ಮಿತಿಗಳೊಳಗೆ, ಸಂವಿಧಾನ ಹಾಕಿದ ಮಿತಿಗಳೊಳಗೆ, ನಾವು ವಿರೋಧಿಸುವ ಒಂದು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕಾಗಿದೆ.

ನಾನೊಬ್ಬ ಮಾರ್ಕ್ಸ್‌ವಾದಿ ಮಾರ್ಕ್ಸ್‌ವಾದ ನಿರ್ದಿಷ್ಟ ಸನ್ನಿವೇಶವನ್ನು ಅಧ್ಯಯನ ಮಾಡಬೇಕು ಎಂದು ಭೋಧಿಸುವ ವಿಜ್ಞಾನ. ಆದ್ದರಿಂದ ನಾವು ಪ್ರಸ್ತುತ ಸಂದರ್ಭವನ್ನು ಅಧ್ಯಯನ ಮಾಡಿದ್ದೇವೆ. ಒಂದು ಸಮಾಜವಾದಿ ಕಾರ್ಯಕ್ರಮ ಅಥವಾ ಒಂದು ಸೋಶಲ್ ಡೆಮಾಕ್ರಟಿಕ್ ಕಾರ್ಯಕ್ರಮವನ್ನು ಕೂಡಾ ನಾವು ಇಡುವಂತಿಲ್ಲ ಎಂದು ನಮಗೆ ಗೊತ್ತಿದೆ. ಆದರೆ ಜನಗಳಿಗೆ ಪ್ರಯೋಜನವಾಗುವ ಒಂದು ಕನಿಷ್ಠ ಕಾರ್ಯಕ್ರಮ ನಮ್ಮಲ್ಲಿ ಇದೆ. ಕಳೆದ 16 ವರ್ಷಗಳಿಂದ ಅದನ್ನು ಜ್ಯಾರಿಗೆ ತರಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಆಡಳಿತ ಮತ್ತು ಈ ಕನಿಷ್ಠ ಕಾರ್ಯಕ್ರಮದ ಜ್ಯಾರಿ ಹಿಂದಿನ 28 ವರ್ಷಗಳಲ್ಲಿ (ಎಡರಂಗ ಅಧಿಕಾರಕ್ಕೆ ಬರುವ ಮೊದಲು) ಕಾಂಗ್ರೆಸ್ ಆಡಳಿತಕ್ಕಿಂತ ಎಷ್ಟೋ ಉತ್ತಮ ಎಂದು ಪಶ್ಚಿಮ ಬಂಗಾಳದ ಜನತೆಗೆ ಅರ್ಥವಾಗಿದೆ. ಭಾರತದಲ್ಲಿ ಸರಕಾರೀ ವಲಯವಿದೆ, ಖಾಸಗೀ ವಲಯ ಇದೆ. ಜಂಟಿ ವಲಯ ಇದೆ. ನಾವು ಈ ಎಲ್ಲಾ ವಲಯಗಳ ಹಿತಾಸಕ್ತಿಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ಹಿ ಪಶ್ಚಿಮ ಬಂಗಾಳದಲ್ಲಿ ಇತ್ತೀಚಿನ ನಗರಸಭೆ ಮತ್ತು ಮಹಾನಗರಪಾಲಿಕೆಗಳ ಚುನಾವಣೆಗಳ ಫಲಿತಾಂಶಗಳನ್ನು ನೀವು ಹೇಗೆ ನೋಡುತ್ತೀರಿ?

ನಗರಸಭೆ ಚುನಾವಣೆಗಳಲ್ಲಿ ಹಾಗೂ ಕಲ್ಕತ್ತಾ ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ ಹಿನ್ನಡೆಯಾಗಿದೆ. ಕಲ್ಕತ್ತೆಯಲ್ಲಿ ನಾವು ಮಂಡಳಿಯನ್ನು ರಚಿಸಿ ಮೇಯರ್ ಚುನಾವಣೆ ಗೆದ್ದಿದ್ದರೂ ಹಿನ್ನಡೆಗೆ ಕಾರಣದ ವಿಮರ್ಶೆ ನಡೆಸಲಾಗುತ್ತಿದೆ. ವಿಮರ್ಶೆ ನಡೆಸಿದ ನಂತರ ಅದನ್ನು ಜನರ ಮುಂದಿಡುತ್ತೇವೆ. ಈ ಫಲಿತಾಂಶಗಳನ್ನು ಹಿನ್ನಡೆಯೆಂದು ಗುರುತಿಸಿದರೂ ಅದೇ ವೇಳೆಗೆ ನಡೆದ ಮೂರು ವಿಧಾನ ಸಭಾ ಉಪಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ. ಮಾತ್ರವಲ್ಲ ಎಲ್ಲದರಲ್ಲೂ ಭಾರೀ ಬಹುಮತ ಪಡೆದಿದ್ದೇವೆ. ಆದರೆ ನಗರಗಳಲ್ಲಿ ನಮಗೆ ಹೆಚ್ಚೇನೂ ಮಾಡಲಾಗಿಲ್ಲ ಎಂಬುದು ನಿಜ, ಅದಕ್ಕೆ ಕಾರಣ ನಾನು ಈ ಮೊದಲು ಹೇಳಿದ ನಮಗಿರುವ ಮಿತಿಗಳು ಮತ್ತು ಭಾರತ ಸರಕಾರದ ಪಕ್ಷಪಾತದ ನೀತಿಗಳು. ಬೇರೆ ಅಂಶಗಳೂ ಇವೆ. ಆ ಬಗ್ಗೆ ಚರ್ಚಿಸುತ್ತಿದ್ದೇವೆ. ಅವ್ಯಾಹತವಾಗಿ 18 ವರ್ಷಗಳ ಕಾಲ ನಮ್ಮ ವಿರುದ್ಧ ಸುಳ್ಳು ಪ್ರಚಾರ ನಡೆಸಿರುವ ಬೂರ್ಜ್ವಾ ಪತ್ರಿಕೆಗಳ ಪಾತ್ರವೂ ಇದೆ. ಅದೂ ಜನತೆಯ ಪ್ರಜ್ಞೆಯ ಮೇಲೆ ಪ್ರಭಾವ ಬೀರಿದೆ. ನಕಾರಾತ್ಮಕ ಮತದಾನವೂ ನಡೆದಿವೆ. ಕಾಂಗ್ರೆಸ್(ಐ)ನ ಮತಗಳು ಹೆಚ್ಚಿವೆ. ಆದರೆ ಅವರೇನೂ ಪರ್ಯಾಯ ಕಾರ್ಯಕ್ರಮವನ್ನಾಗಲೀ, ನೀತಿಗಳನ್ನಾಗಲೀ ಮುಂದಿಟ್ಟಿಲ್ಲ. ಆದ್ದರಿಂದಲೇ ನಾನು ಹೇಳಿದ್ದು -ಜನ ತಮ್ಮ ತಪ್ಪನ್ನು ಅರಿತುಕೊಳ್ಳುತ್ತಾರೆ ಎಂದು. ಆದರೆ ನಮಗಿದೊಂದು ಹಿನ್ನಡೆ, ಈ ಬಗ್ಗೆ ಆತ್ಮ ಪರೀಕ್ಷೆ ಅಗತ್ಯ.

ಹಿ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಸೋಲಿಸಲು ಸಿಪಿಐ(ಎಂ)ನ ಕಾರ್ಯತಂತ್ರಗಳೇನು?

ನಾವು ಇನ್ನೂ ವಿವರಗಳನ್ನು ಚರ್ಚಿಸುತ್ತಿದ್ದೇವೆ. ಆದರೆ ಸ್ಥೂಲವಾಗಿ ಹೇಳುವುದಾದರೆ ಖಂಡಿತವಾಗಿ ಸೋಲುಣ್ಣುವ ಕಾಂಗ್ರೆಸ್‌ನಿಂದ ಯಾವುದೇ ಒಂದು ಪಕ್ಷ ಅಧಿಕಾರ ಪಡೆಯಲಿಕ್ಕಿಲ್ಲ ಎಂದು ನಮ್ಮ ನಂಬಿಕೆ. ನಾವು ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ವಿರೋಧವಾಗಿದ್ದೇವೆ. ಆದ್ದರಿಂದ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳೊಡನೆ ಚರ್ಚಿಸಿ ಜನರೆದುರು ಒಂದು ಪರಿಣಾಮಕಾರಿ ಚುನಾವಣಾ ಪರ್ಯಾಯವನ್ನಿಡಲು ಸಾಧ್ಯವಾಗುವಂತೆ ಪ್ರಯತ್ನಿಸುತ್ತಿದ್ದೇವೆ. ನಾವು ಎಡ ಐಕ್ಯತೆಯನ್ನು ಇನ್ನಷ್ಟು ಬಲ ಗೊಳಿಸಿ ಪ್ರಸ್ತುತ ಸರಕಾರದ ಜನ-ವಿರೋಧಿ ನೀತಿಗಳ ವಿರುದ್ಧ ಇನ್ನಷ್ಟು ಹೋರಾಟಗಳನ್ನು ಆರಂಭಿಸಲು ಪ್ರಯತ್ನಿಸುತ್ತಿದ್ದೇವೆ. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಲು ನಾವು ನೆರವಾಗುತ್ತೇವೆ. ಜನ ಕಾಂಗ್ರೆಸ್ ಮತ್ತು ಬಿಜೆಪಿ ಎರಡನ್ನೂ ಸೋಲಿಸುವಂತೆ ಏನು ಮಾಡಬೇಕು ಎಂದು ಹಲವಾರು ವ್ಯಕ್ತಿಗಳೊಂದಿಗೆ, ಪಕ್ಷಗಳೊಂದಿಗೆ ಚರ್ಚಿಸುತ್ತಿದ್ದೇವೆ.

- ಸೀತಾರಾಂ ಯೆಚೂರಿ -

ಚೀಣಾದಲ್ಲಿ ಆರ್ಥಿಕ ಸುಧಾರಣೆ

-ಒಂದು ವರದಿ

ಐವರು ಸದಸ್ಯರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ನಿಯೋಗವೊಂದು ಇದೇ ಜೂನ್ 10 ರಿಂದ 10 ದಿನ ಚೀಣಾದ ಪ್ರವಾಸ ನಡೆಸಿ ಬಂದಿದೆ. ಚೀಣಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಆಹ್ವಾನದ ಮೇರೆಗೆ ಹೋದ ಈ ನಿಯೋಗದಲ್ಲಿ ಸೀತಾರಾಂ ಯೆಚೂರಿ, ಚಡಾಯನ್ ಗೋವಿಂದನ್, ಹೆಮೆನ್ ದಾಸ್, ಬಿನೊಯ್ ಕೊನಾರ್ ಹಾಗೂ ಸುನಿಲ್ ಚೋಪ್ರಾ ಇದ್ದರು. ಬೈಜಿಂಗ್ ನಲ್ಲಿ ಮತ್ತಿತರ ಕಡೆ ನಿಯೋಗ ಚೀಣಾ ಕಮ್ಯುನಿಸ್ಟ್ ಪಕ್ಷದ ಮುಖಂಡರೊಂದಿಗೆ ರಾಜಕೀಯ ಚರ್ಚೆ ನಡೆಸಿದ್ದಲ್ಲದೆ ಅನ್‌ಹುಯಿ, ಶಾಂಘೈ ಹಾಗೂ ಗುವಾಂ ಡೊಂಗ್ (ಕ್ಯಾಂಟನ್) ಪ್ರಾಂತಗಳಿಗೆ. ಹಲವು ಆರ್ಥಿಕ ಅಭಿವೃದ್ಧಿ ವಲಯಗಳಿಗೆ, ಉದ್ದಿಮೆಗಳಿಗೆ ಭೇಟಿ ನೀಡಿತು. ಈ ಬಗ್ಗೆ ನಿಯೋಗದ ಮುಖಂಡರು ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ ಆದ ಸೀತಾರಾಂ ಯೆಚೂರಿಯವರು ನೀಡಿದ ವರದಿಯಲ್ಲಿನ ಕೆಲವು ಆಸಕ್ತಿದಾಯಕ ಅಂಶಗಳು ನಮ್ಮ ಓದುಗರಿಗಾಗಿ ಇಲ್ಲಿವೆ.

ಚೀಣಾದಲ್ಲಿ ಆರ್ಥಿಕ ಸುಧಾರಣೆಯೆಂದರೇನು, ಜಂಟಿ ಉದ್ದಿಮೆಗಳು, ಖಾಸಗೀ ಉದ್ದಿಮೆಗಳು ನಮ್ಮಂತೆಯೇ ಇವೆಯೇ, ಅಸಮಾನತೆ ಹೆಚ್ಚುವುದಿಲ್ಲವೇ, ಸಮಸ್ಯೆಗಳೇನು, ಅವನ್ನು ಹೇಗೆ ಎದುರಿಸಲಾಗುತ್ತಿದೆ, ಸರಕಾರದ ಪಾತ್ರ ಕಮ್ಮಿಯಾಗುತ್ತಿದೆಯೇ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ.

ಚೀಣಾ ಕಮ್ಯುನಿಸ್ಟ್ ಪಕ್ಷದ ಮುಖಂಡರು ತಮ್ಮ ಪಕ್ಷದ ಕೆಲಸ ಹಾಗೂ ಚೀಣಾದಲ್ಲಿನ ಆರ್ಥಿಕ ಸುಧಾರಣೆಗಳ ಬಗ್ಗೆ, ಸಮಾಜವಾದ ಕಟ್ಟುವ ತಮ್ಮ ಅನುಭವಗಳ ಬಗ್ಗೆ ಮುಚ್ಚುಮರೆಯಿಲ್ಲದೆ ವಿವರಿಸಿದರು.

ರಾಜಕೀಯ ಅಧಿಕಾರ ಗ್ರಹಣ ಮಾಡಲು 1921 ರಿಂದ 1949ರವರೆಗೆ ಅವರಿಗೆ 28 ವರ್ಷಗಳು ಹಿಡಿದವು. ಅಂದಿನಿಂದ ಈ 46 ವರ್ಷಗಳ ನಂತರವೂ ಸಮಾಜವಾದವನ್ನು ಕಟ್ಟುತ್ತಿದ್ದೇವೆ, ಹಲವು ಹತ್ತು ಸಮಸ್ಯೆಗಳನ್ನು ಎದುರಿಸಿಕೊಂಡು, ಹಿಂದೆಂದೂ ಯಾರೂ ಹೋಗದ ದಿಕ್ಕಿನಲ್ಲಿ ಹಾದಿಮಾಡಿಕೊಂಡು ಬಂದಿದ್ದೇವೆ ಎಂದು ಅವರು ಹೇಳಿದರು. ತಮ್ಮ ಪಕ್ಷ ತನ್ನದೇ ಹಿಂದಿನ ತಪ್ಪುಗಳಿಂದ ಪಾಠ ಕಲಿತು, ತನ್ನ ಅನುಭವವನ್ನು ಗಂಭೀರ ರೀತಿಯಲ್ಲಿ ಕ್ರೋಢೀಕರಿಸಿ ಚೀಣೀ ಗುಣಲಕ್ಷಣಗಳುಳ್ಳ ಸಮಾಜವಾದವನ್ನು ಕಟ್ಟುವ ಘೋಷಣೆ ಕೊಟ್ಟಿದೆ. ಅಂದರೆ ಮಾರ್ಕ್ಸ್‌ವಾದದ ಮೂಲಭೂತ ಪ್ರತಿಪಾದನೆಗಳನ್ನು ಜಗತ್ತಿನ ಹಾಗೂ ಚೀಣಾದ ಇಂದಿನ ಪರಿಸ್ಥಿತಿಯೊಂದಿಗೆ ಬೆಸೆಯಲು ತಾವು ಪ್ರಯತ್ನಿಸುತ್ತಿರುವುದಾಗಿ ಅವರು ಹೇಳಿದರು.

ಅಕ್ಟೋಬರ್ 1992ರಲ್ಲಿ ನಡೆದ ಚೀಣಾ ಕಮ್ಯುನಿಸ್ಟ್ ಪಕ್ಷದ 14ನೇ ಮಹಾಧಿವೇಶನ ಈ ಘೋಷಣೆಯನ್ನು ಕೊಟ್ಟು ಸಮಾಜವಾದೀ ಮಾರುಕಟ್ಟೆ ಆರ್ಥಿಕದ ಪರಿಕಲ್ಪನೆಯನ್ನು ಪ್ರತಿಪಾದಿಸಿತು. ನವಂಬರ್ 1993ರಲ್ಲಿ ಕೇಂದ್ರ ಸಮಿತಿ ಸಮಾಜವಾದಿ ಮಾರುಕಟ್ಟೆ ಆರ್ಥಿಕದ ಪರಿಕಲ್ಪನೆಯನ್ನು ಮತ್ತಷ್ಟು ವಿಶದಗೊಳಿಸಿತು. ಅದೀಗ ಪಕ್ಷ ಅನುಸರಿಸಿರುವ ದಾರಿಯ ಆಧಾರ.

ಸುಧಾರಣೆ ಏಕೆ-ಹೇಗೆ?

ಒಟ್ಟಾರೆ ಅಭಿವೃದ್ಧಿ ಇದರ ಒಟ್ಟುಗುರಿಯಾದರೆ, ಸುಧಾರಣೆ ಅದಕ್ಕೆ ಚಾಲನೆ ನೀಡುವಂತದ್ದು ಹಾಗೂ ಅದು ಸಾಧ್ಯವಾಗಲು ಬೇಕಾಗಿರುವುದು ಸ್ಥಿರತೆ. ಈ ಮೂರರ ನಡುವೆ ಸೂಕ್ತ ಸಮತೋಲನ ಕಾಪಾಡಲು ಚೀಣಾ ಕಮ್ಯುನಿಸ್ಟ್ ಪಕ್ಷ ಪ್ರಯತ್ನಿಸುತ್ತಿರುವುದಾಗಿ ಆ ಪಕ್ಷದ ಮುಖಂ[illegible]

i) ಪ್ರಸ್ತುತ ಅಂತರರಾಷ್ಟ್ರೀಯ ಸನ್ನಿವೇಶದಲ್ಲಿ ಆಂತರಿಕ ಮುನ್ನಡೆಗೆ ಸಹಾಯಕವಾಗುವ ಅವಕಾಶಗಳ ಪ್ರಯೋಜನ ಪಡೆಯುವುದು ii) ಸುಧಾರಣೆಗಳನ್ನು ಆಳಗೊಳಿಸುವುದು iii) ಚೀಣಾವನ್ನು ಹೊರಗಿನ ಜಗತ್ತಿಗೆ ಇನ್ನಷ್ಟು ವಿಶಾಲವಾಗಿ, ಆಳವಾಗಿ ತೆರೆಯುವುದು iv) ಒಟ್ಟಾರೆ ಸಮಾಜವಾದಿ ಅಭಿವೃದ್ಧಿಯನ್ನು ಇನ್ನಷ್ಟು ವಿಸ್ತರಿಸುವುದು ಹಾಗೂ v) ಸ್ಥಿರತೆ ಕಾಪಾಡುವುದು -ಇದು ಚೀಣಾ ಕಮ್ಯುನಿಸ್ಟ್ ಪಕ್ಷದ ತಿಳುವಳಿಕೆಯ ಸಾರಾಂಶ. ಚೀಣಾದ ಕಮ್ಯುನಿಸ್ಟ್ ಮುಖಂಡರ ಪ್ರಕಾರ ಸುಧಾರಣೆಯೆಂಬುದು ಉತ್ಪಾದಕ ಶಕ್ತಿಗಳನ್ನು ಇನ್ನಷ್ಟು ಬೆಳೆಸುವುದು. ಏಕೆಂದರೆ ಬಂಡವಾಳಶಾಹಿಗಿಂತ ಸಮಾಜವಾದ ಮೇಲು ಎಂದು ಸಾಬೀತುಪಡಿಸುವಲ್ಲಿ ಇದೊಂದು ನಿರ್ಣಾಯಕರಂಗ ಎಂದು ಅವರು ಭಾವಿಸುತ್ತಾರೆ.

ಸಮಾಜವಾದಿ ಮಾರುಕಟ್ಟೆ ಆರ್ಥಿಕದ ಸ್ವರೂಪವೇನು? ಚೀಣೀ ಕಮ್ಯುನಿಸ್ಟ್ ಮುಖಂಡರ ಈ ಪ್ರಶ್ನೆಗೆ ಹೀಗನ್ನುತ್ತಾರೆ-

ಉತ್ಪಾದನಾ ಸಾಧನಗಳ ಒಡೆತನ ಪ್ರಧಾನವಾಗಿ ಸಾರ್ವಜನಿಕ ವಲಯದಲ್ಲಿರುತ್ತದೆ. ಆದರೆ ವಿವಿಧ ಸ್ವರೂಪದ ಆಸ್ತಿಗಳೂ ಬೆಳೆಯಬಹುದು. ಸಾರ್ವಜನಿಕ ವಲಯವನ್ನು ಸುಧಾರಿಸಿ ಅದನ್ನು ದೇಶದ ಆರ್ಥಿಕದ ಜೀವಾಳವಾಗಿಸುವುದು. ಖಾಸಗೀ ವಲಯಕ್ಕೆ ಸಹಾಯಕ ಪಾತ್ರ ಮಾತ್ರ.

"ಅವರವರ ಕೆಲಸಕ್ಕೆ ತಕ್ಕ ಪ್ರತಿಫಲ" ಎಂಬ ಸಮಾಜವಾದಿ ನೀತಿಯ ಪ್ರಕಾರ ಆದಾಯ ವಿತರಣೆ. ಒಂದೆ ಎಲ್ಲರಿಗೂ ಒಟ್ಟಿಗೇ ಅಭಿವೃದ್ಧಿ ಎಂಬ ನಿಲುವು ಬಿಟ್ಟು ಒಟ್ಟಾರೆ ಸರ್ವಸಾಮಾನ್ಯ ಅಭಿವೃದ್ಧಿಗೆ ಪ್ರಯತ್ನಿಸುವುದು. ಅಂದರೆ ಕೆಲವರು ಬೇಗನೇ ಸಮೃದ್ಧಿ ಪಡೆಯಬಹುದು. ಆದರೆ ಒಟ್ಟಾರೆ ಗುರಿ ಎಲ್ಲರ ಸಮೃದ್ಧಿ.

ನಕಾರಾತ್ಮಕ ಬೆಳವಣಿಗೆಯನ್ನು ಎದುರಿಸಲು

ಈ ಪ್ರಕ್ರಿಯೆಯಲ್ಲಿ ಹಲವು ಸ್ವಾಗತಾರ್ಹ ಬೆಳವಣಿಗೆಗಳಾಗಿದ್ದರೂ ಕೆಲವು ನಕಾರಾತ್ಮಕ ಬೆಳವಣಿಗೆಗಳೂ ಕಂಡು ಬಂದಿವೆ ಎಂದೂ ಚೀಣೀ ಕಮ್ಯುನಿಸ್ಟ್ ಮುಖಂಡರು ವಿವರಿಸಿದರು. ಭ್ರಷ್ಟಾಚಾರದ ಬೆಳವಣಿಗೆ ಇವರಲ್ಲೊಂದು. ಬೈಜಿಂಗ್ ಉಪ ಕಾರ್ಯಕಾರಿ ಮೇಯರ್ ಭ್ರಷ್ಟಾಚಾರದ ತನಿಖೆಯಾಗುತ್ತಿರುವಾಗಲೇ ಆತ್ಮಹತ್ಯೆ ಮಾಡಿಕೊಂಡ. ಒಬ್ಬ ಪೊಲಿಟ್ ಬ್ಯೂರೋ ಸದಸ್ಯರು ಈ ಪ್ರಶ್ನೆಯ ಮೇಲೆ ರಾಜೀನಾಮೆ ನೀಡಿದರು. ಮೇಲಿಂದ ಕೆಳಗಿನವರೆಗೆ ಪಕ್ಷ ಕಾನೂನುಬಾಹಿರವಾಗಿ ಶ್ರೀಮಂತರಾಗಲು ಪ್ರಯತ್ನಿಸುತ್ತಿರುವವರ ಮೇಲೆ ಕಣ್ಣಾವಲು ಹೆಚ್ಚಿಸಿದೆ. ಇತ್ತೀಚೆಗೆ ಪಕ್ಷದ ಕೇಂದ್ರ ಸಮಿತಿ ಕಾರ್ಯಕರ್ತರ ಹಾಗೂ ಜನತೆಯ ಸೈದ್ಧಾಂತಿಕವಾಗಿ ಶಕ್ತಿಶಾಲಿಗೊಳ್ಳುವ ಕೆಲಸದ ಮೇಲೆ ಹೆಚ್ಚು ಒತ್ತು ನೀಡುವ ನಿರ್ದಿಷ್ಟ ನಿರ್ಣಯಗಳನ್ನು ಅಂಗೀಕರಿಸಿದೆ. "ಪಕ್ಷದ ಶಿಸ್ತಿನೆದುರು ಎಲ್ಲರೂ ಸಮಾನರು" ಎಂಬ ನೀತಿಗೆ ಹಾಗೂ ಸಮಯದ ಒರೆಗಲ್ಲಲ್ಲಿ ಗಟ್ಟಿನಿಂತಿರುವ ಕಮ್ಯುನಿಸ್ಟ್ ಆದರ್ಶಗಳಿಗೆ ಬದ್ಧರಾಗಬೇಕೆಂಬ ದೃಷ್ಟಿಕೋಣವನ್ನು ಬಲಪಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಸಮಾಜವಾದಿ ಸಂಸ್ಕೃತಿಯನ್ನು ಬಲಪಡಿಸಿ ದುಡ್ಡಿನ ಆರಾಧನೆ ಹಾಗೂ ಅದರಿಂದಾಗಿ ಉಂಟಾಗುವ ಭ್ರಷ್ಟಾಚಾರ ಪ್ರವೃತ್ತಿಯನ್ನು ತಡೆಯುವ ಪ್ರಯತ್ನವೂ ನಡೆದಿದೆ.

[illegible] ಚೀಣಾ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಗೊಂಡು 74 ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಪಕ್ಷದ ಸೈದ್ಧಾಂತಿಕ ಮಟ್ಟವನ್ನು ಬಲಿಷ್ಠಗೊಳಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ೧೯೩೩ರಲ್ಲಿ ಸ್ಥಾಪನೆಗೊಂಡ ಪಕ್ಷದ ಕೇಂದ್ರ ಶಾಲೆ ಮಹತ್ವದ ಪಾತ್ರ ವಹಿಸುತ್ತಿದೆ. ವಿವಿಧ ಪಾರ್ಟಿ ಸಮಿತಿಗಳು ಆರಿಸಿ ಕಳಿಸಿದ ಕಾರ್ಯಕರ್ತರಿಗೆ ಇಲ್ಲಿ ಶಿಕ್ಷಣ ನೀಡಲಾಗುತ್ತದೆ. ವಿಶ್ವವಿದ್ಯಾಲಯದ ಪದವಿಗಳಿಗೆ ಸಮಾನವಾದ ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಮಟ್ಟದ ಪದವಿಗಳನ್ನು ಈ ಶಾಲೆ ನೀಡುತ್ತದೆ. ಹಿರಿಯ ಹಾಗೂ ಮಧ್ಯಮ ಮಟ್ಟದ ಕಾರ್ಯಕರ್ತರು, ಮಂತ್ರಿಗಳು ಹಾಗೂ ಕೇಂದ್ರ ಸಮಿತಿ ಮಟ್ಟದ ಮುಖಂಡರಿಗೆ ಹೆಚ್ಚಿನ ತರಬೇತಿಗಳನ್ನು ಈ ಶಾಲೆ ನಡೆಸುತ್ತದೆ. ಪಕ್ಷದೊಳಗೆ ಭಡ್ತಿಗೆ ಈ ಶಾಲೆಯ ಪದವಿಗಳು ಒಂದು ಅಳತೆಗೋಲು. ಈ ಶಾಲೆಯಲ್ಲಿ ಆರು ವಿಭಾಗಗಳಿದ್ದು ಒಟ್ಟು 1700 ಸಿಬ್ಬಂದಿ ಇದ್ದಾರೆ; 121 ಪ್ರಾಧ್ಯಾಪಕರು ಹಾಗೂ 178 ಉಪಪ್ರಾಧ್ಯಾಪಕರಿದ್ದಾರೆ. ಪ್ರಸ್ತುತ ವಾಸ್ತವತೆಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನ್ವಯ ಮತ್ತಿತರ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಸಂಶೋಧನೆಗಳನ್ನು ಈ ಶಾಲೆ ಕೈಗೆತ್ತಿಕೊಳ್ಳುತ್ತದೆ ಎಂದು ಚೀಣೀ ಕಮ್ಯುನಿಸ್ಟ್ ಪಕ್ಷದ ಮುಖಂಡರು ಭಾರತೀಯ ನಿಯೋಗಕ್ಕೆ ತಿಳಿಸಿದರು.

ಆರ್ಥಿಕ ಸನ್ನಿವೇಶ

ಆರ್ಥಿಕ ಸನ್ನಿವೇಶವನ್ನು ಕುರಿತಂತೆ ಮುಖ್ಯ ಸಮಸ್ಯೆಯೆಂದರೆ ಹಣದುಬ್ಬರ. ಕೈಗಾರಿಕಾ ಬೆಳವಣಿಗೆ ಕಳೆದ 3 ವರ್ಷಗಳಲ್ಲಿ 12.8ಶೇ. ಇದ್ದುದು ಹಣದುಬ್ಬರಕ್ಕೆ ಒಂದು ಕಾರಣ. ಆದ್ದರಿಂದ ಅದನ್ನು ಶೇ. 8ಕ್ಕೆ ಇಳಿಸಲಾಗುತ್ತಿದೆ. ಈ ಮೂಲಕ 21.7 ಇರುವ ಹಣದುಬ್ಬರವನ್ನು 15ಕ್ಕಿಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಚೀಣೀ ಮುಖಂಡರು ತಿಳಿಸಿದರು.

'ಮುಕ್ತ ಆರ್ಥಿಕ ವಲಯ'ಗಳು ಎಂಬುದು ಉನ್ನತ ಬೆಳವಣಿಗೆ ಕಾಣುತ್ತಿರುವ ಪ್ರದೇಶಗಳು. ಸಿಪಿಐ(ಎಂ) ನಿಯೋಗ ಈ ಪ್ರದೇಶಗಳ ಹೊರಗಡೆ ನಡೆಯುತ್ತಿರುವ ಆರ್ಥಿಕ ಚಟುವಟಿಕೆಗಳನ್ನು ನೋಡ ಬಯಸಿದಾಗ ಅದಕ್ಕೂ ವ್ಯವಸ್ಥೆ ಮಾಡಲಾಯಿತು. ಅನ್ ಹುಯಿ ಅಂತಹ ಒಂದು ಪ್ರಾಂತ್ಯ. ಇಲ್ಲಿಯ ಕೈಗಾರಿಕಾ ಬೆಳವಣಿಗೆ ದರ ಚೀಣಾದ ರಾಷ್ಟ್ರೀಯ ದರಕ್ಕಿಂತ ಕಮ್ಮಿ. ಆದರೆ ಇಲ್ಲಿ ಕೂಡಾ ಭಾರೀ ಆರ್ಥಿಕ ಚಟುವಟಿಕೆಗಳು, ಅಭಿವೃದ್ಧಿ ವಲಯಗಳು ಕಂಡು ಬಂದವು.

ಜಂಟಿ ಉದ್ದಿಮೆ ಹೇಗೆ ನಡೆಯುತ್ತಿದೆ?

ಸಾಮಾನ್ಯವಾಗಿ ಇಂತಹ ಉದ್ದಿಮೆಗಳಲ್ಲಿ ಚೀಣೀ ಪಾಲು ಶೇ. 50ಕ್ಕಿಂತ ಹೆಚ್ಚಿರುತ್ತದೆ. ಉಳಿದದ್ದು ಸಾರ್ವಜನಿಕ [illegible] ಕೆಯಿಂದ ಬರುತ್ತದೆ. ಇಲ್ಲಿ ಯಾವುದೇ ಆಸ್ತಿಯ ಶಾಶ್ವತ ಮಾರಾಟ ಇರುವುದಿಲ್ಲ, 20, 50, 70 ವರ್ಷಗಳಿಗೆ ಲೀಸ್ ಕೊಡಲಾಗುತ್ತದೆ.

ಒಂದು ಬಟ್ಟೆ ಒಗೆಯುವ ಯಂತ್ರ (ವಾಶಿಂಗ್ ಮೇಷಿನ್) ತಯಾರಿಸುವ ಜಂಟಿ ಉದ್ದಿಮೆಗೆ ಸಿಪಿಐ(ಎಂ) ನಿಯೋಗ ಭೇಟಿ ನೀಡಿತು. ಈ ಉದ್ದಿಮೆ ಜಪಾನೀ ಕಂಪೆನಿ ಸಾನ್ಯೊ ಸಹಕಾರದಿಂದ ಅತ್ಯಾಧುನಿಕ ವಾಶಿಂಗ್ ಮೇಷಿನ್ ಗಳನ್ನು ತಯಾರಿಸುತ್ತದೆ. ಚೀಣಾದ ಆಂತರಿಕ ಬೇಡಿಕೆಯ ಶೇ. 60ವನ್ನು ಅಂತರರಾಷ್ಟ್ರೀಯ ಬೆಲೆಗಳ 1/8 ಬೆಲೆಯಲ್ಲಿ ಉತ್ಪಾದಿಸುತ್ತವೆ. ಇಂತಹ ಜಂಟಿ ಉದ್ದಿಮೆಗಳ ಮೂಲಕ ಅಂತರಾಷ್ಟ್ರೀಯ ದೈತ್ಯ ಉದ್ದಿಮೆಗಳು ಲಾಭಗಳಿಸಿದರೂ ಚೀಣಾದ ಒಟ್ಟಾರೆ ಅಭಿವೃದ್ಧಿಗೂ ಇದರಿಂದ ಲಾಭವಾಗುತ್ತದೆ. ಲೀಸ್ ಅವಧಿ ಮುಗಿದ ಮೇಲೆ ಇವೆಲ್ಲಾ ಚೀಣೀ ಒಡೆತನಕ್ಕೆ ಬರುತ್ತವೆ. ಟೆಲಿವಿಷನ್ ಗಳು, ವಾಶಿಂಗ್ ಮೆಶಿನ್ ಗಳು ಹಾಗೂ ರಿಫ್ರೆಜರೇಟರುಗಳ ಈಗ ಬಹುಪಾಲು ಚೀಣೀಯರ ಮನೆಗಳಲ್ಲಿ ಸಾಮಾನ್ಯವಾಗಿ ಕಾಣಬರುತ್ತಿವೆ ಎಂಬುವನ್ನು ಗಮನಿಸಬೇಕು.

ವಿಪರೀತ ಬೆಳವಣಿಗೆಯ ಸಮಸ್ಯೆಗಳ ಅರಿವಿದೆ

ಸಿಪಿಐ(ಎಂ) ನಿಯೋಗ ಅತ್ಯುನ್ನತ ಆರ್ಥಿಕ ಬೆಳವಣಿಗೆ ಕಂಡಿರುವ ಶಾಂಘಾಯ್ ಮತ್ತು ಗುವಾಂಗ್ ಟೊಂಗ್‌ಗೂ ಭೇಟಿ ನೀಡಿತು. ಸಮಾಜವಾದೀ ಪ್ರಭುತ್ವವೊಂದು 1.3 ಕೋಟಿ ಜನಸಂಖ್ಯೆಯ ನಗರದಲ್ಲಿ ಎಲ್ಲರಿಗೂ ಆಧುನಿಕ ವಸತಿ ಕಲ್ಪಿಸಲು ಹೇಗೆ ಪ್ರಯತ್ನಿಸುತ್ತಿದೆ ಎಂಬುದು ಕಂಡು ಬಂತು. ಕಳೆದ ಮೂರು ವರ್ಷಗಳಿಂದ ಶೇ. 14 ಬೆಳವಣಿಗೆ ಕಾಣುತ್ತಿರುವ ಗುವಾಂಡೊಂಗ್‌ನಲ್ಲಿ ಸಹಜವಾಗಿಯೇ ವಲಸೆ ಸಮಸ್ಯೆಯಿದೆ. ಇದರಿಂದ ಸ್ವಲ್ಪಮಟ್ಟಿನ ನಿರುದ್ಯೋಗ ಸಮಸ್ಯೆಯೂ ಇದೆ. ಇಂತಹ ವಲಸೆ ಸಮಸ್ಯೆಗಳನ್ನು ತಪ್ಪಿಸಲು ಚೀಣಾ ಕಮ್ಯುನಿಸ್ಟ್ ಪಕ್ಷ ಇತ್ತೀಚೆಗೆ ಕೆಲವು ವರ್ಷಗಳಿಂದ ಗ್ರಾಮ ಮಟ್ಟದ ಟೌನ್‌ಶಿಪ್ ಉದ್ದಿಮೆಗಳ ಮೇಲೆ ಹೆಚ್ಚು ಒತ್ತು ನೀಡಿದೆ ಎಂದು ತಿಳಿಸಲಾಯಿತು. ಈ ಪ್ರಾಂತ್ಯದ ಹುಮೆನ್ ಎಂಬುದು ಇಂತಹ ಒಂದು ಗ್ರಾಮ. 10 ವರ್ಷಗಳ ಹಿಂದೆ ಈ ಗ್ರಾಮದಲ್ಲಿ ದೂರದವರೆಗೆ ನೋಡಿದರೂ ಒಂದು ಕಾರ್ಖಾನೆಯಿರಲಿಲ್ಲ. ಈಗ 10 ಚದುರ ಮೈಲಿ ವಿಸ್ತೀರ್ಣದ ಈ ಪ್ರದೇಶ ಅತ್ಯಾಧುನಿಕ ಉನ್ನತ ಕಟ್ಟಡಗಳಿಂದ, ಕಾರ್ಖಾನೆಗಳಿಂದ ತುಂಬಿದೆ. ಯಾವ ರೈತರ ಜಮೀನನ್ನು ಇದಕ್ಕಾಗಿ ತೆಗೆದುಕೊಳ್ಳಲಾಗಿತ್ತೋ ಅವರೀಗ ಉತ್ತಮ ಆರ್ಥಿಕ ಸ್ಥಿತಿಯಲ್ಲಿದ್ದಾರೆ ಎಂದು ಮುಖಂಡರು ತಿಳಿಸಿದರು. ಇಂತಹ ರೈತರಿಗೆ ಒಂದು ಮನೆ, 4-5 ಸದಸ್ಯರ ಕುಟುಂಬದಲ್ಲಿ ಕನಿಷ್ಠ ಇಬ್ಬರಿಗೆ ಕೆಲಸ ಹಾಗೂ ಸ್ವಂತ ಆರ್ಥಿಕ ಚಟುವಟಿಕೆ ಆರಂಭಿಸಲು ಸ್ವಲ್ಪ [illegible] ಗಿತ್ತು. ಹೀಗಿದ್ದರೂ ಇನ್ನೊಂದು ಸಮಸ್ಯೆಯಿತ್ತು. ಫಲವತ್ತಾದ ಭೂಮಿ ಈ ರೀತಿ ಬೇರೆ ಆರ್ಥಿಕ ಚಟುವಟಿಕೆಗಳಿಗೆ ಹೋಗುತ್ತಿದೆ. ಇದನ್ನು ತಡೆಯಲು ಇತ್ತೀಚೆಗೆ ಕೆಲವು ಮಾರ್ಗದರ್ಶಕ ಸೂತ್ರಗಳನ್ನು ನೀಡಲಾಯಿತು.

ಇನ್ನೊಂದೆಡೆ ಈ ರೀತಿ ಸ್ಥಳೀಯ ಉದ್ದಿಮೆಗಳ ಬೆಳವಣಿಗೆ, ಅದರಿಂದಾಗಿ ಬೇಸಾಯಕ್ಕೆ ದೊರೆಯುವ ಭೂಮಿಯಲ್ಲಾಗುವ ಕಡಿತದಿಂದಾಗಿ ತೀವ್ರ ಬೇಸಾಯ, ಸಾಮೂಹಿಕ ಬೇಸಾಯಕ್ಕೆ ಒತ್ತು ನೀಡಲಾಗುತ್ತಿದೆ. ಆಧುನಿಕ ತಂತ್ರಜ್ಞಾನವನ್ನು ಇದರಲ್ಲಿ ಬಳಸಲಾಗುತ್ತಿದೆ. ಇದರಿಂದ ವೈಯುಕ್ತಿಕ ಬೇಸಾಯದಿಂದ ಸಾಮೂಹಿಕ ಬೇಸಾಯ ಅಥವಾ ಸಹಕಾರ ಬೇಸಾಯದತ್ತ ಸಾಗುತ್ತಿದೆ. ಬೇಸಾಯ ಯೋಗ್ಯ ಭೂಮಿಯ ಶೇ. 80ಕ್ಕೂ ಹೆಚ್ಚು ನೀರಾವರಿ ಪಡೆದಿದೆ ಎಂಬುದನ್ನು ಇಲ್ಲಿ ಗಮನಿಸಬೇಕು.

ಎರಡು ಖಾಸಗಿ ಉದ್ದಿಮೆಗಳು

ಸಿಪಿಐ(ಎಂ) ನಿಯೋಗ ಭೇಟಿ ನೀಡಿದ ಎರಡು ಖಾಸಗೀ ಉದ್ದಿಮೆಗಳೂ ಕುತೂಹಲಕಾರಿಯಾಗಿದ್ದವು. ಮೊದಲನೆಯದ್ದು -ಒಂದು ಇಲೆಕ್ಟ್ರಾನಿಕ್ಸ್ ಉದ್ದಿಮೆ. ಚೀಣೀ ಟೆಲಿಕಾಂ ಜಾಲದಲ್ಲಿ ಕೆಲಸ ಮಾಡುತ್ತಿದ್ದ ನಾಲ್ಕು ಇಂಜಿನಿಯರ್‌ಗಳು ತಮ್ಮ ಉಳಿತಾಯ (ಸುಮಾರು 2000 ರೂ) ಹಾಕಿ ದಕ್ಷಿಣ ಕೊರಿಯಾ ಹಾಗೂ ಅಮೇರಿಕನ್ ಬಹುರಾಷ್ಟ್ರೀಯ ಕಂಪೆನಿಗಳ ಜಂಟಿ ಸಹಕಾರದೊಂದಿಗೆ ಆರಂಭಿಸಿದ ಕಾಂಪ್ಯಾಕ್ಟ್ ಡಿಸ್ಕ್ ತಯಾರಿಸುವ ಉದ್ದಿಮೆ. ಬ್ಯಾಂಕುಗಳು ಸಾಲ ಒದಗಿಸಿದವು. ಈಗ ಈ ಉದ್ದಿಮೆ ಚೀನೀ ಮಾರುಕಟ್ಟೆ ಶೇ. 60ಕ್ಕೆ ಧ್ವನಿ ಕ್ಯಾಸೆಟ್ ಹಾಗೂ ವಿಡಿಯೋ ಡಿಸ್ಕ್‌ಗಳನ್ನು ನೀಡುತ್ತಿದೆ. ಇನ್ನು ಐದು ವರ್ಷಗಳಲ್ಲಿ ಚೀಣಾದ ಪ್ರತಿಯೊಂದು ಮನೆಯಲ್ಲಿ ಇದನ್ನು ಬಳಸಬಲ್ಲ ಟೇಪ್ ರಿಕಾರ್ಡರ್ ಗಳು ಟಿ.ವಿ.ಗಳು ಇರುತ್ತವೆ ಯೆಂದು ಅಂದಾಜು ಮಾಡಲಾಗಿದ್ದು ಸುಮಾರು ಸತತವಾಗಿ ವಿಸ್ತರಿಸುವ ಮಾರುಕಟ್ಟೆ ಸಿಗುತ್ತದೆ ಎಂದು ಈ ಇಂಜಿನಿಯರುಗಳು

ಪುಟ 8 ನೋಡಿ

ಆಂಗ್ ಸಾನ್ ಸೂಕಿ ಬಿಡುಗಡೆ ಸ್ವಾಗತಾರ್ಹ

-ಪೊಲಿಟ್ ಬ್ಯೂರೋ

ಮ್ಯಾನ್‌ಮಾರ್‌ನ ಆಳುವ ಮಂದಿ ವಿಶ್ವ ಅಭಿಪ್ರಾಯವನ್ನು ಕಡೆಗಣಿಸಿ ಆರು ವರ್ಷಗಳ ಕಾಲ ಗೃಹಬಂಧನದಲ್ಲಿದ್ದ ಆಂಗ್ ಸಾನ್ ಸೂಕಿಯವರನ್ನು ಬೇಷರತ್ತಾಗಿ ಬಿಡುಗಡೆಗೊಳಿಸುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸ್ವಾಗತಿಸಿದೆ. ಕೊನೆಗೂ ಮ್ಯಾನ್ ಮಾರ್ ನಲ್ಲಿ ಪ್ರಜಾಪ್ರಭುತ್ವ ಪೂರ್ಣವಾಗಿ ನೆಲೆಗೊಳ್ಳುತ್ತದೆ, ಜನಗಳಿಗೆ ಅವರ ಹಕ್ಕುಗಳನ್ನು ನೀಡಲಾಗುತ್ತದೆ ಎಂದು ಪೊಲಿಟ್ ಬ್ಯೂರೋ ಆಶಿಸಿದೆ.

ಎಲ್.ಟಿ.ಟಿ.ಇ. ಮಾತುಕತೆಗೆ ಬರಬೇಕು

-ಪಿ.ಬಿ.

ಶ್ರೀಲಂಕಾದ ಸೇನಾ ಪಡೆಗಳು ಮತ್ತು ಎಲ್.ಟಿ.ಟಿ.ಇ. ನಡುವೆ ಸಶಸ್ತ್ರ ಸಂಘರ್ಷ ತೀವ್ರಗೊಂಡಿರುವುದರ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ಜಾಫ್ನಾ ತಮಿಳು ನಾಗರಿಕರು ಹಲವಾರು ಮಂದಿ ಈ ತಿಕ್ಕಾಟಗಳಿಗೆ ಬಲಿಯಾಗಿದ್ದಾರೆ, ಹಲವು ತಮಿಳರು ಮನೆ ಬಿಟ್ಟು ಹೋಗಬೇಕಾಗಿ ಬಂದಿದೆ ಎಂದು ಪತ್ರಿಕಾ ವರದಿಗಳಿಂದ ತಿಳಿದು ಬರುತ್ತಿದೆ. ಇವರ ಸಂಕಷ್ಟಗಳ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸುತ್ತಾ ಪೊಲಿಟ್ ಬ್ಯೂರೋ ಜಾಫ್ನಾದ ತಮಿಳರಿಗೆ ಸಹಾನುಭೂತಿ ವ್ಯಕ್ತಪಡಿಸಿದೆ.

ಎಲ್.ಟಿ.ಟಿ.ಇ.ಯ ಅತಾರ್ಕಿಕ ಹಾಗೂ ವಿಚ್ಛಿದ್ರಕಾರಿ ನಿಲುವಿನಿಂದಾಗಿ ಮಾತುಕತೆಗಳು ಮುರಿದು ಬಿದ್ದು ಸಂಘರ್ಷಗಳು ಮತ್ತೆ ಆರಂಭವಾಗಿವೆ ಎಂದು ಪೊಲಿಟ್ ಬ್ಯೂರೋ ಈ ಹಿಂದೆಯೇ ಹೇಳಿತ್ತು. ಈಗ ಇದರಿಂದಾಗಿ ಉತ್ತರ ಮತ್ತು ಪೂರ್ವ ಪ್ರದೇಶಗಳ ತಮಿಳು ಜನರ ಸಂಕಷ್ಟಗಳು ಹೆಚ್ಚಿವೆ.

ಈಗಲೂ ಕೂಡಾ ಎಲ್.ಟಿ.ಟಿ.ಇ.ಗೆ ಮಾತುಕತೆಗಳಿಗೆ ಮರಳಲು, ಶ್ರೀಲಂಕಾ ಸರಕಾರ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಲು ಕಾಲ ಮಿಂಚಿಲ್ಲ. ಇದರಿಂದ ಮಿಲಿಟರಿ ಸಂಘರ್ಷವನ್ನು ತಕ್ಷಣ ನಿಲ್ಲಿಸಿ ತಮಿಳು ಜನರ ಸಂಕಷ್ಟಗಳಿಗೆ ಕೊನೆಹಾಕಬಹುದು.

ತಮಿಳು ಜನಾಂಗೀಯ ಸಮಸ್ಯೆಯನ್ನು ಸಶಸ್ತ್ರ ಸಂಘರ್ಷಗಳ ಮೂಲಕ ಪರಿಹರಿಸಲು ಸಾಧ್ಯವಿಲ್ಲ. ಮಾತುಕತೆಯ ರಾಜಕೀಯ ಪ್ರಕ್ರಿಯೆಯಿಂದ ಮಾತ್ರ ಸಾಧ್ಯ ಎಂದು ಪೊಲಿಟ್ ಬ್ಯೂರೋ ತನ್ನ ನಿಲುವನ್ನು ಪುನರುಚ್ಚರಿಸಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ನಮ್ಮನ್ನು ಕಾರ್ಮಿಕರೆಂದು ಗುರುತಿಸಿ

-ಮಹಿಳಾ "ಗೃಹ ಕಾರ್ಮಿಕ"ರ ಮೊರೆ

"ನಮ್ಮನ್ನು ಕಾರ್ಮಿಕರೆಂದು ಗುರುತಿಸಿ -ನಮ್ಮನ್ನು ಅದೃಶ್ಯರನ್ನಾಗಿಟ್ಟಿರುವ ಈ ಕಬ್ಬಿಣದ ಪರದೆಯನ್ನು ಕಿತ್ತು ಹಾಕಿ"-ಇದು ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ವರ್ಕ್‌ಶಾಪ್‌ನಲ್ಲಿ ಮಹಿಳಾ "ಗೃಹ ಕಾರ್ಮಿಕರು" ಮತ್ತು ವರ್ಕ್‌ಶಾಪ್ ಸಂಘಟಿಸಿದ ಎಐಡಿಡಬ್ಲ್ಯುಎ ನೀಡಿರುವ ಕರೆ. ಜುಲೈ 2 ಹಾಗೂ 3 ರಂದು ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಮತ್ತು ಸಿಐಟಿಯು ಜತೆಗೂಡಿ ಈ ಕಾರ್ಯಾಗಾರವನ್ನು ಏರ್ಪಡಿಸಿದ್ದವು.

ದುಡಿಯುವ ಮಹಿಳೆಯರ ಸಂಯೋಜಕ ಸಮಿತಿಯ ಸಂಚಾಲಕಿ ವಿಮಲಾ ರಣದಿವೆ ಅಧ್ಯಕ್ಷತೆ ವಹಿಸಿದ್ದ ಉದ್ಘಾಟನಾ ಅಧಿವೇಶನವನ್ನುದ್ದೇಶಿಸಿ ಎಐಡಿಡಬ್ಲ್ಯುಎ ಅಧ್ಯಕ್ಷರೂ ಹಾಗೂ ಸಂಸತ್ ಸದಸ್ಯರೂ ಆದ ಸುಶೀಲಾ ಗೋಪಾಲನ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ.ಪಂಧೆ ಮತ್ತು ಭಾರತದಲ್ಲಿ ಐಎಲ್‌ಒದ ಮಹಾ ನಿರ್ದೇಶಕಿ ಶ್ರೀಮತಿ ಕಾರಸವಿಕ್ಕೆ ಮಾತನಾಡಿದರು. ಎ.ಐ.ಡಿ.ಡಬ್ಲ್ಯು.ಎ. ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ವರ್ಕ್‌ಶಾಪ್‌ನ ಪ್ರಮುಖ ಪ್ರಬಂಧವನ್ನು ಮಂಡಿಸಿದರು.

ಗಾರ್ಮೆಂಟ್, ಚರ್ಮ, ಪ್ಲಾಸ್ಟಿಕ್, ಹಪ್ಪಳ, ಬೀಡಿ, ಹೋಸೈರಿ, ಚಾಪೆ ಹೆಣೆಯುವುದು, ರೇಶ್ಮೆ ನೇಯ್ಗೆ, ಆಟಿಕೆಗಳು ಮುಂತಾದವುಗಳನ್ನು ಮನೆಯಲ್ಲಿ ಕೂತು ತಯಾರಿಸುವ ಮಹಿಳಾ ಕಾರ್ಮಿಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಇದಕ್ಕೆ ಮೊದಲು ಎ.ಐ.ಡಿ.ಡಬ್ಲ್ಯು.ಎ. ಕಾರ್ಯಕರ್ತರು ವಿಭಿನ್ನ ರಾಜ್ಯಗಳಲ್ಲಿ ನಗರಗಳಲ್ಲಿ ಮನೆಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಕುರಿತಾದ ವಿವರವಾದ ಸರ್ವೆ ನಡೆಸಿದರು. ಈ ಸರ್ವೆಗಳ ವರದಿಗಳನ್ನು ಹಾಗೂ ಕೇರಳ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶದ ಅನುಭವಗಳನ್ನು ವರ್ಕ್‌ಶಾಪ್‌ನಲ್ಲಿ ಮಂಡಿಸಲಾಯಿತು.

ಕಾರ್ಯಾಗಾರ 4 ಅಧಿವೇಶನಗಳಲ್ಲಿ ನಡೆಯಿತು. ಇವುಗಳಲ್ಲಿ ಗೃಹ ಕಾರ್ಮಿಕರ ದುಸ್ಥಿತಿ, ಅವರ ಬೇಡಿಕೆಗಳು, ಕಾನೂನಿನ ಪರಿಸ್ಥಿತಿ ಹಾಗೂ ಇವರನ್ನು ಸಂಘಟಿಸುವಲ್ಲಿನ ನಿರ್ದಿಷ್ಟ ಅಂಶಗಳನ್ನು ಚರ್ಚಿಸಲಾಯಿತು. ಈ ಚರ್ಚೆಗಳಲ್ಲಿ ಮೂಡಿ ಬಂದ ಪ್ರಧಾನ ಅಂಶಗಳೆಂದರೆ (1) ಬಹುಪಾಲು ಮಹಿಳೆಯರೇ ಇರುವ ಗೃಹಕಾರ್ಮಿಕರು ಸರ್ಕಾರದ ಅಂಕಿ-ಸಂಖ್ಯೆಗಳಲ್ಲಿ ಕಾಣಬರುವುದೇ ಇಲ್ಲ. ಉದಾಹರಣೆಗೆ ಜನಗಣತಿ ವರದಿ ಗೃಹಕೈಗಾರಿಕೆಗಳಲ್ಲಿ 70 ಲಕ್ಷ ಕಾರ್ಮಿಕರಿದ್ದಾರೆ ಎಂದು ಪಟ್ಟಿ ಮಾಡಿದೆ. ಆದರೆ ಕೇವಲ ಬೀಡಿ ಹಾಗೂ ಕೈಮಗ್ಗ ಉದ್ದಿಮೆಗಳಲ್ಲೇ 70 ಲಕ್ಷ ಕಾರ್ಮಿಕರಿದ್ದಾರೆ.

(2) ಹಲವು ದೊಡ್ಡ ಕಂಪೆನಿಗಳು ಉದಾ: ಲಖಾನಿ (ಚಪ್ಪಲಿಗಳು), ಗೋದ್ರೇಜ್ (ಕುರ್ಚಿಗಳು), ಬಿಪಿಎಲ್(ಸಣ್ಣ ಬಿಡಿಭಾಗಗಳು) ಸಿದ್ಧ ಉಡುಪು ರಫ್ತುಗಾರರು ಕೆಲಸಗಳನ್ನು ಗೃಹ ಕಾರ್ಮಿಕರಿಂದ ಮಾಡಿಸುತ್ತಾರೆ. ಎರಡು ಸರ್ವೆಗಳಿಂದ ತಿಳಿದು ಬಂತು.

(3) ಇಲ್ಲಿ ಶೋಷಣೆಯ ಪ್ರಮಾಣ ಬಹಳ ಹೆಚ್ಚು -ಏಕೆಂದರೆ ಕೂಲಿ ದರ ಅತಿ ಕಮ್ಮಿ; 8 ರಿಂದ 10 ಗಂಟೆಗಳ ಕೆಲಸಕ್ಕೆ ರೂ. 8-15ರವರೆಗೆ ಮಾತ್ರ

(4) ಮಾಲಕರು ಕಾರ್ಮಿಕ ಕಾನೂನಿನಿಂದ ತಪ್ಪಿಸಿಕೊಳ್ಳಲು ಅವಕಾಶ. ವಾಸ್ತವವಾಗಿ ಕೆಲಸದ ಜಾಗ (ಮನೆ), ವಿದ್ಯುತ್ ಇತ್ಯಾದಿಗಳಿಗೆ ಮಾಲಕರು ತೆರಬೇಕಾಗಿಲ್ಲವಾದ್ದರಿಂದ ಮಾಲಕರಿಗೇ ಸಬ್ಸಿಡಿ ನೀಡಿದಂತಾಗುತ್ತಿದೆ.

ಗೃಹ ಕಾರ್ಮಿಕರಿಗೆ ರಕ್ಷಣಾ ಕಾನೂನು ಕುರಿತಂತೆ ಐಎಲ್‌ಒ ನಿರ್ಣಯಕ್ಕೆ ಭಾರತ ಸರಕಾರ 'ಇದುವರೆಗೂ ಉತ್ತರ ನೀಡಿಲ್ಲ ಎಂಬುದು ಆಘಾತಕಾರಿ ಸಂಗತಿ ಎಂದು ಎಐಡಿಡಬ್ಲ್ಯುಎ ಪತ್ರಿಕಾ ಹೇಳಿಕೆ ತಿಳಿಸಿದೆ. ಈ ವಿಭಾಗಗಳ ಬೇಡಿಕೆಗಳತ್ತ ಗಮನ ಸೆಳೆಯಲುಒಂದು ದೊಡ್ಡ ಅಖಿಲ ಭಾರತ ಪ್ರಚಾರ-ಪ್ರಕ್ಷೋಭೆ ಆರಂಭಿಸಲು ನಿರ್ಧರಿಸಲಾಯಿತು. ಎಐಡಿಡಬ್ಲ್ಯುಎ ಮತ್ತು ಸಿಐಟಿಯು ಒಂದು ಕರಡು ಶಾಸನವನ್ನು ತಯಾರಿಸಿ ಅದನ್ನು ಸಂಸತ್ತಿನಲ್ಲಿ ಖಾಸಗೀ ಸದಸ್ಯರ ಮಸೂದೆಯಾಗಿ ಮಂಡಿಸಲಾಗುವುದು. ಅದೇ ವೇಳೆಗೆ ಎಐಡಿಡಬ್ಲ್ಯುಎ ಸಿಐಟಿಯುನ ನಿಕಟ ಸಹಯೋಗದೊಂದಿಗೆ ಈ ವಿಭಾಗಗಳನ್ನು ಪ್ರತ್ಯೇಕವಾಗಿ ಅವರ ನಿರ್ದಿಷ್ಟ ಬೇಡಿಕೆಗಳ ಮೇಲೆ ಸಂಘಟಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗುವುದು. (ಐ.ಎನ್.ಎಸ್)

ಚೀಣಾದಲ್ಲಿ ಆರ್ಥಿಕ ಸುಧಾರಣೆ

ಪುಟ 7ರಿಂದ

ಹೇಳುತ್ತಾರೆ.

ಇನ್ನೊಂದು ಜೇನುತುಪ್ಪ ಉದ್ದಿಮೆ. ಒಬ್ಬ ವ್ಯಕ್ತಿ ಆರಂಭಿಸಿದ ಉದ್ದಿಮೆ ಈಗ ಮಿಲಿಯಾಂತರ ಯುವಾನ್‌ಗಳ ಹಲವು ದೇಶಗಳಿಗೆ ರಫ್ತಾಗುತ್ತಿರುವ ಉದ್ದಿಮೆ. ಈತ ಮೊದಲು ಜೇನು ಸಾಕುವ ಹವ್ಯಾಸವಿದ್ದ ವ್ಯಕ್ತಿ. ಈತನೊಂದಿಗೆ ಮಾತನಾಡಿದಾಗ ಈಗ ಆರ್ಥಿಕ ಚಟುವಟಿಕೆಗಳಲ್ಲಿ ಸರ್ವತೋಮುಖ ಬೆಳವಣಿಗೆಯಾಗಿದ್ದು ಇಂತಹ ಲಾಭಗಳಿಸುವ ಉದ್ದಿಮೆಗಳು ಎಲ್ಲಾ ತೆರಿಗೆ ನೀಡುವುದಲ್ಲದೆ ಶಾಲೆ, ಆರೋಗ್ಯ ಸೌಲಭ್ಯಗಳು ಇತ್ಯಾದಿಗಳನ್ನು ಒದಗಿಸಲುಬದ್ಧರಾಗಿದ್ದಾರೆ ಎಂದು ತಿಳಿದು ಬಂತು.

ಸಮಸ್ಯೆಗಳ ಅರಿವು

ಇದು ಅಭಿವೃದ್ಧಿಯ ಸಕಾರಾತ್ಮಕ ಅಂಶಗಳಾದರೆ ಕೆಲವು ನಕಾರಾತ್ಮಕ ಅಂಶಗಳೂ ಇವೆ. ಇವುಗಳನ್ನು ಎದುರಿಸಬೇಕಾಗಿದೆ ಎಂಬ ಅರಿವು ಪಕ್ಷಕ್ಕಿದೆ ಎಂದು ಚೀಣೀ ಮುಖಂಡರು ತಿಳಿಸಿದರು. ಮೇಲೆ ಹೇಳಿದ ಭ್ರಷ್ಟಾಚಾರ, ವಲಸೆಯಲ್ಲದೆ ಆದಾಯದ ಅಸಮಾನತೆ ಕೂಡಾ ಇನ್ನೊಂದು ಸಮಸ್ಯೆ. ಒಟ್ಟಾರೆಯಾಗಿ ಅಭಿವೃದ್ಧಿಯಾಗಿದ್ದರೂ ಇದರ ವಿತರಣೆ ಅಸಮಾನವಾಗಿದೆ. ವಿದೇಶೀ ಅಥವಾ ಜಂಟಿ ಉದ್ದಿಮೆಗಳಲ್ಲಿ ವೇತನ ಸರಕಾರೀ ಉದ್ದಿಮೆಗಳಿಗಿಂತ 15ರಿಂದ 20 ಪಟ್ಟು. ದೊಡ್ಡ ನಗರಗಳಲ್ಲಿ ವಲಸೆಗೂ ಈ ಆದಾಯದ ಅಸಮಾನತೆ ಪ್ರಮುಖ ಕಾರಣ. ಇಂತಹ ಅಸಮಾನತೆಗಳನ್ನು ಕಮ್ಮಿಗೊಳಿಸಲು ಸರಕಾರ ಕೆಲವು ಕ್ರಮ ಕೈಗೊಂಡಿದೆ. ಕಮ್ಮಿ ಸಂಬಳದ ಸರಕಾರೀ ಉದ್ದಿಮೆಗಳ, ಇಲಾಖೆಗಳ ನೌಕರರಿಗೆ, ವಸತಿ, ಆರೋಗ್ಯ ಇತ್ಯಾದಿ ಸಾಮಾಜಿಕ ಸೌಲಭ್ಯಗಳ ಖರ್ಚು ವಿದೇಶೀ ಅಥವಾ ಜಂಟಿ ಉದ್ದಿಮೆಗಳ ನೌಕರರಿಗಿಂತ ಕಮ್ಮಿಯಿರುವಂತೆ ನೋಡಿಕೊಳ್ಳಲಾಗಿದೆ. ಉದಾಹರಣೆಗೆ ರಾಷ್ಟ್ರೀಯ ಸರಾಸರಿಗಿಂತ 4 ಪಟ್ಟು ಹೆಚ್ಚು ಸಂಬಳ ಪಡೆಯುವಾತ ತೆರಬೇಕಾದ ಮನೆಬಾಡಿಗೆಯೂ ನಾಲ್ಕು ಪಟ್ಟು ಹೆಚ್ಚಿರುತ್ತದೆ.

ಯಾವುದೇ ರೀತಿಯ ಸಾಮಾಜಿಕ ಧ್ರುವೀಕರಣ ಬೆಳೆಯದಂತೆ ನೋಡಿಕೊಳ್ಳುವುದಾಗಿ ಚೀಣೀ ಕಮ್ಯುನಿಸ್ಟ್ ಪಕ್ಷದ ಮುಖಂಡರು ಹೇಳುತ್ತಾರೆ. ಏಕೆಂದರೆ ಅಸಮಾನತೆಗಳನ್ನು ಕಮ್ಮಿ ಮಾಡಲು ಸರಕಾರ ಮಧ್ಯಪ್ರವೇಶಿಸುತ್ತದೆ. ಈಗ 100 ಕೋಟಿಗೂ ಹೆಚ್ಚು ಜನಸಂಖ್ಯೆಯಿರುವ ಚೀಣಾದಲ್ಲಿ 7 ಕೋಟಿ ಜನ ಬಡತನದ ರೇಖೆಯ ಕೆಳಗಿದ್ದು ಆರ್ಥಿಕ ಬೆಳವಣಿಗೆಯ ಪ್ರಯೋಜನ ಅವರಿಗೆ ದೊರೆತಿಲ್ಲ. ಸರಕಾರ ಮತ್ತು ಪಕ್ಷ ಈ ಬಗ್ಗೆ ನಿರ್ದಿಷ್ಟ ಯೋಜನೆಗಳನ್ನು ಹಾಕಿದ್ದು ಉನ್ನತ ಬೆಳವಣಿಗೆಯ ವಲಯಗಳು ಹಾಗೂ ಸರಕಾರದ ಇಲಾಖೆಗಳಿಗೆ ಈ ವಿಭಾಗವನ್ನು ಬಡತನದ ರೇಖೆಯ ಮೇಲಕ್ಕೆ ತರುವ ನಿರ್ದಿಷ್ಟ ಜವಾಬ್ದಾರಿಗಳನ್ನು ಕೊಡಲಾಗಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು 2000 ಇಸ್ವಿ ವೇಳೆಗೆ ಈ ಸಮಸ್ಯೆಯನ್ನು ನಿವಾರಿಸಲು ಸಾಧ್ಯ ಎಂದು ಚೀಣೀ ಕಮ್ಯುನಿಸ್ಟ್ ಪಕ್ಷದ ಮುಖಂಡರು ಹೇಳುತ್ತಾರೆ.

ಸರಕಾರ ಜವಾಬ್ದಾರಿ ತಪ್ಪಿಸಿಕೊಳ್ಳುವುದಿಲ್ಲ

ಇಲ್ಲಿ ಒಂದಂಶವಂತೂ ಎದ್ದು ಕಾಣುತ್ತದೆ. ಅದೆಂದರೆ ಸರಕಾರದ ಪಾತ್ರ. ಭಾರತದಂತೆ ಸರಕಾರ ತನ್ನ ಜವಾಬ್ದಾರಿಗಳಿಂದ ಹಿಂದಕ್ಕೆ ಸರಿದಿಲ್ಲ, ಮಾತ್ರವಲ್ಲ ಅದರ ಪಾತ್ರ ಹೆಚ್ಚಿದೆ. ಸರಕಾರದ್ದೇ ಪ್ರಧಾನ ಆರ್ಥಿಕ ಪಾತ್ರ. ಸಂಪನ್ಮೂಲಗಳನ್ನು ಒಟ್ಟುಗೂಡಿಸುವುದು, ಮೂಲಭೂತ ಸೌಕರ್ಯಗಳಿಗಾಗಿ ಬೃಹತ್ ಹಣ ಹೂಡಿಕೆ ನಡೆಸುವುದು ಸರಕಾರವೇ. ಸ್ಥೂಲವಾಗಿ ಆರ್ಥಿಕ ಚುಕ್ಕಾಣಿ ಸರ್ಕಾರದ ಕೈಯಲ್ಲೇ ಇರುತ್ತದೆ. ಆರ್ಥಿಕದ ಜೀವಾಳ, ಗ್ಯಾರಂಟಿ ಅದೇ ಹಾಗೂ ಜನಗಳಿಗೆ ಬದುಕಿನ ಮೂಲಭೂತ ಅಗತ್ಯಗಳು ಸಿಗುವಂತೆ ಸಬ್ಸಿಡಿಗಳ ಮೂಲಕ ಮಧ್ಯಪ್ರವೇಶಿಸುತ್ತದೆ.

ಒಟ್ಟಿನಲ್ಲಿ ಇಡೀ ಪ್ರಕ್ರಿಯೆಯಲ್ಲಿ ಸಕಾರಾತ್ಮಕ ಅಂಶಗಳೂ ಇವೆ, ನಕಾರಾತ್ಮಕ ಅಂಶಗಳೂ ಇವೆ. ಪಕ್ಷ ಪ್ರಜ್ಞಾಪೂರ್ವಕವಾಗಿ ತನ್ನ ಕಾರ್ಯಕರ್ತರ ಸೈದ್ಧಾಂತಿಕ ಆಧಾರವನ್ನು ಹಾಗೂ ಜನತೆಯ ಪ್ರಜ್ಞೆಯನ್ನು ಬಲಪಡಿಸಲು ಪ್ರಯತ್ನಿಸುತ್ತದೆ. ಮಾತ್ರವಲ್ಲ ನಕಾರಾತ್ಮಕ ಪ್ರವೃತ್ತಿಗಳಿಗೆ ಪ್ರೋತ್ಸಾಹ ನೀಡುವವರ ವಿರುದ್ಧ ನಿರ್ದಯ ಕ್ರಮ ಕೈಗೊಳ್ಳುತ್ತದೆ. ಚೀಣೀ ಪಕ್ಷ ಸಮಾಜವಾದವನ್ನು ಬಲಪಡಿಸಲು ಈ ಸಮಸ್ಯೆಯನ್ನು ಎದುರಿಸುತ್ತದೆ ಎಂಬ ನಿರೀಕ್ಷೆಯ ನಮ್ಮ 15ನೇ ಮಹಾಧಿವೇಶನದ ರಾಜಕೀಯ ನಿರ್ಣಯದ ಆಧಾರದ ಮೇಲೆ ನಾವು ವ್ಯಕ್ತಪಡಿಸಿದೆವು.

ಎ.ಕೆ.ಜಿ.ಯವರ ಐತಿಹಾಸಿಕ ಭಾಷಣ

ಪುಟ 5ರಿಂದ

ಈ ಹಿನ್ನೆಲೆಯಲ್ಲಿ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಆಂದೋಲನ ಮುಂದೊತ್ತಿ ಸಾಗಿದೆ. ಈ ಆಂದೋಲನದೊಡನೆ ತನ್ನ ಭಿನ್ನಾಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತಲೇ ನಮ್ಮ ಪಕ್ಷ ಅವರು ಪ್ರತಿಪಾದಿಸುವ ಪ್ರಜಾಪ್ರಭುತ್ವ ಹಕ್ಕುಗಳಿಗೆ ಬೆಂಬಲ ವ್ಯಕ್ತಪಡಿಸಿದೆ. ಆ ಆಂದೋಲನದ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಏನೇ ಇದ್ದರೂ ಸತ್ಯಾಗ್ರಹ, ಮುಷ್ಕರ, ಬಂದ್ ನಡೆಸುವ ಅವರ ಹಕ್ಕನ್ನು ನಾವು ರಕ್ಷಿಸಿದ್ದೇವೆ, ರಕ್ಷಿಸುತ್ತೇವೆ. ಇವೆಲ್ಲಾ ಜನಗಳ ಕೈಯಲ್ಲಿರುವ ನ್ಯಾಯಬದ್ಧ ಹಕ್ಕುಗಳು.

ಜಯಪ್ರಕಾಶ್ ನಾರಾಯಣ್‌ರ ನೇತೃತ್ವದಲ್ಲಿ ಆಂದೋಲನ ಚುನಾವಣೆ ಎದುರಿಸಿ ಎಂಬ ಶ್ರೀಮತಿ ಗಾಂಧಿಯವರ ಸವಾಲನ್ನು ಸ್ವೀಕರಿಸಿ ಅದಕ್ಕೆ ಸಿದ್ಧರಾಗುತ್ತಿದ್ದರೆ, ಇಂದಿರಾ ಗಾಂಧಿಯವರೇ ತೀರ್ಪಿನ ನಂತರ ಹಿಂದೇಟು ಹೊಡೆದಿದ್ದಾರೆ.............

ಕಾಂಗ್ರೆಸ್‌ನ ಅಧಿಕಾರದ ಗುತ್ತೇದಾರಿಕೆ ಬಂದಿರುವ ಬೆದರಿಕೆ, ಅದರೊಂದಿಗೆ ತನ್ನ ಪಕ್ಷದೊಳಗೆ, ಸರಕಾರದೊಳಗೆ ಶ್ರೀಮತಿ ಇಂದಿರಾಗಾಂಧಿಯವರ ಸ್ಥಾನಮಾನಕ್ಕೆ ಬಂದಿರುವ ಬೆದರಿಕೆ -ಇವು ಪ್ರಜಾಪ್ರಭುತ್ವದ ಮೇಲೆ ನಡೆದಿರುವ ಈ ಅತ್ಯಾಚಾರದ ತಕ್ಷಣದ ಕಾರಣವಾದರೆ, ಜನಸಾಮಾನ್ಯರ ನಿರ್ದಯ ದಮನ ಅದರ ದೂರಗಾಮಿ ಗುರಿ.

ಈಗ ಶ್ರೀಮತಿ ಇಂದಿರಾಗಾಂಧಿಯವರು ಜನಗಳಿಗೆ ಮೋಸಮಾಡಲು ಇಪ್ಪತ್ತಂಶದ ಕಾರ್ಯಕ್ರಮ ಮುಂದಿಟ್ಟಿದ್ದಾರೆ. ಆದರೆ ಅದರಲ್ಲಿ ಹೊಸತೇನಿದೆ? ಈ ಎಲ್ಲಾ ವರ್ಷಗಳಲ್ಲಿ ಭೂಮಿತಿ ಕಾನೂನುಗಳನ್ನು ಅನುಷ್ಠಾನಕ್ಕೆ ತರುವುದನ್ನು ತಡೆದವರಾರು?..................

......ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಮತ್ತಿತರ ಕೆಲವು ಕಮ್ಯುನಿಸ್ಟ್ ಪಕ್ಷಗಳು ಬಲಪ್ರತಿಗಾಮಿಗಳ ವಿರುದ್ಧ ಧಾಳಿಯ ಮುಖವಾಡದಿಂದ ತಮ್ಮನ್ನು ತಪ್ಪುದಾರಿಗೆಳೆಯಲು ಅವಕಾಶ ನೀಡಿದ್ದು ದುರದೃಷ್ಟಕರ.. ಕಾರ್ಮಿಕವರ್ಗಕ್ಕೆ ಶ್ರಮಿಕ ಜನತೆಗೆ ಕೆಟ್ಟ ದ್ರೋಹ ಬಗೆದ ಸಿಪಿಐ ಮಹಾರಾಣಿಯ ವಿಧೇಯ ಪ್ರತಿಪಕ್ಷ'ದಂತೆ ಇನ್ನೂ ಕಾರ್ಯನಿರ್ವಹಿಸುತ್ತಿದೆ.

ನಾವು ಎದುರಿಸುತ್ತಿರುವ ಈ ಗಂಭೀರ ಅನಾಹುತದ ವಿರುದ್ಧ ಜನರನ್ನು ಎಚ್ಚರಿಸಿ, ಸಂಘಟಿಸಿ ಈ ತುರ್ತು ಪರಿಸ್ಥಿತಿ ವಿರುದ್ಧ, ಹಲವಾರು ಹೋರಾಟ ತ್ಯಾಗ ಬಲಿದಾನಗಳಿಂದ ಪಡೆದುಕೊಂಡ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತೆ ಪಡೆಯುವ, ಶ್ರೀಮತಿ ಇಂದಿರಾ ಗಾಂಧಿ ಪ್ರಧಾನಮಂತ್ರಿ ಪದವಿಯಿಂದ ರಾಜೀನಾಮೆ ನೀಡುವಂತೆ, ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯಾಗುವಂತೆ ಮಾಡುವ ಹೋರಾಟಕ್ಕೆ ಧುಮುಕುವಂತೆ ಮಾಡುವುದು ನಮ್ಮ ಕರ್ತವ್ಯ ಎಂದು ನಾವು ಬಗೆಯುತ್ತೇವೆ. ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು, ಸದಾಶಯದ ವ್ಯಕ್ತಿಗಳು, ಉತ್ತಮ ಜೀವನಕ್ಕಾಗಿ ಹೋರಾಡುವ ಹಕ್ಕು ಜನತೆಗಿದೆ ಎಂದು ಹೇಳುವ ಆಶಿಸುವ ಎಲ್ಲರೂ ಈ ಹೋರಾಟದಲ್ಲಿ ಭಾಗಿಯಾಗಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಪದೇ ಪದೇ ಬೆಲೆತೆರಬೇಕಾಗಿ ಬಂದರೂ ನಾವು ಜನರೊಂದಿಗೆ ಅವರ ಹೋರಾಟಗಳಲ್ಲಿ ಸದಾ ಜತೆಗಿರುತ್ತೇವೆ. ಏಕೆಂದರೆ ಸಿಪಿಐ(ಎಂ)ಗೆ ಜನಗಳ ಹಿತಾಸಕ್ತಿ ಬಿಟ್ಟು ಬೇರೆ ಹಿತಾಸಕ್ತಿಯಿಲ್ಲ. ಜನರ ಹಿತಾಸಕ್ತಿಯನ್ನು ರಕ್ಷಿಸಬೇಕಾದರೆ ತುರ್ತು ಪರಿಸ್ಥಿತಿಯ ವಿರುದ್ಧ ಕೈಗೊಂಡ ಸರ್ವವ್ಯಾಪಿ ಕ್ರಮಗಳ ವಿರುದ್ಧ, ಪ್ರಜಾಪ್ರಭುತ್ವದ ಸಂಪೂರ್ಣ ನಿರಾಕರಣೆಯ ವಿರುದ್ಧ ಹೋರಾಡಬೇಕಾದ್ದು ಶೋಷಕರ ವಿರುದ್ಧ ಒಂದು ವ್ಯಾಪಕ ಐಕ್ಯ ಹೋರಾಟವಾಗಿ ಜನಗಳ ಶಕ್ತಿಯಿಂದ ನಡೆಸಬೇಕಾದದ್ದು ಅಗತ್ಯ.

ನಾವೆಂದೂ ಆಳುವ ವರ್ಗಗಳಿಗೆ ಶರಣಾಗೆವು.. ನಾವೆಂದೂ ನಮ್ಮ ದೇಶದ ಶ್ರಮಜೀವಿಗಳಿಗೆ, ಪ್ರಜಾಪ್ರಭುತ್ವ ಶಕ್ತಿಗಳಿಗೆ ವಿಶ್ವಾಸಘಾತ ಮಾಡೆವು. ಇತಿಹಾಸ ಇವನ್ನು ಸಾಬೀತು ಮಾಡುತ್ತದೆ.

ಜನತಾದರ್ಶನ ಮತ್ತು ಆಡಳಿತ ವಿಕೇಂದ್ರೀಕರಣ

ಪುಟ 1ರಿಂದ

ಪಕ್ಷದ ಎಡರಂಗ ಸರಕಾರ ಗ್ರಾಮಪಂಚಾಯತಿ ವ್ಯವಸ್ಥೆಯ ಮೂಲಕ ನಿಜವಾದ ಅಧಿಕಾರ ವಿಕೇಂದ್ರೀಕರಣ ಮಾಡಿದ್ದಾರೆ. ವಿಧಾನಸೌಧದಲ್ಲಾಗ ಬಹುದಾದ ಹೆಚ್ಚಿನ ಕೆಲಸಗಳನ್ನು ಮಾಡಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡಿದ್ದಾರೆ. ಗ್ರಾಮ ಪಂಚಾಯತಿಗಳಿಗೆ ನಿಜವಾದ ಜನಪ್ರತಿನಿಧಿಗಳು ಆರಿಸಿ ಬರುವಂತೆ ಮಾಡಿದ್ದಾರೆ. ಪಶ್ಚಿಮ ಬಂಗಾಳದ ಗ್ರಾಮ ಪಂಚಾಯತಿಗಳು ತಮ್ಮ ಪ್ರದೇಶದ ಜನರ ಎಲ್ಲ ತರದ ಸಮಸ್ಯೆಗಳನ್ನು ಯಾವ ಅಡ್ಡಿ ಆತಂಕಗಳಿಲ್ಲದೆ ಆಸೆ ಆಮಿಷಗಳಿಲ್ಲದೆ ಬಗೆಹರಿಸುತ್ತಿದ್ದಾರೆ. ತಮ್ಮ ಆಡಳಿತೆಗೊಳಪಟ್ಟಿರುವ ಅಭಿವೃದ್ಧಿ ಕೆಲಸಗಳನ್ನು ನಿರ್ಭೀಡೆಯಿಂದ, ನಿಶ್ಚಿಂತೆಯಿಂದ ಕಾರ್ಯಗತಗೊಳಿಸುತ್ತಿದ್ದಾರೆ. ಆ ಕಾರಣದಿಂದಾಗಿಯೇ ಅಲ್ಲಿಯ ಗ್ರಾಮಾಂತರದ, ಪೇಟೆ ಪಟ್ಟಣಗಳ ಜನ "ಮುಖ್ಯಮಂತ್ರಿಯವರನ್ನು ಕಾಣಬೇಕು. ಅವರಿಗೇನೇ ಮನವಿ ಅರ್ಪಿಸಬೇಕು. ದುಃಖ ದುಮ್ಮಾನಗಳು ಅವರ ಕಿವಿಗೇನೇ ಬೀಳುವಂತೆ ಮಾಡಬೇಕು" ಎಂದು ಆಶಿಸುತ್ತಿಲ್ಲ, ಅಪೇಕ್ಷೆ ವ್ಯಕ್ತ ಮಾಡುತ್ತಿಲ್ಲ. ಸ್ಥಳೀಯ ಗ್ರಾಮ ಪಂಚಾಯತಿಗಳಲ್ಲಿಯೇ, ತಾಲೂಕ ಪಂಚಾಯತಿಗಳಲ್ಲಿಯೇ ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ.

1983-85ರಲ್ಲಿ ಹೆಗಡೆ ಸರಕಾರ ನಮ್ಮ ರಾಜ್ಯದಲ್ಲಿದ್ದಾಗ, ಪಶ್ಚಿಮ ಬಂಗಾಳದ ಗ್ರಾಮ ಪಂಚಾಯತಿ ವ್ಯವಸ್ಥೆಯಿಂದ ಸ್ಫೂರ್ತಿ ಪಡೆದ ಗ್ರಾಮಾಭಿವೃದ್ಧಿ ಮಂತ್ರಿ ಅಬ್ದುಲ್ ನಜೀರ್ ಸಾಹೇಬರು ಕರ್ನಾಟಕದಲ್ಲಿ ಕೂಡಾ ಗ್ರಾಮಪಂಚಾಯತಿ ವ್ಯವಸ್ಥೆಯನ್ನು ಜಾರಿಯಲ್ಲಿ ತಂದಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಜ್ಯಾರಿಯಲ್ಲಿದೆ. ಈಗ ಜನತಾದರ್ಶನದಲ್ಲಿ ದೇವೇಗೌಡರುಗಳಾಗಲೀ ಗ್ರಾಮಪಂಚಾಯತಿ ಮಟ್ಟದಲ್ಲಿಯೇ ಜಿಲ್ಲಾ ಪಂಚಾಯತಿ, ಜಿಲ್ಲಾಧಿಕಾರಿ ಮಟ್ಟದಲ್ಲಿಯೇ ಬಗೆಹರಿಯಬೇಕಾದ ಸಮಸ್ಯೆಗಳಾಗಿವೆ. ದೇವೇಗೌಡರು ಪ್ರತಿಯೊಂದು ಜಿಲ್ಲೆಗೆ ಒಬ್ಬ ಉಸ್ತುವಾರಿ ಮಂತ್ರಿಯನ್ನು ನೇಮಿಸಿದ್ದಾರೆ. ಗ್ರಾಮಪಂಚಾಯತಿಗಳಿವೆ. ಇವರೆಲ್ಲ ಸರಿಯಾಗಿ ಕೆಲಸ ಮಾಡುವಂತಾಗಬೇಕು. ತಿಂಗಳಲ್ಲಿ 8-10 ದಿವಸಗಳಾದರೂ ಜಿಲ್ಲಾ ಉಸ್ತುವಾರಿಗಳನ್ನು ತಾನೇ ನೇರವಾಗಿ ಬಗೆಹರಿಸಬೇಕು. ಅಧಿಕಾರ ವಿಕೇಂದ್ರೀಕರಣ ತತ್ವವನ್ನು ಪಶ್ಚಿಮ ಬಂಗಾಳದಂತೆಯೇ ಇಲ್ಲಿಯೂ ಅನುಷ್ಠಾನದಲ್ಲಿ ತಂದುದಾದರೆ, ದೇವೇಗೌಡರು ಊರೂರಿಗೆ ತಿರುಗಾಡಿ ಜನರಿಂದ ಅರ್ಜಿಪಡೆಯುವ ಅಗತ್ಯವಿಲ್ಲ. ಅದೇ ಸಮಯವನ್ನು ಯೋಜನೆಗಳನ್ನು ರೂಪಿಸಲು, ಅವುಗಳನ್ನು ತ್ವರೆಯಾಗಿ ಜ್ಯಾರಿಯಲ್ಲಿ ತರಲು. ಆಡಳಿತೆಯಲ್ಲಿ ಬಿಗಿ ಮತ್ತು ಅಶಿಸ್ತು ಬರುವಂತೆ ಮಾಡಲು ಹೆಚ್ಚಿನ ಗಮನ ಹರಿಸಬಹುದಾಗಿದೆ.

ಜನರ ಸಂಪರ್ಕ ಮುಖ್ಯಮಂತ್ರಿಗೆ ಬೇಕು. ಅವರ ಕುಂದುಕೊರತೆಗಳ ಅರಿವು ಅಗತ್ಯ. ಆದರೆ ಅದರಿಂದಾಗಿ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು, ಆಡಳಿತೆಯನ್ನು ಚುರುಕುಗೊಳಿಸಲು ಎಷ್ಟು ಸಾಧ್ಯವಾದೀತೆಂದು ಈಗಲೇ ಹೇಳುವುದು ಕಷ್ಟ.

ಎರಡು ದಿವಸ ಜನತಾದರ್ಶನ ನೋಡಿ ಅಲ್ಲಿ ಬಂದ ಅರ್ಜಿಗಳನ್ನು ನೋಡಿದಾಗ ಕೆಳಮಟ್ಟದಲ್ಲಿ ಆಡಳಿತೆಯೇ ಸತ್ತು ಹೋಗಿದೆಯೋ ಎಂಬ ಭಾವನೆ ನನ್ನಲ್ಲಿ ಮೂಡಿ, ನಾವು ಕಮ್ಯುನಿಸ್ಟರು ಜನರ ಸಮಸ್ಯೆಗಳನ್ನು ತಿಳಿದುಕೊಳ್ಳುವುದರಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆ, ನಮ್ಮ ಸಂಘಟನೆ ನಮ್ಮ ಜನಸಂಪರ್ಕ ಎಷ್ಟು ಕ್ಷೀಣವಾಗಿದೆಂಬುದನ್ನು ನೋಡಿ ಮನಸ್ಸಿಗೆ ಬಹಳ ನೋವಾಯಿತು. "ನನ್ನ ಮನೆಯ ಮಹಡಿಯ ಮೇಲೆ ವಿದ್ಯುತ್ ತಂತಿ ಹೋಗಿದೆ ಎಷ್ಟು ಹೇಳಿದರೂ ಕೆ.ಇ.ಬಿ.ಯವರು ಕೇಳುತ್ತಿಲ್ಲ" ಎಂದು ಮಧ್ಯಮ ವರ್ಗದ ಗೃಹಿಣಿ ಅರ್ಜಿ ಕೊಟ್ಟು ಕೇಳಿಕೊಂಡಾಗ "ನನ್ನ ಗಂಡನನ್ನು ಕೊಂದವರನ್ನು ಪೋಲೀಸರು ರಕ್ಷಿಸುತ್ತಿದ್ದಾರೆ. ನನ್ನನ್ನೂ ಕೊಲ್ಲಬಹುದು. ರಕ್ಷಣೆ ನೀಡಿರಿ" ಎಂದು ದುಃಖದಿಂದ ಕೇಳುತ್ತಿದ್ದಾಗ "ನಾವು 20 ವರ್ಷಗಳಿಂದ ವಾಸಿಸುತ್ತಿದ್ದ ಮನೆಗಳಿಂದ ನಮ್ಮನ್ನು ಪೋಲೀಸರ ಸಹಾಯದಿಂದ ಹೊರಹಾಕುತ್ತಿದ್ದಾರೆ" ಎಂದು ಸಣ್ಣ ಕೂಸುಗಳನ್ನು ಹೊತ್ತ ಮುಸ್ಲಿಂ ಮಹಿಳೆಯರು ಕಣ್ಣೀರಿಡುವುದನ್ನು ನಾನು ನೋಡಿದಾಗ ದೇವೇಗೌಡರ ಜನತಾದರ್ಶನ ಇಂಥ ಗಂಭೀರ ದಾರುಣ, ಕರುಣಾಜನಕ ದೃಶ್ಯಗಳನ್ನು ತೋರಿಸಿಕೊಟ್ಟಂತಾಗಿದೆಂದು ಸ್ವಲ್ಪ ಸಮಾಧಾನ ಪಡುವಂತಾಯಿತು.

ಯಾವಾಗಾದರೊಮ್ಮೆ ದೇವೇಗೌಡರು ಜನತಾದರ್ಶನ ಏರ್ಪಡಿಸಲಿ. ಆದರೆ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಮಾಡಿದಂತೆ ನಿಜವಾದ ಅಧಿಕಾರ ವಿಕೇಂದ್ರೀಕರಣವನ್ನು ಗ್ರಾಮ ಪಂಚಾಯತಿ ಮೂಲಕ ಜ್ಯಾರಿಯಲ್ಲಿ ತಂದು, ಜನರ ನಿಜವಾದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ, ಆಡಳಿತೆಯನ್ನು ಚುರುಕುಗೊಳಿಸುವ ಕಾರ್ಯದತ್ತ ಹೆಚ್ಚು ಗಮನ ಹರಿಸಲಿ ಎಂದು ನಾವು ಕೇಳಿಕೊಳ್ಳುತ್ತೇವೆ.